ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೦೯
ವಿಚಾರ ಸಾಹಿತ್ಯಮಾಲೆ – ೩೦
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರಯ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ನಮ್ಮ ಮಾತೃಭೂಮಿ

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ
ಮೂಲ ಸಂಪಾದಕರು
**ಕೆ. ಎಂ. ಮುನ್ಷಿ**
**ಆರ್. ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್. ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)




# ನಮ್ಮ ಮಾತೃಭೂಮಿ

**ಆನೋ ಭದ್ರಾಃ ಕ್ರತವ್ಯೋ ಯನ್ತು ವಿಶ್ವತ:**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I. ೮೯–೧**


ಮೂಲ
**ಸ್ವಾಮಿ ವಿವೇಕಾನಂದ**
ಅನುವಾದ
**ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Namma Matribhumi :** Kannada translation of *Our Motherland* by **Swami Vivenkananda;** Kannada translation by **Dr. T.V. Venkatachala Sastri ;** Editor-in-Chief: **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxii + 51 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxii + ೫೧
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

## ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತ್ತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

(ಮನು ಬಳಿಗಾರ್)

# ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ



ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀ ಡಾ. ಟಿ.ವಿ. ವೆಂಕಟಾಚಲ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎನ್.ಎಸ್. ಶಾರದಾಪ್ರಸಾದ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ನಮ್ಮ ಮಾತೃಭೂಮಿ' ಎಂಬ ಪುಸ್ತಕ ಖ್ಯಾತ ಲೇಖಕರಾದ ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿಯವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ–೭
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

**ಕೆ. ಎಂ. ಮುನ್ಷಿ**

**Blank Page**



## ಪರಿವಿಡಿ


ಮೊದಲ ಮಾತು v
ಶುಭಾಕಾಂಕ್ಷೆ vi
ಪ್ರಾಸ್ತಾವಿಕ ನುಡಿ viii
ಪೀಠಿಕೆ x
ಅರಿಕೆ xvi
ಮೂಲ ಸಂಪಾದಕರ ಪ್ರಸ್ತಾವನೆ xvii

೧. ಅಮರಭೂಮಿ ಭಾರತ ೧
೨. ನಮ್ಮ ಚಿರಂತನ ಚಿಲುಮೆಗಳು ೧೪
೩. ಭಾರತ ಪತಿತವೇ? ೨೦
೪. ಭಾರತ ಸಾಯುವುದೇ? ೨೪
೫. ಹಸಿದವರಿಗೆ ಆಹಾರ ೨೭
೬. ಮೊದಲ ಕೊಡುಗೈತನ ೩೦
೭. ಭರವಸೆಯ ಸಂದೇಶ ೩೪
೮. ನಮ್ಮ ಮಹತ್ತರವಾದ ಋಣಭಾರ ೩೮
೯. ಬರುತ್ತಿದೆ: ಹಿಂದೆ ಎಂದಾದರೂ ಇದ್ದುದಕ್ಕಿಂತ ಮಹತ್ತರವಾದ ಭಾರತ ೪೧
೧೦. ಮರೆಯಬೇಡ ೫೦

**Blank Page**



# ನಮ್ಮ ಮಾತೃಭೂಮಿ

## ೧. ಅಮರಭೂಮಿ ಭಾರತ

ಈ ಭೂಮಿಯ ಮೇಲೆ ಪೂಜ್ಯವಾದ ಪುಣ್ಯಭೂಮಿಯಾಗಲು ತನಗೆ ಅರ್ಹತೆಯುಂಟು ಎಂದು ಹೇಳಿಕೊಳ್ಳುವ ನಾಡು ಒಂದಿದ್ದರೆ, ಈ ಭೂಮಿಯ ಮೇಲೆ ಆತ್ಮಗಳು ತಮ್ಮ ಕರ್ಮಕ್ಕೆ ಲೆಕ್ಕ ಕೊಡಬೇಕಾದ ನೆಲೆ ಎನ್ನುವುದಿದ್ದರೆ, ಭಗವನ್ಮುಖವಾಗಿ ಸಾಗುತ್ತಿರುವ ಪ್ರತಿ ಆತ್ಮವೂ ತನ್ನ ಚರಮಸ್ಥಾನವನ್ನು ತಲುಪಬೇಕಾದ ತಾಣವೊಂದಿದ್ದರೆ, ಮಾನವಕುಲ ಎನ್ನುವುದು ದಯಾಪರತೆಯತ್ತ, ಉದಾರತೆಯತ್ತ, ಪಾವಿತ್ರ್ಯದತ್ತ, ಶಾಂತತೆಯತ್ತ ಸಾಗುತ್ತ ತನ್ನ ಪರಮೋಚ್ಚಕೋಟಿಯನ್ನು ಮುಟ್ಟಿದ ಭೂಮಿಯೊಂದು ಎಲ್ಲಿಯಾದರೂ ಇದ್ದರೆ, ಎಲ್ಲಕ್ಕಿಂತ ಹೆಚ್ಚಾಗಿ ಯಾವುದು ಆತ್ಮಶೋಧನೆಯೂ ಆಧ್ಯಾತ್ಮಿಕತೆಯೂ ಕಂಡುಬರುವ ಭೂಮಿಯಾಗಿದೆಯೋ – ಅದು ಭರತಭೂಮಿ. ಆದ್ದರಿಂದಲೇ ಅದು ಪ್ರಾಚೀನಕಾಲದಿಂದಲೂ ಧರ್ಮಸಂಸ್ಥಾಪಕರು ಮೇಲಿಂದ ಮೇಲೆ ಪವಿತ್ರವೂ ನಿತ್ಯವೂ ಆದ ಪರಮಾರ್ಥವೆಂಬ ಜಲಧಾರೆಯಿಂದ ಪೃಥ್ವಿಯನ್ನು ತೋಯುವಂತೆ ಮಾಡಿದ್ದರೆ, ಆದ್ದರಿಂದಲೇ ಪೂರ್ವ ಅಥವಾ ಪಶ್ಚಿಮ, ಉತ್ತರ ಅಥವಾ ದಕ್ಷಿಣ ಎಂಬ ಸಕಲ ಪೃಥ್ವಿಯನ್ನು ವ್ಯಾಪಿಸಿದ ತತ್ತ್ವಜ್ಞಾನದ ಮಹಾತರಂಗಗಳನ್ನು ದಾಟಿ ಸಾಗಿದ್ದರೆ, ಲೋಕದ ಪ್ರಾಪಂಚಿಕ ನಾಗರಿಕತೆಯನ್ನು ಆಧ್ಯಾತ್ಮದ ಕಡೆಗೆ ತಿರುಗಿಸಲು ಮತ್ತೆ ಅಂತಹ ಅಲೆಯೇಳುವಂತೆ ಮಾಡಲೇಬೇಕು. ಬೇರೆ ನಾಡುಗಳ ಲಕ್ಷಾವಧಿ ಜನರ ಹೃದಯಗಹ್ವರಗಳನ್ನು ದಹಿಸುತ್ತಿರುವ ಪ್ರಾಪಂಚಿಕತೆಯ ಸುಡುಬೆಂಕಿಯನ್ನು ಶಮನಗೊಳಿಸಲು ಬೇಕಾದ ಜೀವಜಲಧಾರೆ ಇಲ್ಲಿದೆ. ನನ್ನ ಸಂಗಾತಿಗಳೇ, ನನ್ನನ್ನು ನಂಬಿ : ಇದು ನಡೆದೇ ನಡೆಯುತ್ತದೆ.

ಇಷ್ಟು ನಾನು ಕಂಡಿದ್ದೇನೆ. ಜನಾಂಗಗಳ ಇತಿಹಾಸದ ಅಭ್ಯಾಸಿಗಳಾಗಿರುವ ನೀವು ಸಹ ಈಗಾಗಲೇ ಅದನ್ನು ಬಲ್ಲವರಾಗಿದ್ದೀರಿ. ನಮ್ಮ ಮಾತೃಭೂಮಿಗೆ ಲೋಕ ಸಲ್ಲಿಸಬೇಕಾದ ಋಣ ಅಗಾಧವಾದ್ದು. ಅದು, ಇದು, ಯಾವುದೇ ದೇಶ ತೆಗೆದುಕೊಳ್ಳಿ, ಈ ಪ್ರಪಂಚದಲ್ಲಿ ಸಹನಶೀಲ ಹಿಂದು, ಸಾಧು ಹಿಂದುವಿಗೆ ಋಣಿಯಾಗದ ಒಂದೇ ಒಂದು ಜನಾಂಗ ಈ ಭೂಮಿಯ ಮೇಲೆ ಇಲ್ಲ. 'ಸಾಧು ಹಿಂದು' ಎನ್ನುವುದು ಕೆಲವೊಮ್ಮೆ ನಿಂದಾವಾಚಕವಾಗಿ ಬಳಸುತ್ತಿರುವ ಮಾತು. ಆದರೆ ನಿಂದಾವಾಚಕವೊಂದು ವಿಸ್ಮಯಕರ ಸತ್ಯವೊಂದನ್ನು ತನ್ನಲ್ಲಿ

ಬಚ್ಚಿಟ್ಟುಕೊಂಡಿದೆಯೆಂದರೆ, ಅದು ಸರ್ವದಾ ಭಗವಂತನ ಪುಣ್ಯಶಾಲಿ ಶಿಶು ಆದ 'ಸಾಧು ಹಿಂದು' ಎಂಬ ಈ ಶಬ್ದದಲ್ಲಿಯೇ ಎನ್ನಬೇಕು. ನಾಗರಿಕತೆಗಳು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ತಲೆಯೆತ್ತಿವೆ. ಪ್ರಾಚೀನ ಕಾಲದಲ್ಲಿಯೂ ಆಧುನಿಕ ಕಾಲದಲ್ಲಿಯೂ ಬಲಿಷ್ಠವೂ ಶ್ರೇಷ್ಠವೂ ಆದ ಜನಾಂಗಗಳಿಂದ ಉದ್ದಾಮವಾದ ಆಲೋಚನೆಗಳು ಆವಿರ್ಭವಿಸಿವೆ. ಪ್ರಾಚೀನ ಮತ್ತು ಆಧುನಿಕ ಕಾಲಗಳಲ್ಲಿ ಒಂದು ಸಮುದಾಯದಿಂದ ಇನ್ನೊಂದು ಸಮುದಾಯಕ್ಕೆ ಅದ್ಭುತವಾದ ಆಲೋಚನೆಗಳು ಸಾಗಿ ಬಂದಿವೆ. ಪ್ರಾಚೀನ ಮತ್ತು ಆಧುನಿಕ ಕಾಲಗಳಲ್ಲಿ ನಿತ್ಯಸತ್ಯದ, ಚೈತನ್ಯ ಶಕ್ತಿಯ ಬೀಜಗಳು ರಾಷ್ಟ್ರಜೀವನದ ಪ್ರವಹಣಶೀಲ ತರಂಗಗಳ ಮೂಲಕ ಹೊರಗಡೆಗೆ ತೂರಿಹೋಗಿವೆ. ಆದರೆ ನನ್ನ ಸಂಗಾತಿಗಳೇ, ಇದನ್ನು ನೀವು ಗಮನಿಸಬೇಕು. ಅದು ಆಗಿರುವುದು ರಣಕಹಳೆಗಳ ಘೋಷದೊಂದಿಗೆ ಆಗಿದೆ, ಸಜ್ಜುಗೊಂಡ ಸೈನಿಕದಳದ ಪಥಚಲನೆಯಿಂದ ಆಗಿದೆ. ಪ್ರತಿಯೊಂದು ಆಲೋಚನೆಯೂ ರಕ್ತಪಾತದಲ್ಲಿ ಅದ್ದಿ ತೆಗೆದದ್ದು; ಪ್ರತಿಯೊಂದು ಆಲೋಚನೆಯೂ ನಮ್ಮ ಲಕ್ಷಾಂತರ ಸಹಜೀವರ ನೆತ್ತರ ತೊರೆಯನ್ನು ಪ್ರಯಾಸದಿಂದ ಈಜಿ ಬಂದದ್ದು. ಪ್ರತಿಯೊಂದು ಶಬ್ದವೂ ಲಕ್ಷಾಂತರ ಜನದ ನೋವುನರಳಿಕೆಗಳನ್ನು, ತಬ್ಬಲಿಮಕ್ಕಳ ಗೋಳುಕರೆಗಳನ್ನು, ವಿಧವೆಯರ ಕಂಬನಿಯ ಧಾರೆಗಳನ್ನು ಅನುಸರಿಸಿ ಬಂದದ್ದು. ಇದು, ಎದ್ದು ತೋರುವಂತೆ ಇತರ ರಾಷ್ಟ್ರಗಳು ಕಲಿಸಿದ್ದು; ಆದರೆ ಭರತಖಂಡವು ಸಹಸ್ರಾರು ವರ್ಷಗಳಿಂದ ಶಾಂತಿಯಿಂದ ಬದುಕುತ್ತಿದೆ. ಇಲ್ಲಿ ಕ್ರಿಯಾಶೀಲತೆ ಎನ್ನುವುದು ಗ್ರೀಸ್ ದೇಶ ಕೂಡ ಇನ್ನೂ ಅಸ್ತಿತ್ವದಲ್ಲಿ ಇರಲಿಲ್ಲ ಎನ್ನುವಾಗಲೆ, ರೋಮ್ ಇನ್ನೂ ಯೋಚನೆಗೆ ಬಂದಿರಲಿಲ್ಲ ಎನ್ನುವಾಗಲೆ, ಆಧುನಿಕ ಐರೋಪ್ಯರ ಆ ಪೂರ್ವಜರು ಅರಣ್ಯಗಳಲ್ಲಿ ವಾಸಮಾಡುತ್ತ ಅರಿಮರುಳರಾಗಿದ್ದಾಗಲೆ ಕೆಲಸಮಾಡುತ್ತಿತ್ತು. ಇನ್ನೂ ಹಿಂದೆ, ಇತಿಹಾಸಕ್ಕೆ ಇನ್ನೂ ದಾಖಲೆಯೇ ಇಲ್ಲದಿದ್ದಾಗ, ಪರಂಪರೆ ಎನ್ನುವುದು ಆ ದಟ್ಟವಾದ ಭೂತಕಾಲದ ಶೂನ್ಯವನ್ನು ಇಣಿಕಿನೋಡಲೂ ಧೈರ್ಯಮಾಡದೆ ಇರುವಾಗ, ಅಲ್ಲಿಂದ ಇಲ್ಲಿಯವರೆಗೆ, ಆಲೋಚನೆಗಳ ಮೇಲೆ ಆಲೋಚನೆಗಳು ಆಕೆಯ ಕಡೆಯಿಂದ ಸಾಗಿಬಂದುವು; ಆದರೆ ಆಡಿದ ಪ್ರತಿಶಬ್ದವೂ ಹಿಂದೆ ಒಂದು ಪೂಜ್ಯತೆಯನ್ನೂ ಮುಂದೆ ಒಂದು ಶಾಂತತೆಯನ್ನೂ ಉಳ್ಳದಾಗಿದೆ. ಪ್ರಪಂಚದ ರಾಷ್ಟ್ರಗಳಲೆಲ್ಲ ನಾವು ಎಂದೂ ಆಕ್ರಮಣಶೀಲ ಜನಸಮುದಾಯವಾಗಿಲ್ಲ; ಆ ವರಪ್ರಸಾದ ನಮ್ಮ ತಲೆಯ ಮೇಲಿದೆ, ಹಾಗಾಗಿ ನಾವು ಬದುಕಿದ್ದೇವೆ.

ಅದೊಂದು ಕಾಲ ಇತ್ತು : ದೊಡ್ಡ ಗ್ರೀಕ್ ಪಡೆಗಳ ಪಥಚಲನೆಯ ಕೋಲಾಹಲಕ್ಕೆ ಪೃಥ್ವಿ ಕಂಪಿಸಿತು. ಆದರೆ, ಈಗ ಹೇಳಲು ಒಂದಾದರೂ ಕಥೆ ಉಳಿಯದ ಹಾಗೆ ಈ ಪೃಥ್ವಿಯ ಮುಖದಿಂದಲೇ ಮಾಯವಾಗಿ, ಗ್ರೀಕರ ಪ್ರಾಚೀನ ಭೂಮಿ ಅಳಿಸಿಹೋಯಿತು. ಅದೊಂದು ಕಾಲ ಇತ್ತು : ರೋಮನ್ ಗರುಡಲಾಂಛನ



ಪ್ರಪಂಚದಲ್ಲಿ ಪಡೆದುಕೊಳ್ಳಲು ಯೋಗ್ಯವಾದ್ದು ಎನ್ನುವುದು ಏನೆಲ್ಲ ಇದೆಯೋ ಅದೆಲ್ಲದರ ಮೇಲೆ ಹಾರಿ ಪಟಗುಟ್ಟುತ್ತಿತ್ತು; ಎಲ್ಲೆಲ್ಲಿಯೂ ರೋಮ್ ಅಧಿಕಾರಶಕ್ತಿ ಅನುಭವಕ್ಕೆ ಬರುತ್ತಿತ್ತು; ಮಾನವಕುಲದ ತಲೆಯ ಮೇಲೆ ಒತ್ತಿ ನಿಂತಿತ್ತು. ರೋಮ್ ಎಂಬ ಹೆಸರು ಕೇಳುತ್ತಲೇ ಲೋಕ ಕಂಪಿಸುತ್ತಿತ್ತು. ಆದರೆ ಈಗ ಕ್ಯಾಪಿಟೋಲೈಸ್ ಗಿರಿ ಹಾಳು ಅವಶೇಷಗಳ ಒಂದು ಗುಡ್ಡ, ಎಲ್ಲಿ ಸೀಸರುಗಳು ಆಳಿದರೋ ಅಲ್ಲಿ ಈಗ ಜೇಡ ಬಲೆಯನ್ನು ನೇಯುತ್ತಿದೆ. ಹೀಗೆಯೇ ಕೆಲವು ಬೇರೆ ರಾಷ್ಟ್ರಗಳು, ಅಟ್ಟಹಾಸದ, ಸೊಕ್ಕಿನ ಮೇಲ್ಮೆಯನ್ನು, ದುಷ್ಟ ರಾಷ್ಟ್ರಜೀವನವನ್ನು ಕೆಲವು ಗಂಟೆಗಳ ಕಾಲ ಮೆರೆದು, ಹೀಗೆ ಬಂದು ಹಾಗೆ ಹೋಗಿವೆ; ನೀರ ಮೇಲಣ ಗುಳ್ಳೆಗಳ ಹಾಗೆ ಮಾಯವಾಗಿವೆ. ಹೀಗೆ ಈ ರಾಷ್ಟ್ರಗಳು ಮಾನವಕುಲದ ಮುಖದ ಮೇಲೆ ತಮ್ಮ ಮಚ್ಚೆಗಳನ್ನು ಮೂಡಿಸಿವೆ. ಆದರೆ ನಾವು ಬದುಕಿದ್ದೇವೆ; ಅಲ್ಲದೆ ಇವತ್ತು ಮನು ಏನಾದರೂ ಮರಳಿ ಬಂದರೆ ಏನೂ ದಿಗ್ಭ್ರಮೆಪಡುವುದಿಲ್ಲ; ಬೇರೆ ಯಾವುದೋ ಪರದೇಶದಲ್ಲಿರುವೆನೆಂದು ಭಾವಿಸುವುದಿಲ್ಲ. ಅವೇ ಕಾನೂನುಗಳು, ಸಹಸ್ರ ಸಹಸ್ರ ವರ್ಷಗಳ ಉದ್ದಕ್ಕೆ ಚಿಂತನೆಗೊಂಡ, ಹೊಂದಿಸಿಕೊಂಡ ಕಾನೂನುಗಳು ಇಲ್ಲಿವೆ. ಶತಮಾನಗಳ ಅನುಭವದ ಹಾಗೂ ಕಾಲಘಟ್ಟಗಳ ವಿವೇಚನಾಶಕ್ತಿಯ ಫಲವಾಗಿ ಹೊರಹೊಮ್ಮಿದ, ಸಾರ್ವಕಾಲಿಕವಾಗಿ ತೋರುವ, ಅವೇ ಆಚಾರಗಳು ಇಲ್ಲಿವೆ. ದಿನಗಳು ಕಳೆದಂತೆ, ದುರದೃಷ್ಟದ ಘಾತಗಳ ಮೇಲೆ ಘಾತಗಳು ಅವುಗಳ ಮೇಲೆ ಬೀಳುತ್ತಿದ್ದರೂ, ಆ ಘಾತಗಳು ಒಂದು ಉದ್ದೇಶವನ್ನು ಮಾತ್ರ ಸಾಧಿಸುತ್ತಲಿವೆ: ಅವು ಇನ್ನೂ ಬಲಗೊಂಡಿವೆ, ಮತ್ತೂ ನಿರಂತರ ಆಗಿವೆ ಎನ್ನುವುದೇ ಆ ಸಾಧನೆ. ಅಲ್ಲದೆ ನೆತ್ತರುಕ್ಕಿ ಪ್ರವಹಿಸಲು ಮೂಲವಾದ ಹೃದಯವನ್ನು, ರಾಷ್ಟ್ರಜೀವನದ ತಲಪರಿಗೆಯನ್ನು, ಈ ಎಲ್ಲದರ ಕೇಂದ್ರಸ್ಥಾನವನ್ನು ಗುರುತಿಸಲು, ನನ್ನ ಲೋಕಾನುಭವದಿಂದ ನಾನು ಹೇಳುತ್ತಿರುವಾಗ, ನನ್ನನ್ನು ನಂಬಿ, ಅದು ಇಲ್ಲಿ ಇದೆ.

ಪ್ರಪಂಚದ ಇತರ ರಾಷ್ಟ್ರಗಳಿಗೆ ಧರ್ಮ ಎನ್ನುವುದು ಬದುಕಿನ ಅನೇಕ ಚಟುವಟಿಕೆಗಳಲ್ಲಿ ಒಂದು. ರಾಜನೀತಿ ಇದೆ; ಸಾಮಾಜಿಕಜೀವನದ ರಂಜನೆಗಳಿವೆ; ಸಂಪತ್ತು ಕೊಂಡುಕೊಳ್ಳಬಹುದಾದ, ಸಾಮರ್ಥ್ಯ ತಂದುಕೊಡಬಹುದಾದ ಸಕಲವೂ ಇದೆ. ಇಂದ್ರಿಯಗಳು ಅನುಭವಿಸಬಹುದಾದ ಎಲ್ಲವೂ ಇದೆ. ಬದುಕಿನ ಇಂಥ ವಿವಿಧ ಚಟುವಟಿಕೆಗಳ ನಡುವೆ, ಸುಖಾನುಭವದಿಂದ ವೆಗಟುಹಿಡಿದ ಇಂದ್ರಿಯಗಳನ್ನು ಇನ್ನೂ ಅಷ್ಟು ಉತ್ತೇಜಿಸುವುದು ಏನಾದರೂ ಉಂಟೇ ಎಂದು ಹುಡುಕಾಡುತ್ತ, ಈ ಎಲ್ಲದರ ನಡುವೆಯೇ ಬಹುಶಃ ಒಂದಿಷ್ಟು ಧರ್ಮ ಎನ್ನುವುದೂ ಅಲ್ಲಿದೆ. ಆದರೆ ಇಲ್ಲಿ, ಭಾರತದಲ್ಲಿ, ಧರ್ಮ ಎನ್ನುವುದು ಬದುಕಿನ ಒಂದು, ಒಂದೇ ಒಂದು ಚಟುವಟಿಕೆಯಾಗಿದೆ. ಚೀನಾ–ಜಪಾನಿ ಯುದ್ಧದ ಸಂಗತಿ ನಿಮ್ಮಲ್ಲಿ ಎಷ್ಟು

ಜನಕ್ಕೆ ತಿಳಿದಿದೆ? ತಿಳಿದಿದ್ದರೆ, ಎಲ್ಲೋ ಕೆಲವರಿಗೆ ತಿಳಿದಿರಬಹುದು. ಪಾಶ್ಚಾತ್ಯ ಸಮಾಜದ ಪರಿವರ್ತನೆಗೆ ಪ್ರಯತ್ನಿಸುತ್ತಿರುವ ಅಗಾಧ ರಾಜಕೀಯ ಹಾಗೂ ಸಾಮಾಜಿಕ ಚಲನವಲನಗಳು ನಡೆಯುತ್ತಿವೆ ಎನ್ನುವುದು ನಿಮ್ಮಲ್ಲಿ ಎಷ್ಟು ಜನಕ್ಕೆ ತಿಳಿದಿದೆ? ತಿಳಿದಿದ್ದರೆ ಎಲ್ಲೋ ಕೆಲವರಿಗೆ ತಿಳಿದಿರಬೇಕು. ಆದರೆ ಅಮೆರಿಕೆಯಲ್ಲಿ ಸರ್ವಧರ್ಮಸಮ್ಮೇಳನವೊಂದು (Parliament of Religions) ನಡೆಯಿತು. ಅಲ್ಲಿಗೆ ಒಬ್ಬ ಹಿಂದು ಸನ್ಯಾಸಿಯನ್ನು ಕಳಿಸಿಕೊಟ್ಟಿದ್ದರು ಎಂಬ ಸಂಗತಿ ಇಲ್ಲಿಯ ಒಬ್ಬ ಕೂಲಿಗೆ ಸಹ ಗೊತ್ತಿತ್ತು ಎನ್ನುವುದು ನನ್ನ ಗಮನಕ್ಕೆ ಬಂದಾಗ ನನಗೆ ಆಶ್ಚರ್ಯವಾಯಿತು. ಗಾಳಿ ಎತ್ತ ಕಡೆ ಬೀಸುತ್ತಿದೆ, ರಾಷ್ಟ್ರಜೀವನ ಎಲ್ಲಿದೆ ಎನ್ನುವುದನ್ನಿದು ತೋರಿಸುತ್ತದೆ. ನಾನು ಪ್ರಪಂಚ ಸುತ್ತುವ ಪ್ರವಾಸಿಗಳ, ವಿಶೇಷವಾಗಿ ವಿದೇಶದವರ, ಪುಸ್ತಕಗಳನ್ನು ಓದುವ ಅಭ್ಯಾಸ ಇರುವವನು. ಅವರು ಈ ಪೂರ್ವದೇಶಗಳ ಜನ ಸಮುದಾಯದ ಅಜ್ಞಾನಕ್ಕೆ ಮರುಕಪಟ್ಟಿದ್ದಾರೆ. ಆದರೆ ಅದು ಭಾಗಶಃ ಸತ್ಯ. ಭಾಗಶಃ ಸತ್ಯವಲ್ಲ ಎನ್ನುವುದನ್ನು ನಾನು ಕಂಡುಕೊಂಡಿದ್ದೇನೆ. ನೀವು ಒಬ್ಬ ಇಂಗ್ಲೆಂಡ್ ಅಥವಾ ಅಮೆರಿಕ, ಫ್ರಾನ್ಸ್ ಅಥವಾ ಜರ್ಮನಿದೇಶದ ರೈತಾಪಿ ಮನುಷ್ಯನನ್ನು "ನೀನು ಯಾವ ಪಕ್ಷಕ್ಕೆ ಸೇರಿದವನು?" ಎಂದು ಕೇಳಿದರೆ, ತಾನು ತೀವ್ರಗಾಮಿ ಪಕ್ಷದವನು (Radical) ಎಂದೋ ಸಂಪ್ರದಾಯವಾದಿ ಪಕ್ಷದವನು (Conservative) ಎಂದೋ ನಿಮಗೆ ಹೇಳಿಯಾನು, ಅಲ್ಲದೆ ತಾನು ಯಾರಿಗೆ ಮತ ಚಲಾಯಿಸುವುದು ಎಂದೂ ಹೇಳಿಯಾನು. ಅಮೆರಿಕೆಯಲ್ಲಿಯಾದರೆ, ತಾನು ರಿಪಬ್ಲಿಕನ್ನೇ ಡೆಮಾಕ್ರೇಟೇ ಹೇಳುತ್ತಾನೆ. ಅಲ್ಲದೆ, ಸ್ವಲ್ಪವಾದರೂ ಅವನಿಗೆ ತಿಳಿದಿರುತ್ತದೆ. ಆದರೆ ಅವನ ಧರ್ಮದ ವಿಚಾರವಾಗಿ ಅವನನ್ನು ಕೇಳಿದರೆ, ತಾನು ಚರ್ಚಿಗೆ ಹೋಗುವವನೆಂದೂ ಇಂಥ ಪಂಥಕ್ಕೆ ಸೇರಿದವನು ಎಂದೂ ನಿಮಗೆ ಹೇಳಬಹುದು. ಅವನಿಗೆ ಗೊತ್ತಿರುವುದು ಅಷ್ಟೇ. ಅಷ್ಟು ಸಾಕು ಎನ್ನುವುದು ಅವನ ಭಾವನೆ.

ಈಗ, ಭಾರತದ ವಿಷಯಕ್ಕೆ ಬಂದರೆ, ಹೊಲವುಳುವ ನಮ್ಮ ಒಬ್ಬ ರೈತಾಪಿ ಮನುಷ್ಯನನ್ನು "ನಿನಗೆ ನಮ್ಮ ರಾಜಕೀಯದ ವಿಷಯ ಏನಾದರೂ ಗೊತ್ತೇ?" ಎಂದು ಕೇಳಿದರೆ, ಅವನು "ಹಾಗೆಂದರೆ ಏನು?" ಎಂದು ನಿಮ್ಮನ್ನೇ ಕೇಳುತ್ತಾನೆ. ಅವನಿಗೆ ಸಮಾಜವಾದಿ ಸಿದ್ಧಾಂತದ ಚಳವಳಿಗಳು, ಬಂಡವಾಳ, ದುಡಿಮೆ, ಇವುಗಳ ನಡುವಣ ಸಂಬಂಧ ಇಂಥ ಯಾವ ವಿಷಯವೂ ಅರ್ಥವಾಗುವುದಿಲ್ಲ. ತನ್ನ ಜೀವನದಲ್ಲಿ ಇಂಥ ವಿಷಯಗಳನ್ನು ಅವನು ಎಂದೂ ಕೇಳಿದವನೇ ಅಲ್ಲ. ಕಷ್ಟಪಟ್ಟು ದುಡಿಯುತ್ತಾನೆ, ತನ್ನ ಅನ್ನವನ್ನು ತಾನೇ ಗಳಿಸಿಕೊಳ್ಳುತ್ತಾನೆ. ಆದರೆ ಅವನನ್ನು "ನಿನ್ನ ಧರ್ಮ ಯಾವುದು?" ಎಂದು ಕೇಳಿದರೆ, ಅವನು, "ಸ್ವಾಮಿ, ಇಲ್ಲಿ ನೋಡಿ, ನನ್ನ ಹಣೆಯ ಮೇಲೆ ಲಾಂಛನವಿದೆ" ಎನ್ನುತ್ತಾನೆ. ಧರ್ಮಸಂಬಂಧವಾದ ಪ್ರಶ್ನೆಗಳಿಗೆ ಅವನು ಒಂದೋ ಎರಡೋ ಒಳ್ಳೆಯ ಸಲಹೆ–ಸೂಚನೆಗಳನ್ನು ಕೊಡುತ್ತಾನೆ.



ಇದು ನನ್ನ ಅನುಭವಕ್ಕೆ ಬಂದ ವಿಷಯ; ನಮ್ಮ ರಾಷ್ಟ್ರದ ಜೀವಾಳ.

ವ್ಯಕ್ತಿಗಳಲ್ಲಿ ಪ್ರತಿಯೊಬ್ಬರಿಗೂ ಅವರದೇ ಆದ ವಿಶಿಷ್ಟಲಕ್ಷಣಗಳಿರುತ್ತವೆ. ಪ್ರತಿಯೊಬ್ಬನೂ ಬೆಳೆವಣಿಗೆಗೆ ತನ್ನದೇ ವಿಧಾನವನ್ನು ಹಿಡಿದಿರುತ್ತಾನೆ. ನಾವು, ಹಿಂದುಗಳು ಹೇಳುವ ಹಾಗೆ, ಅಸಂಖ್ಯ ಪೂರ್ವಜನ್ಮಗಳ ಕಾರಣವಾಗಿ, ಹಿಂದೆ ಮಾಡಿದ ಕರ್ಮಗಳ ಫಲವಾಗಿ ಅವನ ಸ್ವಂತ ಬದುಕು ಹೀಗೆಯೇ ಎಂದು ಗೊತ್ತಾಗಿರುತ್ತದೆ. ಆ ಎಲ್ಲ ಹಳೆಯದನ್ನೂ ಹೊತ್ತು ಈ ಲೋಕಕ್ಕೆ ಅವನು ಬಂದಿರುತ್ತಾನೆ. ಆ ಅಪರಿಮಿತವಾದ ಹಳೆಯದು ವರ್ತಮಾನದತ್ತ ಒಯ್ದು ತಂದಿದೆ. ಈಗ ಈ ವರ್ತಮಾನವನ್ನು ಯಾವ ದಾರಿಯಲ್ಲಿ ಒಯ್ಯುವೆವು ಎನ್ನುವುದರ ಮೇಲೆ ಭವಿಷ್ಯ ರೂಪಗೊಳ್ಳುತ್ತದೆ. ಹೀಗೆ ಈ ಲೋಕದಲ್ಲಿ ಹುಟ್ಟುವ ಪ್ರತಿಯೊಬ್ಬರಿಗೂ ಒಂದು ತಿರುವು, ಹೋಗಬೇಕಾದ ಒಂದು ದಿಕ್ಕು ಎನ್ನುವುದು ಇರುತ್ತದೆ. ಅವನು ಆ ಪ್ರಕಾರ ಬಾಳುವೆ ಮಾಡುತ್ತಾನೆ. ವ್ಯಕ್ತಿಯ ವಿಷಯದಲ್ಲಿ ಇದು ಎಷ್ಟರಮಟ್ಟಿಗೆ ನಿಜವೋ ಜನಾಂಗದ ವಿಷಯಕ್ಕೆ ಕೂಡ ನಿಜ. ಪ್ರತಿಯೊಂದು ಜನಾಂಗವೂ, ಹೀಗೆಯೇ, ಲೋಕಜೀವನದಲ್ಲಿ ಪೂರೈಸಬೇಕಾದ ಒಂದು ಅನನ್ಯವಾದ ತಿರುವನ್ನು, ಅನನ್ಯವಾದ ಮೂಲೋದ್ದೇಶವನ್ನು (raison etre), ಅನನ್ಯವಾದ ಧ್ಯೇಯವನ್ನು ಹೊಂದಿರುತ್ತದೆ. ಪ್ರತಿಯೊಂದು ಜನಾಂಗವೂ ತನ್ನದೇ ಧ್ಯೇಯವನ್ನು ಪೂರೈಸಿಕೊಳ್ಳಲು ತನ್ನದೇ ಫಲಪರಿಣಾಮವನ್ನು ಮಾಡಿಕೊಳ್ಳಬೇಕು. ರಾಜಕೀಯ ಮೇಲ್ಮೆ ಅಥವಾ ಸೈನ್ಯಕೀಯ ಸಾಮರ್ಥ್ಯ ಇವು ಎಂದೂ ನಮ್ಮ ಜನಾಂಗದ ಧ್ಯೇಯಾದರ್ಶವಾಗಿರಲಿಲ್ಲ; ಎಂದೂ ಇರಲಿಲ್ಲ. ನಾನು ಮಾತುಗಳನ್ನು ಲಕ್ಷಿಸಿ: ಎಂದೂ ಇರುವುದೂ ಇಲ್ಲ. ನಮ್ಮ ಜನಾಂಗಕ್ಕೆ ಗೊತ್ತಾಗಿರುವ ಬೇರೆಯೇ ಧ್ಯೇಯಾದರ್ಶಗಳುಂಟು. ಅವೆಂದರೆ: ಜನಾಂಗದ ಎಲ್ಲ ರೀತಿಯ ಆಧ್ಯಾತ್ಮಿಕ ಚೈತನ್ಯಶಕ್ತಿಯನ್ನು ಒಂದು ರೀತಿಯಲ್ಲಿ ಒಂದು ಶಕ್ತಿಕೇಂದ್ರವಾಗಿ (dynamo) ಕಾದಿರಿಸುವುದು, ಕಾಪಾಡಿಕೊಳ್ಳುವುದು, ಬೆಳಸುತ್ತಿರುವುದು; ಆ ಒಗ್ಗೂಡಿಸಿದ ಚೈತನ್ಯಶಕ್ತಿ ಲೋಕಕ್ಕೆ ಪ್ರಶಮನಸಂದರ್ಭಗಳ ಆವಶ್ಯಕತೆ ಬಿದ್ದಾಗ ಪ್ರವಾಹರೂಪದಲ್ಲಿ ಹರಿಯುವಂತೆ ಮಾಡುವುದು. ಪಾರಸಿಕನೋ ಅಥವಾ ಗ್ರೀಕನೋ ರೋಮನನೋ, ಅರಬನೋ ಆಂಗ್ಲನೋ ತನ್ನ ಸೈನ್ಯದ ದಳಗಳನ್ನು ತಾನು ನಡಸುತ್ತಿರಲಿ, ಜಗತ್ತನ್ನೇ ಗೆಲ್ಲಲಿ, ಬೇರೆ ಬೇರೆ ರಾಷ್ಟ್ರಗಳನ್ನು ಬೇಕಾದರೆ ಒಂದಾಗಿ ಬೆಸೆಯಲಿ, ಭಾರತದ ತತ್ತ್ವಜ್ಞಾನ ಆಧ್ಯಾತ್ಮಿಕತೆಗಳು ಹೊಸದಾಗಿ ತೆಗೆದ ಪ್ರಣಾಲಿಗಳ ಮೂಲಕ ವಿವಿಧ ರಾಷ್ಟ್ರಗಳ ರಕ್ತನಾಳಗಳಿಗೆ ಹರಿಯುವುದಕ್ಕೆ ಸರ್ವದಾ ಸಿದ್ಧವಾಗಿರುತ್ತವೆ. ಹಿಂದುವಿನ ಪ್ರಸನ್ನವಾದ ಮೆದುಳು ಮಾನವಪ್ರಗತಿಯ ಒಟ್ಟು ಮೊತ್ತಕ್ಕೆ ತನ್ನದೇ ಆದ ಪ್ರಮಾಣವನ್ನು ತುಂಬಿಸುವುದಾಗಬೇಕು. ಪ್ರಪಂಚಕ್ಕೆ ಭಾರತದ ಕಾಣಿಕೆಯೆಂದರೆ, ಜೀವಜ್ಯೋತಿಯಾದ ಆಧ್ಯಾತ್ಮಿಕತೆ.

ಹೀಗೆ, ಹಿಂದೆ ಪ್ರಪಂಚದ ವಿವಿಧಜನಾಂಗಗಳನ್ನು ಒಂದುಗೂಡಿಸುತ್ತ ಒಂದು

ಮಹಾನ್ ವಿಜಿಗೀಷುವಾದ ರಾಷ್ಟ್ರ ಯಾವಾಗ ಯಾವಾಗ ಮೇಲೆದ್ದಿತೋ, ಹಾಗೆಯೇ ಅದು ಭಾರತವನ್ನು ಅದರ ಏಕಾಕಿತನದಿಂದ, ಪ್ರಪಂಚದ ಉಳಿದ ಭಾಗಗಳಿಂದ ದೂರವುಳಿದಿದ್ದ ವಿವಿಕ್ತತೆಯಿಂದ (ಆದರೆ ಅದು ಮತ್ತೆ ಮತ್ತೆ ಅಲ್ಲಿಗೇ ತನ್ನನ್ನು ಸೆಳೆದುಕೊಂಡಿದೆ) ದೂರಮಾಡುತ್ತಿದ್ದಿತೋ, ಅಂಥ ವಿದ್ಯಮಾನವನ್ನು ತರಲಾಯಿತೋ, ಆಗ ಅದರ ಪರಿಣಾಮವೆಂದರೆ, ಭಾರತೀಯ ಆಧ್ಯಾತ್ಮಿಕ ವಿಚಾರಗಳೂ ಪ್ರಪಂಚವನ್ನು ತುಂಬಿ ಸೂಸುವಂತಾಯಿತು ಎನ್ನುವುದು. ನಾವು ಇದನ್ನು ಚರಿತ್ರೆಯಲ್ಲಿ ಓದಿ ತಿಳಿದಿದ್ದೇವೆ. ಈ ಶತಮಾನದ ಆರಂಭದಲ್ಲಿ ಮಹಾಜರ್ಮನ್ ತತ್ತ್ವಜ್ಞಾನಿ ಷೋಪೆನ್‌ಹೌರ್ ಒಂದು ಹಳೆಯ ಭಾಷಾಂತರದಿಂದ ಪರ್ಷಿಯನ್ ಭಾಷೆಗೆ ಬಂದ, ಅಲ್ಲಿಂದ ಒಬ್ಬ ಯುವ ಫ್ರೆಂಚ್ ಮನುಷ್ಯನಿಂದ ಲ್ಯಾಟಿನ್ನಿಗೆ ಪರಿವರ್ತನೆಗೊಂಡ, ಅಷ್ಟೇನೂ ಒಳ್ಳೆಯದಾಗಿರದ ವೇದಗಳ ಭಾಷಾಂತರವಿಟ್ಟುಕೊಂಡು ಅವನ್ನು ಅಭ್ಯಾಸಮಾಡಿದ ಮೇಲೆ ಹೀಗೆ ಹೇಳುತ್ತಾನೆ: "ಇಡೀ ವಿಶ್ವದಲ್ಲಿ ಉಪನಿಷತ್ತುಗಳ ಹಾಗೆ ಉಪಕಾರಕವಾದ, ಉನ್ನತವಾದ ನೆಲೆಗೆ ಒಯ್ಯುವ ಅಧ್ಯಯನವೇ ಇಲ್ಲ. ಅವು ನನ್ನ ಬದುಕಿನ ಸಾಂತ್ವನವಾಗಿದೆ. ನನ್ನ ಸಾವಿನಲ್ಲಿ ಸಾಂತ್ವನವಾಗುತ್ತದೆ." ಈ ಉದ್ದಾಮ ಜರ್ಮನ್ ಸಂತನು ನುಡಿದ ಭವಿಷ್ಯವೆಂದರೆ: "ಗ್ರೀಕ್ ವಾಙ್ಮಯದ ಪುನರುಜ್ಜೀವನ ಕಂಡುದಕ್ಕಿಂತ ಹೆಚ್ಚು ವ್ಯಾಪಕವಾದ, ಹೆಚ್ಚು ಶಕ್ತಿಶಾಲಿಯಾದ ವಿಚಾರ ಕ್ರಾಂತಿಯನ್ನು ವಿಶ್ವ ಇಷ್ಟರಲ್ಲೇ ನೋಡಲಿದೆ." ಇಂದು ಆತನ ಭವಿಷ್ಯವಾಣಿ ನಿಜವಾಗಲಿದೆ. ಕಣ್ಣು ತೆರೆದು ನೋಡುವವರು, ಪಶ್ಚಿಮದ ವಿವಿಧ ರಾಷ್ಟ್ರಗಳ ಮನೋಭೂಮಿಕೆಗಳಲ್ಲಿ ನಡೆಯುವ ಕ್ರಿಯಾಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳುವವರು, ಚಿಂತಕರಾಗಿ ವಿವಿಧರಾಷ್ಟ್ರಗಳ ಬಗೆಗೆ ಅಧ್ಯಯನ ಮಾಡುವವರು ದನಿಯಲ್ಲಿ, ಕ್ರಮದಲ್ಲಿ, ವಿಧಾನಗಳಲ್ಲಿ ಹಾಗೂ ವಿಶ್ವಸಾಹಿತ್ಯದಲ್ಲಿ ಈ ಭಾರತೀಯ ವಿಚಾರದ ನಿಧಾನಗತಿಯ, ಅವಿರಾಮಶೀಲವಾದ ಅಂತರ್ವ್ಯಾಪನೆಯಿಂದ ಉಂಟಾದ ಅಗಾಧವಾದ ಪರಿವರ್ತನೆಯನ್ನು ಗುರುತಿಸಬಲ್ಲರು.

ಆದರೆ ಈಗಾಗಲೇ ನಾನು ಸೂಚಿಸಿರುವಂತೆ ಇನ್ನೊಂದು ವೈಲಕ್ಷಣ್ಯವುಂಟು. ನಾವು ಎಂದೂ ನಮ್ಮ ವಿಚಾರಗಳನ್ನು ಮದ್ದುಗುಂಡುಗಳ ಬಲದಿಂದ, ಖಡ್ಗದ ಸಹಾಯದಿಂದ ಬೋಧಿಸಿದವರಲ್ಲ. ವಿಶ್ವಕ್ಕೆ ಭಾರತ ಕೊಟ್ಟ ಕೊಡುಗೆಯನ್ನು ವಿವರಿಸಲು ಆಂಗ್ಲಭಾಷೆಯಲ್ಲಿ ಶಬ್ದವೊಂದು ಇರುವುದಾದರೆ, ಭಾರತೀಯಸಾಹಿತ್ಯ ಮನುಷ್ಯಜಾತಿಯ ಮೇಲೆ ಉಂಟುಮಾಡುವ ಪರಿಣಾಮವನ್ನು ಪ್ರಕಟಿಸಲು ಆಂಗ್ಲಭಾಷೆಯಲ್ಲಿ ಶಬ್ದವೊಂದು ಇರುವುದಾದರೆ, ಆ ಒಂದು ಶಬ್ದವೇ "ವಶೀಕರಣ" ("Fascination"). ನಿಮ್ಮನ್ನು ಕೂಡಲೇ ವಶಪಡಿಸಿಕೊಳ್ಳುವುದು ಏನಾದರೂ ಇದ್ದರೆ, ಅದಕ್ಕೆ ವಿರುದ್ಧವಾದ್ದು ಇದು. ನಿಜವಾಗಿ ಹೇಳಬೇಕೆಂದರೆ, ಅದು



ಅಗೋಚರವಾಗಿ ಒಂದು ಸಮ್ಮೋಹನವನ್ನು ನಿಮ್ಮ ಮೇಲೆ ಬೀಸಿರುತ್ತದೆ. ಬಹಳ ಜನಕ್ಕೆ ಭಾರತೀಯ ವಿಚಾರ, ಭಾರತೀಯ ವರ್ತನೆಗಳು, ಭಾರತೀಯ ಆಚಾರಗಳು, ಭಾರತೀಯ ತತ್ತ್ವಜ್ಞಾನ, ಭಾರತೀಯ ಸಾಹಿತ್ಯ ಎನ್ನುವುದು ಮೊದಲ ನೋಟಕ್ಕೆ ಅನಿಷ್ಟಕರವಾಗಿ ತೋರುತ್ತವೆ. ಆದರೆ ಅವರು ತಮ್ಮ ಆಸಕ್ತಿಯನ್ನು ಹಿಡಿದಿಟ್ಟುಕೊಳ್ಳಲಿ, ಓದಲಿ, ಈ ಭಾವನೆಗಳಲ್ಲಿ ಹುದುಗಿರುವ ಮಹಾತತ್ತ್ವಗಳನ್ನು ಪರಿಚಯ ಮಾಡಿಕೊಳ್ಳಲಿ. ಆಗ ನೂರಕ್ಕೆ ತೊಂಬತ್ತೊಂಬತ್ತರಷ್ಟು ಮಟ್ಟಿಗೆ ಅವರು ಆಕರ್ಷಿತರಾಗಿರುತ್ತಾರೆ. ಪರಿಣಾಮವೆಂದರೆ, ವಶೀಕರಣವೇ. ವಿಚಾರಪ್ರಪಂಚದ ಮೇಲೆ, ಬೆಳಗಿನ ವೇಳೆ ಮೃದುವಾದ ಮಂಜಿನ ಹನಿ ಬೀಳುವ ಹಾಗೆ, ಮೆಲ್ಲಗೆ, ಮಾತಿಲ್ಲದೆ, ಕಾಣಿಸದೆ, ಕೇಳಿಸದೆ, ಆದರೂ ಅತ್ಯಗಾಧವಾದ ಪರಿಣಾಮವನ್ನು ಅದು ಉಂಟುಮಾಡಿರುತ್ತದೆ – ಈ ಪ್ರಶಾಂತ, ಸಹನಶೀಲ, ಸರ್ವದುಃಖಸಹಿಷ್ಣು ಆದ ಈ ಆಧ್ಯಾತ್ಮಿಕ ಜನಾಂಗ.

ಚರಿತ್ರೆ ಮತ್ತೊಮ್ಮೆ ಪುನರಾವರ್ತನೆಗೊಳ್ಳುತ್ತದೆ. ಏಕೆಂದರೆ, ಆಧುನಿಕವಿಜ್ಞಾನದ ಕಣ್ಣುಕುಕ್ಕುವ ಬೆಳಕಿನಲ್ಲಿ ಹಳೆಯವಾದ, ಬಲಿಷ್ಠವೂ ಘಾಸಿಗೊಳ್ಳದವೂ ಆಗಿ ತೋರುವ ನಂಬಿಕೆಗಳ ಅಡಿಪಾಯವೇ ಕುಸಿದುಹೋಗುತ್ತಿರುವಾಗ, ವಿವಿಧ ಪಂಥಗಳು ಮಾನವ ಕುಲಕ್ಕೆ ತಮ್ಮ ನಿಷ್ಠೆಯನ್ನು ಪ್ರಕಟಿಸುವಲ್ಲಿ ವಿಶೇಷವೆಂದು ಹೇಳಿಕೊಳ್ಳುವ ಸಮರ್ಥನೆಗಳೆಲ್ಲ ನುಚ್ಚುನೂರಾಗಿ ಗಾಳಿಗೆ ತೂರಿಹೋಗುತ್ತಿರುವಾಗ, ಹೊಸ ಕಾಲದ ಪುರಾಣಗ್ರಂಥಶೋಧನೆಗಳು ಎಲ್ಲ ವಿಧದ ಹಳಗಾಲದ ಸಂಪ್ರದಾಯಗಳನ್ನೂ ಪಿಂಗಾಣಿ ಚೂರುಗಳ ರಾಶಿಯನ್ನು ಅರೆದು ಹಿಟ್ಟುಮಾಡುವ ಹಾಗೆ ಬಡಿದಿಕ್ಕುತ್ತಿರುವಾಗ, ಪಶ್ಚಿಮದಲ್ಲಿ ಧರ್ಮ ಎನ್ನುವುದು ತಿಳಿಗೇಡಿಗಳ ಕೈಗಳಲ್ಲಷ್ಟೇ ಉಳಿದಿರುವಾಗ, ಬಲ್ಲವರು ಧರ್ಮಕ್ಕೆ ಸಂಬಂಧಿಸಿದ್ದೆಲ್ಲವನ್ನೂ ತಿರಸ್ಕಾರದಿಂದ ಅವಗಣಿಸಿ ನೋಡುತ್ತಿರುವಾಗ, ಭಾರತೀಯ ಮನಸ್ಸಿನ ಅತ್ಯುನ್ನತ ಧ್ಯೇಯಾಕಾಂಕ್ಷೆಗಳನ್ನು ಪ್ರಕಟಿಸುತ್ತಿರುವ ಹಾಗೂ ಅತ್ಯುದಾತ್ತ ತತ್ತ್ವಜ್ಞಾನ ವಿಚಾರಗಳು ಜನರ ಬದುಕಿನ ಹೊಕ್ಕು ಬಳಕೆಯ ಆಧ್ಯಾತ್ಮಿಕತೆಯೇ ಆಗಿರುವ ಭಾರತೀಯ ತತ್ತ್ವಜ್ಞಾನ ಎನ್ನುವುದು ಮುನ್ನೆಲೆಯಲ್ಲಿ ಕಾಣಿಸಿಕೊಳ್ಳುತ್ತದೆ. ಸ್ವಾಭಾವಿಕವಾಗಿಯೇ ಇದು ಎಲ್ಲದರ ಏಕತೆ, ಅನಂತತೆ, ನಿರಾಕಾರತೆ, ಮನುಷ್ಯನ ಅನಶ್ವರಾತ್ಮದ ಹಾಗೂ ಜೀವರಾಶಿಗಳ ಅವ್ಯವಚ್ಛಿನ್ನ ನಿರಂತರ ಪ್ರಯಾಣದ ಭಾವನೆ, ವಿಶ್ವದ ಅಗಾಧತೆ ಇವು ರಕ್ಷಣೆಗೆ ಒದಗುತ್ತವೆ. ಹಳೆಯ ಪಂಥಗಳು ಪ್ರಪಂಚವನ್ನು ಕೆಲಮಟ್ಟಿಗೆ ಒಂದು ಕೆಸರುಗುಂಡಿ ಎಂಬಂತೆ ನೋಡಿವೆ; ಕಾಲ ಎನ್ನುವುದು ಯಾವಾಗಲೋ ಹಿಂದೆ ಒಮ್ಮೆ ಮೊದಲಾಯಿತು ಎಂದು ಭಾವಿಸಿವೆ. ಕಾಲ ದೇಶಗಳ, ಕಾರ್ಯಕಾರಣ ಸಂಬಂಧಗಳ, ಎಲ್ಲಕ್ಕಿಂತ ಹೆಚ್ಚಾಗಿ ಮಾನವಚೇತನದ ಅಗಾಧವಾದ ಮಹಿಮೆ ಧರ್ಮದ ಎಲ್ಲ ಶೋಧನೆಗಳನ್ನೂ ನಿಯಂತ್ರಿಸುತ್ತಿದೆ ಎಂಬ ಉದಾತ್ತಚಿಂತನೆಗಳು

ಪುರಾತನಗ್ರಂಥಗಳಲ್ಲಿ, ಅಲ್ಲಿ ಮಾತ್ರವೇ, ಬರುತ್ತಿವೆ. ವಿಕಾಸವಾದ, ಶಕ್ತಿಸಂಚಯನ ಮೊದಲಾದವುಗಳ ಅಗಾಧವಾದ ಆಧುನಿಕ ಸಿದ್ಧಾಂತಗಳು ಎಲ್ಲ ವಿಧವಾದ ಒರಟು ತಾತ್ತ್ವಿಕ ಸಿದ್ಧಾಂತಗಳಿಗೆ ಮೃತ್ಯುಘಾತವನ್ನು ಕೊಡುತ್ತಿರುವಾಗ ಸುಸಂಸ್ಕೃತ ಮಾನವತ್ವದ ನಿಷ್ಠೆ ಎನ್ನುವುದು ಯಾವುದರಿಂದ ಶಕ್ಯವಾದೀತು? ಅದು ಸಾಧ್ಯವಾಗಬೇಕಾದರೆ, ಪರಮಾದ್ಭುತವಾದ, ದೃಢವಾಗಿ ಒಪ್ಪಿಸುವಂಥ, ಉದಾರಗೊಳಿಸುವಂಥ, ಉದಾತ್ತತೆಗೆ ಒಯ್ಯುವಂಥ ವಿಚಾರಗಳನ್ನು ಕಾಣಬಹುದಾದ, ಮಾನವಾತ್ಮದ ಅತ್ಯಾಶ್ಚರ್ಯಕರ ಉತ್ಪನ್ನವೆನ್ನಿಸಿದ, ಭಗವದ್ವಾಣಿ ಎನ್ನಿಸಿದ, ವೇದಾಂತ ಮಾತ್ರವೇ ಅಲ್ಲದೆ ಇನ್ನು ಏತರಿಂದ ಸಾಧ್ಯವಾದೀತು?

ಅದೇ ವೇಳೆ ನಾನೊಂದು ಮಾತು ಹೇಳಬೇಕು. ಭಾರತದ ಆಚೆಯ ರಾಷ್ಟ್ರಗಳಲ್ಲಿ ಪ್ರಚಾರಗೊಳ್ಳುತ್ತಿರುವ ನಮ್ಮ ಧರ್ಮ ಎಂದರೆ, ನನ್ನ ಆಶಯ : ಆ ಧರ್ಮದ ಕಟ್ಟಡದ ನಿರ್ಮಾಣಕ್ಕೆ ಕೆಲಸಮಾಡಿದ ತತ್ತ್ವಗಳು, ಪ್ರೇರಣೆಗಳು ಮತ್ತು ಅಸ್ತಿಭಾರದ ವಿಚಾರ. ಅದರ ವಿವರವಾದ ಕ್ರಿಯಾವಿಧಾನಗಳು, ಸಾಮಾಜಿಕ ಅಗತ್ಯಗಳ ಸಲುವಾಗಿ ಶತಮಾನಗಳ ಕಾಲ ಪರಿಶ್ರಮಮಾಡಿ ಸಿದ್ಧಪಡಿಸಿದ ನಡೆವಳಿಯ ಸೂಕ್ಷ್ಮಸಂಗತಿಗಳು, ವರ್ತನೆಗಳು ಮತ್ತು ಆಚಾರಗಳು, ಸಾಮಾಜಿಕಸುಸ್ಥಿತಿ ಇವುಗಳ ಸಂಬಂಧವಾಗಿ ಏರ್ಪಡಿಸಿದ ಶಾಸ್ತ್ರೀಯವಿವರಗಳು ಧರ್ಮ ಎಂಬ ಮೂಲತತ್ತ್ವದಲ್ಲಿ ನ್ಯಾಯವಾಗಿ ಸ್ಥಾನ ಪಡೆಯುವುದಿಲ್ಲ. ನಮ್ಮ ಗ್ರಂಥಗಳಲ್ಲಿ ಸತ್ಯದ ಎರಡು ಕಟ್ಟುಗಳಲ್ಲಿ ಸ್ಪಷ್ಟವಾದ ಭೇದವನ್ನು ಮಾಡಿರುವುದು ನಮಗೆ ತಿಳಿದಿದೆ. ಒಂದು ಕಟ್ಟು : ಮನುಷ್ಯ ಸ್ವಭಾವದ ಮೇಲೆ, ಆತನ ಸ್ವಭಾವದ ಮೇಲೆ, ಆತ್ಮಕ್ಕೆ ದೈವದೊಂದಿಗೆ ಇರುವ ಸಂಬಂಧದ ಮೇಲೆ, ದೈವಸ್ವರೂಪದ ಮೇಲೆ, ಪರಿಪೂರ್ಣತೆಯ ಮೇಲೆ, ಹಾಗೆಯೇ ಇನ್ನಿತರ ವಿಷಯಗಳ ಮೇಲೆ ಸರ್ವದಾ ಬದ್ಧತೆಯಿಂದಿರುವುದು. ಅಲ್ಲದೆ ವಿಶ್ವವಿಜ್ಞಾನದ ನಿಯಮಗಳು ಸೃಷ್ಟಿಯ ಅನಂತತೆಯ ಅಥವಾ ಇನ್ನೂ ಸರಿಯಾಗಿ ಹೇಳಬಹುದಾದರೆ ಪ್ರಕ್ಷೇಪಣದ, ಚಕ್ರೀಯ ಗತಿಯ ವಿಸ್ಮಯಕರ ಚಲನತತ್ತ್ವದ ಮತ್ತು ಅಂತಹ ಇತರ ಕಟ್ಟುಪಾಡುಗಳ ಶಾಶ್ವತ ನಿಯಮಗಳೆಲ್ಲ ಪ್ರಕೃತಿಯ ವಿಶ್ವಸಾಧಾರಣತತ್ತ್ವಗಳ ಮೇಲೆ ವ್ಯವಸ್ಥಿತವಾದವಾಗಿವೆ. ಹೀಗೆಯೇ ಇನ್ನೊಂದು ಕಟ್ಟು ಅಪ್ರಧಾನವಾದ ಕಟ್ಟುಪಾಡುಗಳು ಸೇರಿ ಆದವು, ನಮ್ಮ ದೈನಂದಿನ ಬದುಕಿನ ಚಟುವಟಿಕೆಗಳಿಗೆ ಮಾರ್ಗದರ್ಶಕಗಳಾದವು. ಅವು ಹೆಚ್ಚು ಸರಿಯಾಗಿ ಪುರಾಣಗಳಿಗೆ, ಸ್ಮೃತಿಗಳಿಗೆ ಸೇರಿದವಾಗಿವೆ, ಶ್ರುತಿಗಳಿಗೆ ಅಲ್ಲ. ಇತರ ಆಧಾರತತ್ತ್ವಗಳಿಗೆ ಇವುಗಳಿಂದ ಆಗಬೇಕಾದ್ದು ಏನೂ ಇಲ್ಲ. ನಮ್ಮದೇ ರಾಷ್ಟ್ರದಲ್ಲಿ ಈ ಅಪ್ರಧಾನವಾದ ಕಟ್ಟುಪಾಡುಗಳು ಎಲ್ಲ ಕಾಲಕ್ಕೂ ಬದಲಾಗುತ್ತ ಬಂದಿವೆ. ಒಂದು ಕಾಲದ, ಒಂದು ಯುಗದ ಆಚಾರಗಳು ಇನ್ನೊಂದರಲ್ಲಿ ಆಚಾರಗಳಾಗಿಲ್ಲ. ಒಂದು ಯುಗವಾದ ಮೇಲೆ ಇನ್ನೊಂದು ಯುಗ ಬಂದಾಗ, ಅವು ಮತ್ತೆ ಬದಲಾಗಬೇಕು. ಮಹಾನ್ ಋಷಿಗಳು



ಕಾಣಿಸಿಕೊಳ್ಳುತ್ತಾರೆ. ಹೊಸ ಪರಿಸರಗಳಿಗೆ ಹೊಂದಿಕೊಳ್ಳುವಂತೆ ಆಚಾರಗಳಿಗೆ, ವರ್ತನೆಗಳಿಗೆ ನಮ್ಮನ್ನು ಮುನ್ನಡಸುತ್ತಾರೆ.

ಮನುಷ್ಯ, ದೈವ ಮತ್ತು ಜಗತ್ತುಗಳಿಗೆ ಸಂಬಂಧಿಸಿದ ಈ ಎಲ್ಲ ವಿಸ್ಮಯಕರ, ಸೀಮಾತೀತ, ಉದಾತ್ತಾವಹ ಮತ್ತು ಸಂವರ್ಧನಶೀಲ ಆದ ದೃಷ್ಟಿವಿಶೇಷಕ್ಕೆ ಆಧಾರಭೂತವಾದ ಮಹಾನ್ ತತ್ತ್ವಗಳು ಆವಿರ್ಭವಿಸಿದ್ದು ಭಾರತದಲ್ಲಿ. ಭಾರತದಲ್ಲಿ ಮಾತ್ರವೇ ಒಂದು ಸಾಮಾನ್ಯ ಕಾಡುದೇವರ ಸಲುವಾಗಿ ಎದ್ದುನಿಂತು, "ನನ್ನ ದೇವರು ಸತ್ಯ, ನಿನ್ನ ದೇವರು ಸತ್ಯವಲ್ಲ; ಅದಕ್ಕಾಗಿ ಇಬ್ಬರೂ ಹೋರಾಡುವ" ಎಂಬುದಾಗಿ ಹೋರಾಟಕ್ಕೆ ಹೊರಟದ್ದು ಕಂಡುಬರುವುದಿಲ್ಲ. ಇಲ್ಲಿ ಮಾತ್ರವೇ ಕ್ಷುದ್ರದೇವತೆಗಳ ಸಲುವಾಗಿ ಹೋರಾಟ ಮಾಡುವಂಥ ಆಲೋಚನೆಗಳು ಹುಟ್ಟಲಿಲ್ಲ. ಮೂಲಾಧಾರವಾದ ಈ ಮಹಾನ್ ತತ್ತ್ವಗಳು ಮನುಷ್ಯನ ನಿತ್ಯತ್ವದ ಮೇಲೆ ಆಧಾರಪಟ್ಟಿವೆ. ಮಾನವಜಾತಿಯ ಒಳಿತಿಗೆ ಶ್ರಮಿಸಲು ಈ ಮೊದಲು ಸಹಸ್ರಾರು ವರ್ಷಗಳ ಹಿಂದೆ ಹೇಗೋ ಹಾಗೆಯೇ ಅವು ಇಂದು ಕೂಡ ಸಾರಭೂತವಾಗಿವೆ. ಮುಂದೆಯೂ ಈ ಭೂಮಿ ಇರುವವರೆಗೆ, ಕರ್ಮಸಿದ್ಧಾಂತ ಉಳಿದಿರುವವರೆಗೆ, ಮಾನವರಾಗಿ ನಾವು ಹುಟ್ಟುತ್ತಿರುವವರೆಗೆ ಹಾಗೂ ನಮ್ಮ ವೈಯಕ್ತಿಕ ಸಾಮರ್ಥ್ಯದ ಮೇಲೆ ನಮ್ಮ ವಿಧಿಯನ್ನು ನಾವೇ ರೂಪಿಸಿಕೊಳ್ಳುವವರೆಗೆ ಅವು ಹಾಗೆಯೇ ಉಳಿದುಕೊಳ್ಳುತ್ತವೆ.

ಎಲ್ಲಕ್ಕಿಂತ ಹೆಚ್ಚಾಗಿ ಭಾರತವು ಪ್ರಪಂಚಕ್ಕೆ ಕೊಡಬೇಕಾದ್ದು ಯಾವುದು ಎಂದರೆ, ಇದು : ವಿವಿಧ ಜನಾಂಗಗಳಲ್ಲಿ ಧರ್ಮ ಬೆಳೆದು ಬಲಗೊಂಡುದನ್ನು ನಾವು ಲಕ್ಷ್ಯವಿಟ್ಟು ನೋಡಿದರೆ, ತಪ್ಪದೆ ನಾವು ಕಾಣುವುದು ಎಂದರೆ, ಪ್ರತಿ ಬುಡಕಟ್ಟು ಆರಂಭದಲ್ಲಿ ತನ್ನದೇ ಆದ ಒಂದು ದೇವರನ್ನು ಪಡೆದಿತ್ತು ಎನ್ನುವುದು. ಬುಡಕಟ್ಟುಗಳು ಪರಸ್ಪರವಾಗಿ ಸಂಬಂಧಿಗಳಾಗಿದ್ದರೆ, ಈ ದೇವತೆಗಳು ಕುಲಸಂಬಂಧಿ ಯಾದೊಂದು ಹೆಸರು ಹೊಂದಿರುತ್ತವೆ. ಉದಾಹರಣೆಗೆ, ಎಲ್ಲ ಬ್ಯಾಬಿಲೋನಿಯನ್ ದೇವತೆಗಳಿಗೆ ಇದ್ದಂತೆ. ಬ್ಯಾಬಿಲೋನಿಯನ್ನರು ವಿವಿಧ ಜನಸಮುದಾಯಗಳಾಗಿ ವಿಭಜನೆಗೊಂಡಾಗ ಅವರು ಹೊಂದಿದ್ದ ಕುಲಸಂಬಂಧಿಯಾದ ಹೆಸರು ಬಾಲ್ (Baal) ಎಂದು. ಯಹೂದ್ಯ ಜನಸಮುದಾಯದವರು ತಮ್ಮಲ್ಲಿ ಬೇರೆ ಬೇರೆ ದೇವರಿದ್ದೂ ಮೊಲೋಕ್ (Moloch) ಎಂಬ ಸರ್ವಸಾಧಾರಣವಾದ ಹೆಸರನ್ನು ಪಡೆದಿದ್ದಂತೆ ಇದು. ಅದೇ ವೇಳೆ ಅವುಗಳಲ್ಲಿ ಒಂದು ಬುಡಕಟ್ಟು ಉಳಿದವುಗಳಿಗಿಂತ ಹೆಚ್ಚು ಎನ್ನುವುದನ್ನೂ ಉಳಿದೆಲ್ಲರಿಗೂ ತಮ್ಮವನೇ ಆದ ದೊರೆ ದೊರೆಯಾಗ ತಕ್ಕದ್ದು ಎನ್ನುವುದನ್ನೂ ಹಕ್ಕಾಗಿ ಮುಂದೊಡ್ಡುತ್ತದೆ; ಅಲ್ಲಿಂದ ಮುಂದೆ ತನ್ನ ಬುಡಕಟ್ಟಿನ ದೇವರೇ ಎಲ್ಲ ಬುಡಕಟ್ಟುಗಳಿಗೂ ದೇವರು ಎಂಬುದಾಗಿ ಮನ್ನಣೆ ಪಡೆಯಬೇಕೆಂದು ಸ್ವಾಭಾವಿಕವಾಗಿಯೇ ಆರಂಭವಾಗುತ್ತದೆ. ಬಾಲ್–ಮೆರೋಡಕ್

(Baal-Merodach) ಸರ್ವೋಚ್ಚ ದೈವವೆಂದೂ ಉಳಿದೆಲ್ಲ ದೇವರೂ ಕಡಮೆಯೆಂದೂ ಬ್ಯಾಬಿಲೋನಿಯನ್ನರು ಹೇಳಿದರು. ಹಾಗೆಯೇ ಎಲ್ಲ ಇತರ ಮೊಲೋಕರ ಮೇಲೆ ಮೊಲೋಕ್–ಯವ (Moloch-Yavah) ಮೇಲು ಎಂದಾಯಿತು. ಈ ಪ್ರಶ್ನೆಗಳು ಯುದ್ಧದ ಫಲಿತಾಂಶಗಳ ಮೇಲೆ ನಿರ್ಧಾರವಾಗಬೇಕಾಗಿತ್ತು. ಇದೇ ತಿಕ್ಕಾಟ ಇಲ್ಲಿ ಕೂಡ ಇತ್ತು. ಭಾರತದಲ್ಲಿ ಸ್ಪರ್ಧಿಗಳಾದ ಅವೇ ದೇವತೆಗಳು ಪರಮಾಧಿಕಾರಕ್ಕಾಗಿ ತಮ್ಮಲ್ಲಿಯೇ ಹೋರಾಡುತ್ತಿದ್ದರು. ಆದರೆ ದೇಶದ, ಈ ಜಗತ್ತಿನ ಭಾಗ್ಯ ದೊಡ್ಡದು; ಕೋಲಾಹಲ ಗದ್ದಲಗಳ ನಡುವೆಯೇ ಒಂದು ವಾಣಿ "ಏಕಂ ಸತ್ ವಿಪ್ರಾ ಬಹುಧಾವದನ್ತಿ" ಎಂಬುದಾಗಿ ಘೋಷಿಸಿತು ("ಇರುವುದು ಒಂದೇ ; ಬಲ್ಲವರು ಅದನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ"). 'ಶಿವ ವಿಷ್ಣುವಿಗೆ ಮೇಲಲ್ಲ ; ವಿಷ್ಣುವೇ ಎಲ್ಲವೂ, ಶಿವ ತಾನೇನೂ ಅಲ್ಲ' ಎಂಬುದಲ್ಲ. ಶಿವನೆಂದೋ ವಿಷ್ಣುವೆಂದೋ ಅಥವಾ ಬೇರೆ ನೂರು ಹೆಸರುಗಳಲ್ಲಿಯೋ ನೀವು ಕರೆಯುವುದೆಲ್ಲ ಅದೇ ಒಬ್ಬನನ್ನು, ಹೆಸರುಗಳು ಬೇರೆ, ಆದರೆ ಇರುವುದು ಅದೇ ಒಬ್ಬನಷ್ಟೇ. ಭಾರತದ ಇತಿಹಾಸವನ್ನೆಲ್ಲ ಈ ಕೆಲವು ಮಾತುಗಳಲ್ಲಿ ನೀವು ಓದಿಬಿಡಬಹುದು. ಸಮಗ್ರವಾದ ಇತಿಹಾಸ ಆ ಒಂದು ಸಾರತತ್ತ್ವವನ್ನೆ ಅಗಾಧವಾದ ಶಕ್ತಿಯೊಂದಿಗೆ ದೊಡ್ಡ ದೊಡ್ಡ ಮಾತುಗಳಲ್ಲಿ ಆವೃತ್ತಿಮಾಡಿರುವುದಾಗಿದೆ. ನಾಡಿನ ರಕ್ತದಲ್ಲಿ ಸೇರುವವರೆಗೆ, ರಕ್ತನಾಳಗಳಲ್ಲಿ ಹರಿದು ಪ್ರತಿಯೊಂದು ರಕ್ತಕಣದೊಂದಿಗೆ ಕೂಡಿ ಪುಳಕಹುಟ್ಟಿಸುವವರೆಗೆ, ಪಂಚಭೂತಾತ್ಮಕವಾದ ಜೀವದೊಂದಿಗೆ ಬೆರೆಯುವವರೆಗೆ ಈ ನಾಡಿನಲ್ಲಿ ಅದು ಪುನರಾವೃತ್ತಿಗೊಳ್ಳುತ್ತಲೇ ಹೋಗಿದೆ. ಹೀಗೆ ಈ ನಾಡು ಈ ಪ್ರಾಚೀನವಾದ ಮಾತೃಭೂಮಿಗೆ ಬೇರೆ ಬೇರೆ ಧರ್ಮಗಳನ್ನು, ಪಂಥಗಳನ್ನು ಸ್ವಾಗತಿಸುವ ಹಕ್ಕು ನೀಡುವ ಮೂಲಕ, ಸಹಿಷ್ಣುತೆಯ ಅತ್ಯದ್ಭುತವಾದ ನಾಡಾಗಿ ಪರಿವರ್ತಿತವಾಗಿದೆ.

ಮೇಲುನೋಟಕ್ಕೆ ಕೈಮೀರಿದ ಸ್ಥಿತಿಯಲ್ಲಿ ತದ್ವಿರುದ್ಧವಾಗಿ ಕಾಣುವ ಬೇರೆ ಬೇರೆ ಪಂಥಗಳು ಸಮರಸವಾಗಿ ಬದುಕುತ್ತಿರುವ, ಇಲ್ಲಿ ಮಾತ್ರವೇ ಗೋಚರವಾಗುತ್ತಿರುವ, ಈ ಅತ್ಯದ್ಭುತ ವಿದ್ಯಮಾನಕ್ಕೆ ವಿವರಣೆ ಇಲ್ಲಿ ಸಿಕ್ಕುತ್ತದೆ. ನೀವು ದ್ವೈತಿಗಳಿರಬಹುದು, ನಾನು ಅದ್ವೈತಿ ಇರಬಹುದು. ನೀವು ಭಗವಂತನ ಅವಿಚ್ಛಿನ್ನ ಸೇವಕನೆಂದು ನಿಮ್ಮನ್ನು ತಿಳಿಯಬಹುದು; ನಾನು ಭಗವಂತನೊಂದಿಗೆ ಅಭಿನ್ನವೆಂದು ನನ್ನ ಮಟ್ಟಿಗೆ ಸಾರಿಕೊಳ್ಳಬಹುದು. ಆದರೂ ನಾವಿಬ್ಬರೂ ಒಳ್ಳೆಯ ಹಿಂದುಗಳೇ. ಅದು ಹೇಗೆ ಸಾಧ್ಯವಾಯಿತು ? ಹೇಳಿ ಹಾಗಾದರೆ, "ಏಕಂ ಸತ್ ವಿಪ್ರಾ ಬಹುಧಾ ವದನ್ತಿ" ("ಇರುವುದು ಒಂದೇ ; ಬಲ್ಲವರು ಅದನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ"). ಎಲ್ಲಕ್ಕಿಂತ ಹೆಚ್ಚಾಗಿ, ನನ್ನ ದೇಶಬಾಂಧವರೇ, ನಾವು ಪ್ರಪಂಚಕ್ಕೆ ಕಲಿಸಬೇಕಾದ್ದು ಈ ಒಂದು ಮಹಾನ್ ಸತ್ಯವನ್ನು. ಬೇರೆ



ರಾಷ್ಟ್ರಗಳ ಒಳ್ಳೆಯ ವಿದ್ಯಾವಂತಜನ ಕೂಡ ೪೫ ಡಿಗ್ರಿಗಳ ನೇರಕ್ಕೆ ತಮ್ಮ ಮೂಗು ತಿರುಗಿಸುತ್ತಾರೆ, ನಮ್ಮದು ವಿಗ್ರಹಾರಾಧಕರ ಧರ್ಮ ಎನ್ನುತ್ತಾರೆ. ಅದನ್ನು ನಾನು ಕಂಡಿದ್ದೇನೆ. ಆದರೆ ತಮ್ಮ ತಲೆಗಳಲ್ಲೇ ಮೂಢನಂಬಿಕೆಗಳ ರಾಶಿ ಎಷ್ಟಿದೆಯೆಂದು ಅವರು ಯೋಚಿಸುವುದೇ ಇಲ್ಲ. ಈಗಲೂ ಎಲ್ಲ ಕಡೆಯೂ ಇದೇ ಅಗಾಧಪ್ರಮಾಣದ ಅಂಧಾಭಿಮಾನ, ಮನಸ್ಸಿನ ಕೀಳು ಸಂಕುಚಿತಪ್ರವೃತ್ತಿ ಕಂಡುಬರುತ್ತದೆ. ಒಬ್ಬ ಮನುಷ್ಯ ತನ್ನಲ್ಲಿ ಒಂದು ಪದಾರ್ಥವಿಟ್ಟುಕೊಂಡಿದ್ದರೆ, ಇಟ್ಟುಕೊಳ್ಳಬೇಕಾದ ಪದಾರ್ಥ ಅದೊಂದೇ ಎಂದು ತಿಳಿಯುತ್ತಾನೆ; ಅವನಲ್ಲಿ ಬದುಕಲು ಯೋಗ್ಯವಾದ ಒಂದು ಬದುಕು ಉಂಟು ಎಂದಾದರೆ, ಅವನದೇ ಆದ 'ದುಡ್ಡೇ ದೇವರು' ಎಂಬ ವಿಚಾರದ ಸರಳವಾದ ಬದುಕು ಎಂದು ತಿಳಿಯುತ್ತಾನೆ. ಗಳಿಸಿಕೊಳ್ಳಲು ಯೋಗ್ಯವಾದ ಗಳಿಕೆಯೆಂದರೆ ಅವನದೇ ಆದ ಆಸ್ತಿಪಾಸ್ತಿ, ಇನ್ನೇನೂ ಅಲ್ಲ. ಆದರೆ ಅವನು ಒಂದು ಸಣ್ಣ ಸಾಮಾನ್ಯ ಮೃದ್ವಸ್ತುವನ್ನೋ ಯಾವುದಾದರೂ ಯಂತ್ರವನ್ನೋ ನಿರ್ಮಾಣಮಾಡಬಲ್ಲನಾದರೆ ಅದು ತನ್ನೆಲ್ಲ ಘನವಾದ ಗಳಿಕೆಗಳಿಗಿಂತ ಹೆಚ್ಚಾಗಿ ಮೆಚ್ಚುವ ವಿಷಯವಾಗುತ್ತದೆ. ವಿದ್ಯೆ, ಪಾಂಡಿತ್ಯ ಎಲ್ಲ ಇದ್ದೂ ಪ್ರಪಂಚವೆಲ್ಲದರ ಸ್ಥಿತಿ ಇಷ್ಟೇ. ಆದರೆ ಪ್ರಪಂಚದಲ್ಲಿ ವಿದ್ಯೆ ಇನ್ನೂ ಬರಬೇಕಾಗಿದೆ; ನಾಗರಿಕತೆಯೋ? ನಾಗರಿಕತೆ ಇನ್ನೂ ಎಲ್ಲಿಯೂ ಮೊದಲಾಗಿಯೇ ಇಲ್ಲ. ಈಗಲೂ ಮನುಷ್ಯಜಾತಿಯ ಶೇಕಡ ೯೯.೯ರಷ್ಟು ಜನ ಹೆಚ್ಚು ಕಡಮೆ ಅನಾಗರಿಕರು. ಇವನ್ನೆಲ್ಲ ನಾವು ಪುಸ್ತಕಗಳನ್ನು ಓದಿ ತಿಳಿಯಬಹುದಾಗಿದೆ ; ಹಾಗೆಯೇ ಧಾರ್ಮಿಕ ಸಹಿಷ್ಣುತೆ ಮೊದಲಾದವುಗಳ ಬಗ್ಗೆ ಆಲಿಸುತ್ತೇವೆ. ಆದರೆ ಪ್ರಪಂಚದಲ್ಲಿ ಇವು ಕಂಡುಬರುವುದು ತೀರ ವಿರಳ. ನನ್ನ ಅನುಭವವನ್ನು ಕೇಳಿ. ೯೯ ರಷ್ಟು ಜನ ಅದರ ಬಗ್ಗೆ ಯೋಚಿಸುವುದು ಕೂಡ ಇಲ್ಲ. ನಾನು ನೋಡಿರುವ ಎಲ್ಲ ದೇಶಗಳಲ್ಲಿಯೂ ವಿಪರೀತವಾಗಿ ಧಾರ್ಮಿಕ ಕಿರುಕುಳ ನನಗೆ ಕಂಡುಬಂದಿದೆ. ಹೊಸದಾಗಿ ಏನಾದರೂ ಕಲಿಯುವ ವಿಷಯದಲ್ಲಿಯೂ ಅವೇ ಹಳೆಯ ಅಡಚಣೆಗಳು ಅಡ್ಡಿಯಾಗುತ್ತಿವೆ. ಪ್ರಪಂಚದಲ್ಲಿ, ಧಾರ್ಮಿಕ ವಿಚಾರಗಳಲ್ಲಿ ಅಲ್ಪಸ್ವಲ್ಪ ಸಹಿಷ್ಣುತೆ ಇರುವುದಿದ್ದರೆ, ಅಲ್ಪ ಸ್ವಲ್ಪ ಸಹಾನುಭೂತಿ ಎನ್ನುವುದು ಇನ್ನೂ ಇದ್ದರೆ, ಅದು ಈ ಆರ್ಯಭೂಮಿಯಲ್ಲಿ, ಇನ್ನೆಲ್ಲಿಯೂ ಅಲ್ಲ. ಇಲ್ಲಿ ಮಾತ್ರವೇ ಭಾರತೀಯರು ಮಹಮದೀಯರಿಗಾಗಿ, ಕ್ರೈಸ್ತರಿಗಾಗಿ ದೇವಮಂದಿರಗಳನ್ನು ಕಟ್ಟಿಸಿದ್ದು ಕಾಣುತ್ತದೆ, ಇನ್ನೆಲ್ಲಿಯೂ ಇಲ್ಲ. ಬೇರೆ ದೇಶಗಳಿಗೆ ನೀವು ಹೋದರೆ, ಮಹಮದೀಯರನ್ನೋ ಬೇರೆ ಧರ್ಮದವರನ್ನೋ ನಿಮಗಾಗಿ ದೇವಾಲಯ ಕಟ್ಟಿಸಿಕೊಡುವ ಹಾಗೆ ನೀವು ಕೇಳಿದರೆ, ಅವರು ಹೇಗೆ ಸಹಾಯವಾಗುತ್ತಾರೆ, ನೋಡಿ. ಬದಲಿಗೆ, ಅವರು ನಿಮ್ಮ ದೇವಾಲಯವನ್ನು ಹಾಳುಮಾಡುತ್ತಾರೆ ; ಸಾಧ್ಯವಿದ್ದರೆ, ನಿಮ್ಮನ್ನು ಕೂಡ. ಆದ್ದರಿಂದ ಪ್ರಪಂಚಕ್ಕೆ ಬೇಕಾಗಿರುವ ಒಂದು ಘನವಾದ ಪಾಠವನ್ನು ಅದು ಭಾರತದಿಂದ ಇನ್ನೂ

ಕಲಿಯಬೇಕಾಗಿದೆ. ಆ ಪಾಠವೆಂದರೆ, ಅದು ಬರಿಯ ಸಹಿಷ್ಣುತೆಯಲ್ಲ, ಸಹಾನುಭೂತಿ ಎನ್ನುವುದು. ಮಹಿಮ್ನಸ್ತೋತ್ರದಲ್ಲಿ ಸೊಗಸಾಗಿ ಹೀಗೆ ಹೇಳಿದೆ : "ಬೇರೆ ಬೇರೆ ನದಿಗಳು ಬೇರೆ ಬೇರೆ ಪರ್ವತಗಳಲ್ಲಿ ಉಗಮಗೊಂಡು ನೇರವೋ ವಕ್ರವೋ ಆಗಿ ಸಾಗುತ್ತ ಕೊನೆಗೆ ಸಮುದ್ರವನ್ನು ಸೇರಿಕೊಳ್ಳುತ್ತವೆ. ಆದ್ದರಿಂದ, ಓ ಪರಮೇಶ್ವರ, ಮಾನವರು ತಮ್ಮ ಬೇರೆ ಬೇರೆ ಪ್ರವೃತ್ತಿಗಳಿಗೆ ಅನುಸಾರವಾಗಿ ಬೇರೆ ಬೇರೆ ದಾರಿಗಳನ್ನು– ಅವು ಬೇರೆ ಬೇರೆ ಎಂದು ತೋರುವುದು ಮಾತ್ರಹಿಡಿದು, ನೇರವೋ ವಕ್ರವೋ ಆಗಿ ಸಾಗಿದರೂ ಕೊನೆಗೆ ಸೇರುವುದು ನಿನ್ನನ್ನೇ!" ಬೇರೆ ಬೇರೆ ದಾರಿಗಳನ್ನು ಹಿಡಿದರೂ, ಎಲ್ಲರೂ ದಾರಿಯಲ್ಲಿ ಸಾಗುತ್ತಿರುತ್ತಾರೆ. ಕೆಲವರು ಸ್ವಲ್ಪಮಟ್ಟಿಗೆ ವಕ್ರವಾದ ದಾರಿಯಲ್ಲಿ ಧಾವಿಸಬಹುದು, ಇನ್ನು ಕೆಲವರು ನೇರವಾಗಿ ಧಾವಿಸಬಹುದು. ಆದರೆ ಕೊನೆಗೆ ಅವರೆಲ್ಲ ಬಂದು ಸೇರುವುದು ಆ ಭಗವಂತನನ್ನು, ಆ ಒಬ್ಬನನ್ನು. ಆಮೇಲೆ, ಆಮೇಲೆ ಮಾತ್ರವೇ, ನಿಮ್ಮ ಶಿವಭಕ್ತಿ ಕೊನೆಮುಟ್ಟುವುದು. ಆಗ ನೀವು ಅವನನ್ನು ಲಿಂಗದಲ್ಲಿ ಕಾಣುವುದು ಮಾತ್ರವೇ ಅಲ್ಲ, ಎಲ್ಲೆಲ್ಲಿಯೂ ಕಾಣುತ್ತೀರಿ. ಹಾಗೆಯೇ ಯಾರು ಹರಿಯನ್ನು ಒಲಿಯುವನೋ ಅವನೀಗ ಸಂತ. ಅವನು ಹರಿಯನ್ನು ಎಲ್ಲದರಲ್ಲಿಯೂ ಕಾಣುತ್ತಾನೆ, ಎಲ್ಲರಲ್ಲಿಯೂ ಕಾಣುತ್ತಾನೆ. ನೀನು ನಿಜವಾಗಿ ಶಿವಭಕ್ತರಾಗಿದ್ದರೆ, ನೀವು ಅವನನ್ನು ಎಲ್ಲದರಲ್ಲಿಯೂ ಕಾಣಬೇಕು, ಎಲ್ಲರಲ್ಲಿಯೂ ಕಾಣಬೇಕು. ಎಲ್ಲ ಪೂಜೆಯೂ ಅವನಿಗೇ ಸಲ್ಲುವಂತೆ ನೀವು ನೋಡಿಕೊಳ್ಳಬೇಕು, ಅವನ ನಾಮರೂಪಗಳು ಏನಾದರೂ ಆಗಿರಲಿ. ಕಾಬಾದ ಕಡೆಗೆ ಇಲ್ಲವೆ ಕ್ರೈಸ್ತ ಇಗರ್ಜಿಯೊಳಗೆ ಇಲ್ಲವೆ ಬೌದ್ಧ ದೇವಾಲಯದಲ್ಲಿ ಬಾಗುವ ಮಂಡಿಗಳೆಲ್ಲ, ಬಾಗುವವರಿಗೆ ತಿಳಿದಿರಲಿ ಇಲ್ಲದಿರಲಿ, ಅರಿವಿರಲಿ ಇಲ್ಲದಿರಲಿ, ಬಾಗುವುದು ಆ ಪರಮನಿಗೇ. ಯಾವುದೇ ಹೆಸರಲ್ಲಿ, ಆಕಾರದಲ್ಲಿ ಪೂಜಿಸಲಿ, ಪೂಜಿಸಿದ ಪುಷ್ಪಗಳೆಲ್ಲ ಸಮರ್ಪಿತವಾಗುವುದು ಆ ಪರಮನ ಪಾದಗಳಿಗೇ. ಏಕೆಂದರೆ ಸರ್ವರಿಗೂ ಆತನೊಬ್ಬನೇ ದೈವ ; ಆತ ಎಲ್ಲ ಆತ್ಮಗಳ ಆತ್ಮ. ನೀವಾಗಲಿ ನಾನಾಗಲಿ ತಿಳಿಯುವುದಕ್ಕಿಂತ ಸರ್ವವಿಧದಲ್ಲಿಯೂ ಲೋಕಕ್ಕೇನು ಬೇಕು ಎಂಬುದನ್ನು ಆತ ಚೆನ್ನಾಗಿ ಬಲ್ಲನು. ಎಲ್ಲ ಭೇದಗಳೂ ಇಲ್ಲವಾಗಬೇಕು ಎನ್ನುವುದು ಸಾಧ್ಯವಿಲ್ಲ. ಅವು ಇರಬೇಕು. ಬದಲಾವಣೆ ಇಲ್ಲ ಎಂದರೆ ಬದುಕೂ ಇಲ್ಲ. ಈ ಸಂಘರ್ಷವೇ, ವಿಚಾರಭೇದವೇ ಬೆಳಕಿಗೆ, ಚಲನೆಗೆ ಮತ್ತು ಸಕಲಕ್ಕೆ ಅವಕಾಶ ಮಾಡುತ್ತದೆ. ಈ ವ್ಯತ್ಯಾಸಾತ್ಮಕತೆ, ಅನಂತವಾಗಿ ವಿರೋಧಾತ್ಮಕ ಆಗಿದ್ದರೂ, ಅದು ಇರುವಂಥದೇ. ಆದರೆ ಹಾಗೆಂದು ನಾವು ದ್ವೇಷಿಸುವ ಅಗತ್ಯವೇನೂ ಇಲ್ಲ. ಪರಸ್ಪರವಾಗಿ ಕಚ್ಚಾಡುವ ಅಗತ್ಯವೂ ಇಲ್ಲ.

ಆದ್ದರಿಂದ, ನಾವು ನಮ್ಮ ಮಾತೃಭೂಮಿಯಲ್ಲಿ, ಇಲ್ಲಿ ಮಾತ್ರವೇ ಉಪದೇಶವಾದ ಒಂದು ಸಾರತತ್ತ್ವವನ್ನು ಮತ್ತೆ ಪಾಠಮಾಡಬೇಕಾಗಿದೆ. ಅದು



ಭಾರತದಿಂದ ಮತ್ತೊಮ್ಮೆ ಪಾಠವಾಗಬೇಕಾಗಿದೆ. ಏಕೆ? ಏಕೆ ಎಂದರೆ, ಅದು ನಮ್ಮ ಪವಿತ್ರ ಗ್ರಂಥಗಳಲ್ಲಿ ಮಾತ್ರವೇ ಅಲ್ಲ, ನಮ್ಮ ರಾಷ್ಟ್ರೀಯ ಸಾಹಿತ್ಯದ ಪ್ರತಿಯೊಂದು ಘಟ್ಟದಲ್ಲಿಯೂ ಹರಿದುಕೊಂಡುಬಂದಿದೆ. ಇಲ್ಲಿ, ಇಲ್ಲಿ ಮಾತ್ರವೇ, ಪ್ರತಿನಿತ್ಯವೂ ಅದು ಅಭ್ಯಾಸದಲ್ಲಿದೆ. ಅಲ್ಲದೆ ಯಾರೇ ಆಗಲಿ, ಕಣ್ಣು ತೆರೆದು ನೋಡಿದರೆ, ಅದು ಇಲ್ಲಿ, ಇಲ್ಲಿ ಮಾತ್ರವೇ ಅಭ್ಯಾಸದಲ್ಲಿರುವುದನ್ನು ಕಾಣಬಹುದಾಗಿದೆ. ಹೀಗೆ ನಾವು ಧರ್ಮದ ಹತ್ತಿರ ಹೋಗಬೇಕಾಗಿದೆ. ಭಾರತವು ಕಲಿಸಬಹುದಾದ ಇನ್ನೂ ಉನ್ನತವಾದ ಬೇರೆ ಬೋಧನೆಗಳೂ ಇವೆ. ಆದರೆ ಅವು ಪಂಡಿತರಿಗೆ ಮಾತ್ರ. ಮಾರ್ದವ, ದಯಾಪರತೆ, ಸಹನಶೀಲತೆ, ಸಹಿಷ್ಣುತೆ, ಸಹಾನುಭೂತಿ ಮತ್ತು ಭ್ರಾತೃತ್ವ ಇವನ್ನು ಗಂಡಾಗಲಿ ಹೆಣ್ಣಾಗಲಿ ಅಥವಾ ಮಗುವಾಗಲಿ, ಕಲಿತವರಿರಲಿ, ಕಲಿಯದವರಿರಲಿ, ಜನಾಂಗ ಜಾತಿ ಪಂಗಡಗಳ ಯಾವ ಭೇದವೂ ಇಲ್ಲದೆ ಯಾರು ಬೇಕಾದರೂ ಕಲಿಯಬಹುದು. "ಎಲ್ಲರೂ ನಿನ್ನನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ; ನೀನು ಇರುವವನು ಒಬ್ಬನೇ."

* * * *

## ೨. ನಮ್ಮ ಚಿರಂತನ ಚಿಲುಮೆಗಳು

ಇದೊಂದು ಪುರಾತನ ಭೂಮಿ. ವಿವೇಚನಾಜ್ಞಾನ ಇಲ್ಲಿ ಮೊದಲು ನೆಲೆಯೂರಿ, ಬಳಿಕ ಇತರ ದೇಶಗಳಿಗೆ ಹೋಯಿತು. ಅದೇ ಭಾರತ: ಸಾಗರದಂತೆ ಉರುಳುವ ನದಿಗಳೂ ದಿಟವಾಗಿ ಸ್ವರ್ಗದ ನಿಗೂಢತೆಗಳೇ ಹಿಮಶಿಖರಗಳ ಪದರ ಪದರಗಳಾಗಿವೆಯೋ ಎನ್ನುವಂತೆ ತೋರುವ ಸನಾತನ ಹಿಮಾಲಯ ಪರ್ವತಶ್ರೇಣಿಗಳೂ ಆಧ್ಯಾತ್ಮಿಕತೆಯ ಅಂತಃಪ್ರವಾಹವನ್ನು ಪ್ರತಿನಿಧಿಸುತ್ತಿರುವುದಾಗಿ ಕಾಣುವ ಭಾರತ. ಸದಾಕಾಲಕ್ಕೂ ಸಲ್ಲುವ ಮಹಾನ್ ಋಷಿಮುನಿಗಳ ಪಾದಗಳು ನಡೆದಾಡಿದ ನೆಲದಿಂದ ಕೂಡಿದ ಅದೇ ಭಾರತ. ಮನುಷ್ಯಪ್ರಕೃತಿಯ ಬಗ್ಗೆ, ಒಳಪ್ರಪಂಚದ ಬಗ್ಗೆ ಪ್ರಶ್ನೆಗಳು ಮೊದಲು ಹುಟ್ಟಿದ್ದು ಇಲ್ಲಿ. ಆತ್ಮ ಅಮರವೆಂಬ ಸಿದ್ಧಾಂತಗಳು, ಸೂತ್ರಧಾರಕ ದೈವದ ಹಾಗೂ ಪ್ರಕೃತಿಯಲ್ಲಿಯೂ ಮಾನವನಲ್ಲಿಯೂ ಅಂತರ್ವ್ಯಾಪಿಯಾಗಿರುವ ದೈವದ ಅಸ್ತಿತ್ವವಿಚಾರ ಇಲ್ಲಿ ಕಾಣಿಸಿಕೊಂಡುವು. ಧರ್ಮ ತತ್ತ್ವಜ್ಞಾನಗಳ ಅತ್ಯುನ್ನತ ಆದರ್ಶಗಳು ಪರಮೋಚ್ಚಕೋಟಿಯನ್ನು ಸಾಧಿಸಿದುವು. ಮಹಾತರಂಗಗಳು ಮೇಲೇಳುವಂತೆ ಆಧ್ಯಾತ್ಮಿಕತೆ ಮತ್ತು ತತ್ತ್ವಜ್ಞಾನಗಳು ಮತ್ತೆ ಮತ್ತೆ ಉಕ್ಕೇರಿ ಪ್ರಪಂಚ ಅವುಗಳಿಂದ ತೊಯ್ಯುವಂತೆ ಮಾಡಿದ್ದು ಇದೇ ಭೂಮಿ. ಮತ್ತೊಮ್ಮೆ, ಕುಸಿಯುತ್ತಿರುವ ಮಾನವಜನಾಂಗಗಳಲ್ಲಿ ಜೀವನವನ್ನೂ ಚೈತನ್ಯವನ್ನೂ ತುಂಬುವುದಕ್ಕಾಗಿ ಅಂತಹ ತರಂಗಗಳು ಹೊರಡಬೇಕಾಗಿರುವ ಭೂಮಿ, ಇದು. ಶತಮಾನಗಳ ಆಘಾತಗಳನ್ನು, ನೂರಾರು ಪರಕೀಯ ಆಕ್ರಮಣಗಳನ್ನು, ವರ್ತನೆ ಆಚಾರಗಳಲ್ಲಿ ನೂರಾರು ಸಾಮಾಜಿಕ ಮೊದಲಾದ ವಿಪ್ಲವಗಳನ್ನು ತಾಳಿಕೊಂಡ ಭೂಮಿ, ಇದು. ಪ್ರಪಂಚದಲ್ಲಿ ಯಾವುದೇ ಹೆಬ್ಬಂಡೆಗಿಂತ ಗಟ್ಟಿಯಾಗಿ, ತನ್ನ ಸಾವಿಲ್ಲದ ಸತ್ತ್ವದೊಂದಿಗೆ, ಕೇಡಿಲ್ಲದ ಜೀವದೊಂದಿಗೆ ಈ ಪ್ರಪಂಚದಲ್ಲಿ ನೆಲೆಯೂರಿ ನಿಂತಿರುವುದು ಇದೇ ಭೂಮಿ. ಅದರ ಬದುಕು ಆತ್ಮದ ಲಕ್ಷಣವುಳ್ಳದ್ದು. ಅದಕ್ಕೆ ಆದಿಯಿಲ್ಲ. ಅಂತ್ಯವಿಲ್ಲ; ಅದು ಅನಶ್ವರ. ನಾವು ಇಂತಹ ದೇಶದ ಮಕ್ಕಳು.

ಭಾರತದ ಮಕ್ಕಳೇ, ಕಾರ್ಯತಃ ತೋರಿಸಲಾಗುವ ಕೆಲವು ಸಂಗತಿಗಳನ್ನು ನಿಮಗೆ ತಿಳಿಸಲೆಂದು ನಾನಿಲ್ಲಿ ನಿಂತಿದ್ದೇನೆ. ಹಿಂದಿನ ವೈಭವಗಳನ್ನು ನಿಮಗೆ ಜ್ಞಾಪಿಸುವ ನನ್ನ ಉದ್ದೇಶವೆಂದರೆ, ಇಷ್ಟೇ: ಬಹಳ ಸಲ ಭೂತಕಾಲದತ್ತ ಹೊರಳಿ ನೋಡುವುದು ಅವನತಿಗೆ ದಾರಿ ಮಾಡುವುದು, ಅದರಿಂದೇನೂ ಪ್ರಯೋಜನವಿಲ್ಲ,



ನಾವು ಭವಿಷ್ಯದತ್ತ ನೋಡಬೇಕು ಎಂಬುದಾಗಿ ನನಗೆ ಹೇಳುತ್ತಿರುತ್ತಾರೆ. ಅದೇನೋ ನಿಜ. ಆದರೆ ಹಿಂದಿನದರಿಂದಲೇ ಮುಂದಿನದನ್ನು ನಾವು ಕಟ್ಟಬೇಕು. ಆದ್ದರಿಂದ ಎಷ್ಟು ದೂರ ಸಾಧ್ಯವೋ ಅಷ್ಟು ದೂರ ಹಿಂದಕ್ಕೆ ಹೊರಳಿನೋಡಿ ; ಹಿಂದಿನ ಚಿರಂತನ ಚಿಲುಮೆಗಳಿಂದ ಸಮೃದ್ಧವಾಗಿ ಜಲಪಾನಮಾಡಿ. ಆಮೇಲೆ ಮುಂದಕ್ಕೆ ನೋಡಿ, ಮುಂದಕ್ಕೆ ನಡೆಯಿರಿ. ಭಾರತವನ್ನು, ಅದು ಮೊದಲಿದ್ದುದಕ್ಕಿಂತ ಹೆಚ್ಚಾಗುವ ಹಾಗೆ ಬೆಳಗಿ, ಇನ್ನೂ ದೊಡ್ಡದು ಮಾಡಿ, ಇನ್ನೂ ಉನ್ನತಿಯ ನೆಲೆಗೇರಿಸಿ. ನಮ್ಮ ಪೂರ್ವಜರು ದೊಡ್ಡವರು. ನಾವು ಅದನ್ನು ಮೊದಲು ಮನಸ್ಸಿಗೆ ತಂದುಕೊಳ್ಳಬೇಕು. ನಾವು ನಮ್ಮ ಅಸ್ತಿತ್ವದ ಅಂಗಾಂಶಗಳನ್ನು, ನಮ್ಮ ರಕ್ತನಾಳಗಳಲ್ಲಿ ಪ್ರವಹಿಸುವ ರಕ್ತವನ್ನು ಮೊದಲು ಗುರುತಿಸಬೇಕು. ಆ ರಕ್ತದಲ್ಲಿ ಅದು ಹಿಂದೆ ಏನು ಮಾಡಿದೆ ಎಂಬುದರಲ್ಲಿ ನಂಬಿಕೆ ಇರಬೇಕು. ಆ ಹಳತರ ಹಿರಿತನದ ನಂಬಿಕೆಯಿಂದ, ತಿಳಿವಳಿಕೆಯಿಂದ ಹಿಂದೆ ಅದು ಇದ್ದುದಕ್ಕಿಂತ ಹೆಚ್ಚು ಹಿರಿತನವನ್ನು ಅದು ಗಳಿಸುವಂತೆ ಮಾಡಬೇಕು. ಸವೆತ ಅವನತಿಗಳ ಕಾಲಘಟ್ಟಗಳುಂಟು. ಅವಕ್ಕೆ ನಾವು ಹೆಚ್ಚು ಮಹತ್ತ್ವ ಕೊಡುವುದಿಲ್ಲ. ಅದು ನಮಗೆಲ್ಲ ಗೊತ್ತಿರುವುದೇ. ಅಂಥ ಕಾಲಘಟ್ಟಗಳು ಅವಶ್ಯವಾದವೇ. ಭಾರಿಯಾದ ಮರ ಸೊಗಸಾದ ಪಕ್ವಫಲವನ್ನು ನೀಡುತ್ತದೆ. ಆ ಹಣ್ಣು ನೆಲಕ್ಕೆ ಬೀಳುತ್ತದೆ, ಕೊಳೆಯುತ್ತದೆ, ನಾರುತ್ತದೆ. ಆ ಕೊಳೆತ ಸ್ಥಿತಿಯಿಂದ ಬೇರು ಒಡೆಯುತ್ತದೆ. ಮುಂದೆ ಬರುವ ಮರ ಮೊದಲಿನದಕ್ಕಿಂತ ಹೆಚ್ಚು ಭಾರಿಯಾಗಿ ಬೆಳೆಯುತ್ತದೆ. ನಾವು ದಾಟಿ ಬಂದ ಆ ಕ್ಷೀಣತೆಯ ಕಾಲ ತೀರ ಅವಶ್ಯವೇ ಆಗಿತ್ತು. ಈ ಕ್ಷೀಣತೆಯ ಮೂಲದಿಂದ ಭವಿಷ್ಯದ ಭಾರತ ಹೊಮ್ಮುತ್ತಿದೆ. ಅದು ಚಿಗರೊಡೆಯುತ್ತಿದೆ. ಅದರ ಮೊದಲ ಎಲೆಗಳು ಆಗಲೇ ಹೊರಟಿವೆ. ಬಲಿಷ್ಠವೂ ಭಾರಿಯೂ ಆದ ಊರ್ಧ್ವಮೂಲ ಈಗಾಗಲೇ ಕಾಣಿಸಿಕೊಳ್ಳಲು ಸಿದ್ಧವಾಗಿದೆ. ಅದರ ಬಗ್ಗೆಯೇ ನಾನು ನಿಮಗೆ ಹೇಳಬೇಕಾಗಿದೆ.

ಭಾರತದ ಸಮಸ್ಯೆಗಳು ಹೆಚ್ಚು ತೊಡಕಾದವು; ಬೇರೆ ದೇಶಗಳಲ್ಲಿರುವ ಸಮಸ್ಯೆಗಳಿಗಿಂತ ಹೆಚ್ಚು ಮಹತ್ತ್ವಪೂರ್ಣವಾದವು. ಜನಾಂಗ, ಧರ್ಮ, ಭಾಷೆ, ಸರಕಾರ–ಎಲ್ಲಾ ಸೇರಿ ಒಂದು ರಾಷ್ಟ್ರ ಆಗುತ್ತದೆ. ಜನಾಂಗಗಳ ಮೇಲೆ ಜನಾಂಗಗಳು ಬಂದಿರುವ ಈ ದೇಶಕ್ಕೆ ಹೋಲಿಸಿದರೆ, ಪ್ರಪಂಚದಲ್ಲಿ ಈ ಅಂಶಗಳು ಸಂಘಟಿಸಿರುವ ರಾಷ್ಟ್ರಗಳು ಸಂಖ್ಯೆಯಲ್ಲಿ ತೀರ ಕಡಮೆ. ಇಲ್ಲಿ ಆರ್ಯರಿದ್ದಾರೆ, ದ್ರಾವಿಡರಿದ್ದಾರೆ, ಟಾರ್ಟರರಿದ್ದಾರೆ, ತುರ್ಕರಿದ್ದಾರೆ, ಮೊಘಲರಿದ್ದಾರೆ, ಐರೋಪ್ಯರಿದ್ದಾರೆ. ಹೀಗೆ ಪ್ರಪಂಚದ ಎಲ್ಲಾ ರಾಷ್ಟ್ರಗಳವರೂ ಅಷ್ಟಷ್ಟುಮಟ್ಟಿಗೆ ಈ ಭೂಮಿಯಲ್ಲಿ ತಮ್ಮ ನೆತ್ತರ ಧಾರೆಯನ್ನು ಹರಿಸಿದ್ದಾರೆ. ಇನ್ನು ಭಾಷೆಗಳ ವಿಚಾರ ಹೇಳುವುದಾದರೆ, ಇಲ್ಲಿ ಅತಿ ಆಶ್ಚರ್ಯಕರವಾದ ರೀತಿಯ ಸಮ್ಮಿಶ್ರಣವುಂಟು. ವರ್ತನೆಗಳು, ಆಚರಣೆಗಳಲ್ಲಿ ಐರೋಪ್ಯ ಮತ್ತು ಪೌರಸ್ತ್ಯದೇಶ ಜನಾಂಗಗಳಲ್ಲಿ ಕಾಣುವುದಕ್ಕಿಂತ ಹೆಚ್ಚಾಗಿ

ಭಾರತೀಯ ಜನಾಂಗಗಳ ನಡುವೆಯೇ ಹೆಚ್ಚು ವ್ಯತ್ಯಾಸಗಳು ಕಂಡುಬರುತ್ತವೆ.

ನಮ್ಮ ಪವಿತ್ರವಾದ ಪರಂಪರೆಯಲ್ಲಿ ಕಂಡುಬರುವ ಒಂದು ಸರ್ವಸಮಾನವಾದ ನೆಲೆ ಎಂದರೆ, ನಮ್ಮ ಧರ್ಮ. ಇದೊಂದೇ ನಮ್ಮ ಸಾಮಾನ್ಯ ನೆಲೆಗಟ್ಟಿನ ಮೇಲೆ ನಾವು ನಮ್ಮ ನಿರ್ಮಾಣವನ್ನು ಕೈಕೊಳ್ಳಬೇಕು. ಯೂರೋಪಿನಲ್ಲಿ ರಾಜಕೀಯ ವಿಚಾರಗಳು ರಾಷ್ಟ್ರೀಯ ಏಕತೆಯನ್ನು ರೂಪಿಸುತ್ತವೆ. ಏಷ್ಯಾದಲ್ಲಿಯಾದರೋ, ಧಾರ್ಮಿಕವಿಚಾರಗಳು ರಾಷ್ಟ್ರೀಯ ಏಕತೆಯನ್ನು ರೂಪಿಸುತ್ತವೆ. ಆದ್ದರಿಂದ ಭಾರತದ ಭವಿಷ್ಯದ ನಿರ್ಮಾಣಕ್ಕೆ ಧಾರ್ಮಿಕ ಏಕತೆಯೇ ಮೊದಲ ಸ್ಥಿತಿಯಾಗುವುದು ಅತ್ಯವಶ್ಯವಾಗಿದೆ. ಈ ಭೂಮಿಯ ಉದ್ದಗಲಗಳಲ್ಲಿ ಸರ್ವತ್ರ ಒಂದು ಧರ್ಮವನ್ನು ಗುರುತಿಸುವುದಾಗಬೇಕು. 'ಒಂದು ಧರ್ಮ' ಎಂದು ನಾನು ಹೇಳುತ್ತಿರುವುದರ ಅಭಿಪ್ರಾಯವೇನು? ಕ್ರೈಸ್ತರು ಅಥವಾ ಮಹಮದೀಯರು ಅಥವಾ ಬೌದ್ಧರು ಗ್ರಹಿಸುವ ಹಾಗೆ ಒಂದು ಧರ್ಮ ಎಂಬ ಅರ್ಥದಲ್ಲಿ ಅಲ್ಲ. ಸಿದ್ಧಾಂತಗಳಲ್ಲಿ ಯಾವುದೇ ಬಗೆಯ ವ್ಯತ್ಯಾಸಗಳಲಿ, ಅವುಗಳ ಸಮರ್ಥನೆಗಳಲ್ಲಿ ಎಷ್ಟೇ ಭಿನ್ನತೆಗಳು ಇರಲಿ, ನಮ್ಮ ಧರ್ಮ ಎಲ್ಲ ಪಂಗಡಗಳಿಗೂ ಸರ್ವಸಮಾನವಾಗಿರುವ ಕೆಲವು ಸರ್ವಸಮ್ಮತ ನೆಲೆಗಳನ್ನು ಹೊಂದಿದೆಯೆಂಬುದು ನಮಗೆ ಗೊತ್ತು. ಕೆಲವು ವಿಶಿಷ್ಟ, ಸರ್ವಸಮ್ಮತ ಆದ ನೆಲೆಗಳುಂಟು. ಅವುಗಳ ಮಿತಿಗಳಲ್ಲಿಯೇ ಈ ನಮ್ಮ ಧರ್ಮ ಬೆರಗುಂಟುಮಾಡುವಂತಹ ಪರ್ಯಾಯಗಳನ್ನು ಒಪ್ಪಿಕೊಳ್ಳುತ್ತದೆ ; ವಿಚಾರಮಾಡಲು, ನಮ್ಮ ಬದುಕನ್ನು ನಾವು ಕಟ್ಟಿಕೊಳ್ಳಲು ಅಪಾರಪ್ರಮಾಣದ ಸ್ವಾತಂತ್ರ್ಯವಿರುತ್ತದೆ. ನಮಗೆಲ್ಲ, ಈ ಬಗ್ಗೆ ನಮ್ಮಲ್ಲಿ ಚಿಂತಿಸುವ ಕೆಲವರಿಗಾದರೂ, ಇದು ತಿಳಿದಿರುವುದೇ ಆಗಿದೆ. ನಮಗೆ ಈಗ ಬೇಕಾಗಿರುವುದು ಎಂದರೆ, ನಮ್ಮ ಧರ್ಮದ ಪ್ರಾಣದಾಯಕವಾದ ಈ ಸರ್ವಸಮ್ಮತ ಸಿದ್ಧಾಂತಗಳನ್ನು ಪ್ರಕಟಪಡಿಸುವುದು. ಈ ನಾಡಿನ ಉದ್ದಗಲಗಳಲ್ಲಿ ಪೂರ್ತಿಯಾಗಿ ಪ್ರತಿಯೊಂದು ಗಂಡು, ಹೆಣ್ಣು, ಮಗು ಕೂಡ ಅವನ್ನು ಅರ್ಥ ಮಾಡಿಕೊಳ್ಳಬೇಕು, ಅರಿವಿಗೆ ತಂದುಕೊಳ್ಳಬೇಕು. ತಮ್ಮ ಜೀವನದಲ್ಲಿ ಅನುಷ್ಠಿಸುವುದಾಗಬೇಕು. ಇದು ಮೊದಲ ಹೆಜ್ಜೆ; ಆದ್ದರಿಂದ ಅದಕ್ಕೆ ಲಕ್ಷ್ಯ ಕೊಡಬೇಕು.

ಏಷ್ಯಾದಲ್ಲಿ, ವಿಶೇಷವಾಗಿ ಭಾರತದಲ್ಲಿ ಜನಾಂಗಗಳ ತೊಡಕುಗಳು, ಭಾಷೆಗಳ ತೊಡಕುಗಳು, ಸಮಾಜವಿಷಯಗಳ ತೊಡಕುಗಳೂ, ರಾಷ್ಟ್ರಸಂಬಂಧವಾದ ತೊಡಕುಗಳು ಎಲ್ಲವೂ ಧರ್ಮದ ಈ ಒಗ್ಗೂಡಿಸುವ ಪ್ರಭಾವದ ಎದುರು ಹೇಗೆ ಕರಗಿಹೋಗುತ್ತವೆ ಎಂಬುದನ್ನು ನಾವು ಕಾಣುತ್ತೇವೆ. ಭಾರತೀಯ ಮನಸ್ಸಿಗೆ ಈ ಧಾರ್ಮಿಕ ಧ್ಯೇಯಾದರ್ಶಗಳಿಗಿಂತ ಉನ್ನತವಾದ್ದು ಯಾವುದೂ ಇಲ್ಲವೆಂಬುದು ನಮಗೆ ತಿಳಿದಿದೆ. ಇದೇ ಭಾರತೀಯಜೀವನದ ಪ್ರಧಾನಧೋರಣೆ, ನಾವು ಕೆಲಸಮಾಡಲು ಇರುವ ಅಡೆತಡೆಗಳಿಲ್ಲದ ದಾರಿ. ಧರ್ಮದ ಧ್ಯೇಯಾದರ್ಶಗಳೇ ಅತ್ಯುಚ್ಚವಾದ ಧ್ಯೇಯಾದರ್ಶಗಳೆನ್ನುವುದು ದಿಟ ಎನ್ನುವುದು ಮಾತ್ರವಲ್ಲ, ಭಾರತದ



ವಿಷಯದಲ್ಲಿ ಅದೊಂದೇ ಸಾಧನೆಗೆ ಇರುವ ಶಕ್ಯವಾದ ವಿಧಾನ. ಇದನ್ನು ಬಲಪಡಿಸದೆ, ಬೇರಾವುದೇ ರೀತಿಯಲ್ಲಿ ಸಾಧನೆಮಾಡುವುದು ಎಂದರೆ, ಅದು ವಿನಾಶಕರವೇ ಸರಿ. ಆದ್ದರಿಂದ ಭವಿಷ್ಯಭಾರತದ ನಿರ್ಮಾಣದಲ್ಲಿ ಮೊದಲ ಆಧಾರಫಲಕ ಎಂದರೆ, ಯುಗಗಳ ಹೆಬ್ಬಂಡೆಯಲ್ಲಿ ಕಡಿದು ಮಾಡಿದ ಮೊದಲ ಮೆಟ್ಟಿಲು ಎಂದರೆ, ಈ ಧರ್ಮದ ಒಗ್ಗೂಡಿಸುವಿಕೆ. ನಾವೆಲ್ಲ ದ್ವೈತಿಗಳಿರಲಿ, ಸೀಮಿತಾರ್ಥದಲ್ಲಿ ಅದ್ವೈತಿಗಳಿರಲಿ, ಅಥವಾ (ವಿಶಾಲಾರ್ಥದಲ್ಲಿ) ಏಕತತ್ತ್ವವಾದಿಗಳಾಗಿರಲಿ, ಶೈವರಿರಲಿ, ವೈಷ್ಣವರಿರಲಿ, ಪಾಶುಪತರಿರಲಿ ಹೀಗೆ ಯಾವುದೇ ಪಂಥಕ್ಕೆ ಸೇರಿರಲಿ, ಹಿಂದುಗಳಾದ ನಮಗೆ ಸರ್ವಸಮ್ಮತವಾದ, ಹಿಂದಿನಿಂದ ಬಂದ ಕೆಲವು ವಿಶಿಷ್ಟ ವಿಚಾರಗಳಿವೆ. ನಮ್ಮ ವ್ಯಕ್ತಿಗತ ಸುಸ್ಥಿತಿಗಾಗಿ, ಜನಾಂಗದ ಸುಸ್ಥಿತಿಗಾಗಿ ನಮ್ಮ ನಡುವಿನ ಸಣ್ಣಪುಟ್ಟ ವಿವಾದಗಳನ್ನೂ ಭಿನ್ನಾಭಿಪ್ರಾಯಗಳನ್ನೂ ಬಿಟ್ಟುಬಿಡಬೇಕಾದ ಕಾಲ ಈಗ ಬಂದಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗಿದೆ. ವಿವಾದಗಳು ಸಂಪೂರ್ಣವಾಗಿ ತಪ್ಪು ಎಂಬುದನ್ನು ನಿಶ್ಚಯಮಾಡಿಕೊಳ್ಳಿ. ಅವನ್ನು ನಮ್ಮ ಶಾಸ್ತ್ರಗ್ರಂಥಗಳು ಖಂಡಿಸಿವೆ ; ನಮ್ಮ ಪೂರ್ವಜರು ಅವನ್ನು ನಿಷೇಧಿಸಿದ್ದಾರೆ. ಯಾರ ಸಂತತಿಯವರು ನಾವು ಎಂದು ಹೇಳಿಕೊಳ್ಳುತ್ತೇವೆಯೋ ಯಾರ ರಕ್ತ ನಮ್ಮ ನರನಾಡಿಗಳಲ್ಲಿ ಹರಿಯುತ್ತಿದೆಯೋ ಆ ಮಹಾಪುರುಷರು ತಮ್ಮ ಸಂತತಿಯವರು ಈ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳಿಗಾಗಿ ಕಾದಾಡುವುದನ್ನು ತಿರಸ್ಕಾರಪೂರ್ವಕವಾಗಿ ಕಾಣುತ್ತಾರೆ.

ವಿವಾದಗಳನ್ನು ಕೈಬಿಡುವುದರಿಂದ ಉಳಿದ ಎಲ್ಲ ಶ್ರೇಯಸ್ಸುಗಳೂ ಕೈಗೂಡುತ್ತವೆ. ಜೀವವಾಹಿನಿ ರಕ್ತ ಸದೃಢವಿದ್ದಾಗ, ಶುದ್ಧವಾಗಿದ್ದಾಗ ಶರೀರದೊಳಗೆ ಯಾವ ರೋಗಾಣುವೂ ಬದುಕಲಾರದು. ನಮ್ಮ ಜೀವವಾಹಿನಿ ರಕ್ತ ಆಧ್ಯಾತ್ಮಿಕತೆ. ಅದು ಸ್ವಚ್ಛವಾಗಿ ಹರಿದಾಗ, ಅದು ಸದೃಢವಾಗಿ, ಶುದ್ಧವಾಗಿ, ಸತ್ತ್ವಯುತವಾಗಿ ಹರಿದಾಗ ಎಲ್ಲವೂ ಸರಿಯಾಗಿರುತ್ತದೆ. ರಾಜಕೀಯ, ಸಾಮಾಜಿಕ ಮತ್ತು ಇತರ ಯಾವುದೇ ತೆರನ ಪ್ರಾಪಂಚಿಕ ಕೊರತೆಗಳು, ದೇಶದ ದಾರಿದ್ರ್ಯ ಸಹ, ಆ ರಕ್ತ ಶುದ್ಧವಾಗಿದ್ದರೆ ಎಲ್ಲವೂ ಪರಿಹಾರವಾಗಿಬಿಡುತ್ತವೆ. ಏಕೆಂದರೆ, ರೋಗಾಣು ಹೊರಕ್ಕೆಸೆಯಲ್ಪಟ್ಟರೆ, ಬೇರೇನೂ ರಕ್ತದೊಳಗೆ ಪ್ರವೇಶಿಸಲು ಸಮರ್ಥವಾಗದು. ಆಧುನಿಕ ವೈದ್ಯವಿಜ್ಞಾನದ ದೃಷ್ಟಾಂತವೊಂದನ್ನು ಎತ್ತಿಕೊಳ್ಳಬಹುದಾದರೆ, ಒಂದು ರೋಗ ಕಾಣಿಸಿಕೊಳ್ಳಬೇಕಾದರೆ ಎರಡು ಕಾರಣಗಳಿರಬೇಕು : ಒಂದು, ಯಾವುದೋ ಹೊರಗಿನ ಕೆಟ್ಟ ರೋಗಾಣು ; ಇನ್ನೊಂದು, ದೇಹದ ಸ್ಥಿತಿ. ಶರೀರವು ರೋಗಾಣುಗಳ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ಸ್ಥಿತಿಯಲ್ಲಿರುವವರೆಗೆ, ಶರೀರವು ರೋಗಾಣುಗಳು ಪ್ರವೇಶಿಸಿ, ಜೀವಿಸಿ, ಬಹುಸಂಖ್ಯೆಯಲ್ಲಿ ಬೆಳೆಯುವ ಮಟ್ಟಿಗೆ ವೀರ್ಯಪುಷ್ಟಿ ಕುಗ್ಗಿ ಸವೆಯುವ ಸ್ಥಿತಿಗೆ ಬರುವವರೆಗೆ, ಪ್ರಪಂಚದ ಯಾವುದೇ ರೋಗಾಣುವಿಗೆ ಶರೀರದಲ್ಲಿ

ರೋಗವನ್ನು ಉತ್ಪಾದಿಸುವ ಶಕ್ತಿ ಸಾಧ್ಯವಿಲ್ಲ. ವಾಸ್ತವವಾಗಿ, ಪ್ರತಿಯೊಬ್ಬನ ಶರೀರದಲ್ಲಿಯೂ ಲಕ್ಷಾವಧಿ ಸೂಕ್ಷ್ಮಜೀವಿಗಳು ನಿರಂತರವಾಗಿ ತಮ್ಮ ಪಾಡಿಗೆ ತಾವು ಇದ್ದುಕೊಂಡಿರುತ್ತವೆ. ಆದರೆ ಎಲ್ಲಿಯವರೆಗೆ ಶರೀರ ಸತ್ತ್ವಯುತವಾಗಿರುವುದೋ ಅಲ್ಲಿಯವರೆಗೆ ಅದಕ್ಕೆ ಅವುಗಳ ಅರಿವಿರುವುದಿಲ್ಲ. ಯಾವಾಗ ಶರೀರ ದುರ್ಬಲವಾಯಿತೋ, ಆಗ ಆ ಸೂಕ್ಷ್ಮಜೀವಿಗಳು ಅದನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತವೆ, ರೋಗವನ್ನು ಉತ್ಪಾದಿಸುತ್ತವೆ. ಹಾಗೆಯೇ ರಾಷ್ಟ್ರೀಯ ಜೀವನದ ವಿಚಾರ ಕೂಡ. ರಾಷ್ಟ್ರೀಯ ಶರೀರಸೌಷ್ಠವ ದುರ್ಬಲವಾಗಿದ್ದಾಗ, ಆ ಜನಸಮುದಾಯದ ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳಲ್ಲಿ, ಶೈಕ್ಷಣಿಕ ಬೌದ್ಧಿಕ ಸ್ಥಿತಿಗತಿಗಳಲ್ಲಿ ಎಲ್ಲ ಬಗೆಯ ರೋಗಾಣುಗಳೂ ಶಾರೀರಿಕವ್ಯವಸ್ಥೆಯೊಳಗೆ ಮುತ್ತಿಕೊಳ್ಳುತ್ತವೆ, ರೋಗವನ್ನು ಉತ್ಪಾದಿಸುತ್ತವೆ. ಆದ್ದರಿಂದ ಇದಕ್ಕೆ ಪರಿಹಾರೋಪಾಯವೆಂದರೆ, ನಾವು ರೋಗದ ಮೂಲಕ್ಕೆ ಹೋಗಬೇಕು. ಎಲ್ಲ ಮಾಲಿನ್ಯಗಳಿಂದಲೂ ರಕ್ತವನ್ನು ಶುದ್ಧಗೊಳಿಸಬೇಕು. ಎಲ್ಲ ಹೊರಗಿನ ವಿಷಯಗಳಿಂದ ಪ್ರತಿರೋಧವನ್ನು ಬೆಳಸಿಕೊಂಡು, ಅವನ್ನು ಕಿತ್ತೊಗೆಯಲು ಸಮರ್ಥವಾಗುವಂತೆ ಪುರುಷತ್ವವನ್ನು ದೃಢಗೊಳಿಸಬೇಕು, ರಕ್ತವನ್ನು ಶುದ್ಧಗೊಳಿಸಬೇಕು, ಶರೀರವನ್ನು ಸತ್ತ್ವಯುತವಾಗಿ ಮಾಡಬೇಕು : ಇದೇ ಒಂದು ರೋಗಶುಶ್ರೂಷೆ.

ನಮ್ಮ ಸತ್ತ್ವ, ನಮ್ಮ ದಾರ್ಢ್ಯ, ಅಲ್ಲ, ನಮ್ಮ ರಾಷ್ಟ್ರಜೀವನ ಎಂದರೆ ನಮ್ಮ ಧರ್ಮವೇ ಎಂಬುದನ್ನು ನಾವು ನೋಡಿದ್ದೇವೆ. ಇದು ನ್ಯಾಯವೋ ಅಲ್ಲವೋ, ತಪ್ಪೋ ಸರಿಯೋ, ಮುಂದೆ ಇದರಿಂದ ಅನುಕೂಲವೋ ಅಲ್ಲವೋ, ಧರ್ಮದಲ್ಲಿ ಈ ಪುಷ್ಟಿಯನ್ನು ಪಡೆಯುವುದರ ವಿಚಾರವನ್ನು ಇಲ್ಲಿ ನಾನು ಚರ್ಚಿಸುವುದಿಲ್ಲ. ಒಳಿತಿಗಾಗಿ, ಕೆಡುಕಿಗಾಗಿ ಅದು ಇರುವುದಂತೂ ನಿಜ. ನಮ್ಮ ಧರ್ಮದಲ್ಲಿ ನನಗಿರುವ ಹಾಗೆ ಅದೇ ಶ್ರದ್ಧೆ ನಿಮಗೆ ಇರದಿದ್ದರೂ, ನೀವು ಅದನ್ನು ಮೀರಿ ಹೋಗಲಾರಿರಿ. ಈಗಲೂ ಯಾವಾಗಲೂ ಅದನ್ನು ನೀವು ಹಿಡಿಯಿರಿ. ಅದನ್ನೇ ಸಮರ್ಥಿಸಿರಿ. ನೀವು ಅದಕ್ಕೆ ಬದ್ಧರಾಗಿದ್ದೀರಿ. ಅದನ್ನು ನೀವು ಕೈಬಿಟ್ಟರೋ, ನುಚ್ಚುನೂರಾಗಿಹೋಗುತ್ತೀರಿ. ಅದು ನಮ್ಮ ಜನಾಂಗದ ಜೀವಾಳ. ಅದನ್ನು ನಾವು ಗಟ್ಟಿಗೊಳಿಸಬೇಕು. ನೀವು ಅದರ ವಿಷಯದಲ್ಲಿ ತುಂಬ ಎಚ್ಚರ ವಹಿಸಿದಿರೆಂದೇ, ಅದರ ಸಲುವಾಗಿ ಉಳಿದ ಎಲ್ಲವನ್ನೂ ತ್ಯಾಗಮಾಡಿದಿರೆಂದೇ ನೀವು ಶತಮಾನಗಳ ಆಘಾತಗಳನ್ನು ತಾಳಿಕೊಂಡಿದ್ದೀರಿ. ನಿಮ್ಮ ಪೂರ್ವಜರು ಎಲ್ಲವನ್ನೂ, ಸಾಕ್ಷಾತ್ತಾಗಿ ಸಾವನ್ನು ಕೂಡ, ಧೈರ್ಯದಿಂದ ಎದುರಿಸಿದರು. ತಮ್ಮ ಧರ್ಮವನ್ನು ರಕ್ಷಿಸಿದರು. ವಿದೇಶದ ಆಕ್ರಮಣಕಾರ ದೇವಾಲಯದ ಮೇಲೆ ದೇವಾಲಯವನ್ನು ಹಾಳು ಗೆಡಹಿದನು. ಆದರೆ ಆ ಉರುಬು ತಗ್ಗಿದ ಕೂಡಲೇ ದೇವಾಲಯದ ಶಿಖರಸ್ತರಗಳು ಮತ್ತೆ ಮತ್ತೆ ಮೇಲೇಳುತ್ತ ಹೋದುವು. ದಕ್ಷಿಣ ಭಾರತದ ಕೆಲವು ಹಳೆಯ



ದೇವಾಲಯಗಳು, ಗುಜರಾತಿನ ಸೋಮನಾಥದಂತಹವು, ನಿಮಗೆ ಗುಡ್ಡದಷ್ಟು ವಿವೇಕವನ್ನು ಕಲಿಸಬಲ್ಲುವು, ಪುಸ್ತಕಗಳ ರಾಶಿರಾಶಿಗಿಂತ ಸೂಕ್ಷ್ಮವಾದ ಒಳನೋಟಗಳನ್ನು ಜನಾಂಗದ ಇತಿಹಾಸದ ಬಗ್ಗೆ ನೀಡಬಲ್ಲುವು. ಈ ದೇವಾಲಯುಗಳು ಹೇಗೆ ನೂರಾರು ಆಕ್ರಮಣಗಳ, ನೂರಾರು ಪುನರುಜ್ಜೀವನಗಳ, ನಿರಂತರವಾಗಿ ವಿನಾಶಕ್ಕೆ ತುತ್ತಾಗುವ, ನಿರಂತರವಾಗಿ ಅವಶೇಷಗಳ ಅಡಿಯಿಂದ ಮೇಲೇಳುವ, ನವತಾರುಣ್ಯದೊಂದಿಗೆ ಎಂದಿನಂತೆ ಬಲಿಷ್ಠವಾಗುವ ಚಹರೆಗಳನ್ನು ತೋರಿಸುತ್ತವೆ ಎಂಬುದನ್ನು ಗಮನಿಸಿ. ಅದೀಗ ರಾಷ್ಟ್ರೀಯ ಮನಸ್ಸು, ಅದೀಗ ಜೀವಶಕ್ತಿ. ಅದನ್ನು ಹಿಡಿದು ನಡೆಯಿರಿ, ನಿಮ್ಮನ್ನು ಅದು ವೈಭವದತ್ತ ಒಯ್ಯುತ್ತದೆ; ಅದನ್ನು ಕೈಬಿಡಿ, ನೀವು ಸಾಯುತ್ತೀರಿ. ಆ ಜೀವಶಕ್ತಿಯನ್ನು ಮೀರಿ ನೀವು ಹೆಜ್ಜೆ ಹಾಕಿದ ಕ್ಷಣವೇ ಮೃತ್ಯುವೊಂದೇ ಅದರ ಫಲಿತಾಂಶ; ಸರ್ವನಾಶವೊಂದೇ ಅದರ ಪರಿಣಾಮ; ಬೇರೆ ವಿಷಯಗಳು ಬೇಕಾಗಿಲ್ಲ ಎಂಬುದು ನನ್ನ ಅಭಿಪ್ರಾಯವಲ್ಲ. ರಾಜಕೀಯ ಅಥವಾ ಸಾಮಾಜಿಕ ಬೆಳವಣಿಗೆಗಳು ಅನಾವಶ್ಯಕವೆಂದು ನನ್ನ ಅಭಿಪ್ರಾಯವಲ್ಲ. ನನ್ನ ಆಶಯವೆಂದರೆ : ಅವು ಗೌಣವಾದವು, ಧರ್ಮ ಪ್ರಮುಖವಾದುದು ಎಂಬುದನ್ನು ನೀವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು ಎನ್ನುವುದು. ಭಾರತೀಯ ಮನಸ್ಸು ಮೊದಲು ಧಾರ್ಮಿಕವಾದ್ದು, ಬಳಿಕ ಬೇರೆಲ್ಲ.

* * * *

## ೩. ಭಾರತ ಪತಿತವೇ ?

ಈ ಪವಿತ್ರವಾದ ಭೂಮಿಯ ಮೇಲೆ ನಿಂತವನು ಅವನು ಯಾವನೇ ಇರಲಿ, ಅವನು ಪರಕೀಯನಿರಲಿ ಮಣ್ಣಿನ ಮಗನಿರಲಿ, ತಾನು – ಪಾಶವೀ ಪ್ರವೃತ್ತಿಯಿಂದ ತನ್ನ ಆತ್ಮ ಅಧೋಗತಿಗೆ ಇಳಿದಿರದಿದ್ದರೆ – ಪೃಥ್ವಿಯ ಉತ್ಕೃಷ್ಟವೂ ಪರಿಶುದ್ಧವೂ ಆದ ಪ್ರಜೆಗಳ, ಯಾರ ಉಗಮವನ್ನು ಗುರುತಿಸುವಲ್ಲಿ ಇತಿಹಾಸ ವಿಫಲವಾಗಿದೆಯೋ, ಯಾರು ಶತಮಾನಗಳ ಉದ್ದಕ್ಕೆ ಪಶುವನ್ನು ದೈವದ ನೆಲೆಗೆ ಏರಿಸಲು ಪ್ರಯತ್ನಿಸುತ್ತಿರುವರೋ ಅವರ, ಸಜೀವ ಚಿಂತನೆಗಳಿಂದ ಸುತ್ತುವರಿದಿರುವವನೆಂದು ತನ್ನನ್ನು ತಿಳಿಯುತ್ತಾನೆ. ಆಧ್ಯಾತ್ಮದ ಸ್ಪಂದನಗಳಿಂದ ಆವರಣವೇ ತುಂಬಿಹೋಗಿದೆ. ಈ ನೆಲ ತತ್ತ್ವಜ್ಞಾನಕ್ಕೆ, ನೀತಿಶಾಸ್ತ್ರಕ್ಕೆ ಹಾಗೂ ಆಧ್ಯಾತ್ಮಿಕತೆಗೆ ಪುಣ್ಯಭೂಮಿಯಾಗಿದೆ. ಪ್ರಾಣಿಸಂಗೋಪನೆಗೆ ಮಾಡುವ ನಿರಂತರ ಹೋರಾಟಕ್ಕೆ ವ್ಯವಧಾನ ಪಡೆಯುವ ಪ್ರವೃತ್ತಿಗೆ, ಪಾಶವಿಕತೆಯ ಕವಚವನ್ನು ಕಿತ್ತೊಗೆಯಲು ಬೇಕಾಗುವ ತರಬೇತಿಗೆ, ಅಳಿಯದ ಆತ್ಮವಾಗಿ, ಹುಟ್ಟು ಸಾವುಗಳಿಲ್ಲವಾಗಿ, ಸದಾ ಧನ್ಯಜೀವಿಯಾಗಿ ವಿಕಾಸಗೊಳ್ಳುವುದಕ್ಕೆ ಇದು ಪುಣ್ಯಭೂಮಿಯಾಗಿದೆ. ಸಂತುಷ್ಟಿಯ ಪಾತ್ರ ಪೂರ್ಣಗೊಂಡ, ಸಂಕಟದ ಪಾತ್ರ ಮತ್ತೂ ಪೂರ್ಣಗೊಂಡ, ಈ ಘಟ್ಟದಲ್ಲಿ ಇದೆಲ್ಲ ನಿರರ್ಥಕವೆಂಬುದನ್ನು ಮನುಷ್ಯ ಸರ್ವಪ್ರಥಮವಾಗಿ ಕಂಡ ನೆಲೆಯಿದು ; ಇಲ್ಲಿ, ಎಲ್ಲಕ್ಕೂ ಮೊದಲು, ಏರುಜವ್ವನದಲ್ಲಿ, ಸುಖದ ಸುಪ್ಪತ್ತಿಗೆಯಲ್ಲಿ, ವೈಭವದ ತುತ್ತತುದಿಯಲ್ಲಿ ಅಧಿಕಾರಶಕ್ತಿಯ ಪಾರಮ್ಯದಲ್ಲಿ ಭ್ರಾಂತಿಯ ಸಂಕಲೆಗಳನ್ನು ಕತ್ತರಿಸಿ ಎಸೆಯಲಾಯಿತು. ಇಲ್ಲಿ, ಮಾನವಕುಲದ ಮಹಾಸಾಗರದಲ್ಲಿ ನೋವು–ನಲಿವುಗಳ, ಶಕ್ತಿ–ದೌರ್ಬಲ್ಯಗಳ, ಸಿರಿತನ–ಬಡತನಗಳ, ಸುಖ–ದುಃಖಗಳ, ಮುಗುಳ್ನಗೆ–ಕಂಬನಿಗಳ, ಸಾವು–ಬದುಕುಗಳ, ಚಿರಶಾಂತಿ ಮತ್ತು ಸಮಾಧಾನ ಸ್ಥಿತಿಗಳ ದ್ರವೀಭೂತವಲಯದ, ಪ್ರಬಲ ಪ್ರವಾಹಗಳ ತೀಕ್ಷ್ಣವಾದ ಅನ್ಯೋನ್ಯಕ್ರಿಯೆ ಪ್ರತಿಕ್ರಿಯೆಗಳ ನಡುವೆ ವಿರಕ್ತಿಯ ಸಿಂಹಾಸನವೊಂದು ಮೇಲೆದ್ದಿತು. ಈ ನೆಲದಲ್ಲಿ, ಸಾವು ಬದುಕುಗಳ, ಬದುಕುವ ಹಂಬಲದ ಮಹಾಸಮಸ್ಯೆಗಳು ಮತ್ತು ಬದುಕನ್ನು ಕಾಪಾಡಿಕೊಳ್ಳಬೇಕೆಂಬ ನಿರರ್ಥಕ ಹುಚ್ಚು ಹೋರಾಟಗಳು ದುಃಖಸಂಚಯಕ್ಕೆ ದಾರಿಮಾಡುವುವೆಂಬುದನ್ನು ಮೊದಲು ಗ್ರಹಿಸಿ ಜಯಿಸುವ, ಪರಿಹಾರ ಕಂಡುಕೊಳ್ಳುವ ಕೆಲಸವಾಯಿತು. ಎಷ್ಟರಮಟ್ಟಿಗೆ ಎಂದರೆ, ಈ ಹಿಂದೆ ಅವು ಇರಲೇ ಇಲ್ಲ, ಇಲ್ಲಿಂದ ಮುಂದೆ ಇರುವುದೂ ಇಲ್ಲ ಎನ್ನುವ ಮಟ್ಟಿಗೆ.



ಏಕೆಂದರೆ, ಇಲ್ಲಿ, ಇಲ್ಲಿ ಮಾತ್ರವೇ, ಬದುಕು ಕೂಡ ಒಂದು ಕೆಡುಕು (ಮಿಥ್ಯೆ), ಇನ್ನೇನೋ ಒಂದರ ಛಾಯೆ ಮಾತ್ರವೇ ಸತ್ಯ ಎಂದು ಶೋಧಿಸಲಾಯಿತು. ಈ ನಾಡಿನಲ್ಲಿ ಮಾತ್ರವೇ ಧರ್ಮ ನಡೆಯಲ್ಲಿದೆ, ಸತ್ಯವೆನ್ನಿಸಿದೆ. ಇಲ್ಲಿ ಮಾತ್ರವೇ ಗಂಡು ಹೆಣ್ಣುಗಳು ಆ ತಮ್ಮ ಗುರಿಯನ್ನು ಸಾಧಿಸಲು ಧೈರ್ಯವಾಗಿ ಧುಮುಕುವುದು, ಬೇರೆ ದೇಶಗಳಲ್ಲಿ ತಮ್ಮ ದುರ್ಬಲರಾದ ಸೋದರರನ್ನು ಸುಲಿಗೆಮಾಡುವ ಮೂಲಕ ಬದುಕಿನ ಸುಖಗಳನ್ನು ಪಡೆಯಲು ಹುಚ್ಚುಸಾಹಸ ಮಾಡುವ ಹಾಗೆ. ಇಲ್ಲಿ, ಇಲ್ಲಿ ಮಾತ್ರವೇ ಮಾನವನ ಹೃದಯ ಬರಿಯ ಮಾನವರನ್ನೇ ಅಲ್ಲದೆ, ಹಕ್ಕಿಗಳು ಪ್ರಾಣಿಗಳು ಮತ್ತು ಮರಗಿಡಗಳನ್ನು ಕೂಡ ತಮ್ಮವಾಗಿ ಸೇರಿಸಿಕೊಳ್ಳುವ ಹಾಗೆ ವಿಶಾಲವಾಗಿರುವುದು. ಪರಮೋಚ್ಚ ದೇವತೆಗಳಿಂದ ಮರಳುಕಣಗಳವರೆಗೆ, ಅತ್ಯುನ್ನತವಾದವೂ ಅತ್ಯಧಮವಾದವೂ ಎಲ್ಲಾ ಮಹತ್ತಾದುದು ಅನಂತವಾದುದು ಎಂಬ ನೆಲೆಗೇರಿ ಸ್ಥಾನಪಡೆಯುವುದು. ಇಲ್ಲಿ ಮಾತ್ರವೇ ಮಾನವ ಆತ್ಮ ವಿಶ್ವವನ್ನು ಒಂದು ಏಕಾಖಂಡಘಟಕವಾಗಿ, ಅದರ ಪ್ರತಿ ನಾಡಿಮಿಡಿತವೂ ತನ್ನದೇ ನಾಡಿಮಿಡಿತ ಎಂಬ ಭಾವನೆಯೊಂದಿಗೆ ಅಭ್ಯಾಸಮಾಡುವುದು.

ನಾವೆಲ್ಲ ಭಾರತದ ಅವನತಿಯ ಬಗ್ಗೆ ತುಂಬ ಕೇಳುತ್ತೇವೆ. ನಾನೂ ಹಾಗೆಂದೇ ನಂಬಿದ್ದ ಕಾಲವೊಂದಿತ್ತು. ಆದರೆ ಇಂದು, ಅನುಭವದ ಲಾಭದ ನೆಲೆಯ ಮೇಲೆ ನಿಂತು, ಅಡಚಣೆಗಳನ್ನು ಒಡ್ಡುವ ಮನಃಪ್ರವೃತ್ತಿಗಳ ಮಬ್ಬು ಕರಗಿದ ಕಣ್ಣುಗಳಿಂದ ನೋಡುವಾಗ, ಎಲ್ಲಕ್ಕಿಂತ ಹೆಚ್ಚಾಗಿ, ನನ್ನ ನೇರವಾದ ಸಂಪರ್ಕ ಕಾರಣವಾಗಿ ಅನ್ಯದೇಶಗಳ ಬಗ್ಗೆ ರಬ್ಬುರಬ್ಬಾದ ಬಣ್ಣಗಳ ಚಿತ್ರಗಳನ್ನು ತಕ್ಕ ಪ್ರಮಾಣದ ನೆರಳು ಬೆಳಕಿನ ಚಿತ್ರಗಳಾಗಿ ಮಂದಗೊಳಿಸಿ ನೋಡುವಾಗ, ವಿನಯಪೂರ್ವಕವಾಗಿ ನಾನು ಒಪ್ಪಿಕೊಳ್ಳುತ್ತೇನೆ, ನಾನು ತಿಳಿದಿರುವುದು ತಪ್ಪು ಎಂದು. ಎಲೈ, ಪವಿತ್ರ ಆರ್ಯಾವರ್ತವೇ, ನೀನು ಎಂದೂ ಅವನತಿ ಹೊಂದಿರಲಿಲ್ಲ. ಸಾರ್ವಭೌಮತ್ವದ ರಾಜದಂಡಗಳು ಭಗ್ನಗೊಂಡಿವೆ, ಬಿಸಾಡಿಹೋಗಿವೆ. ಅಧಿಕಾರದ ಚಂಡು ಕೈಯಿಂದ ಕೈಗೆ ಬದಲಾಗಿದೆ. ಆದರೆ ಭಾರತದಲ್ಲಿ ಆಸ್ಥಾನಗಳೂ ದೊರೆಗಳೂ ಎಲ್ಲೋ ಕೆಲವರನ್ನಷ್ಟೇ ಮುಟ್ಟಿವೆ. ಭಾರಿಯಾದ ಜನಸಮುದಾಯ, ತುಂಬ ದೊಡ್ಡವರಿಂದ ಹಿಡಿದು ತುಂಬ ಕೆಳಗಿರುವವರವರೆಗೆ, ತನ್ನದೇ ಆದ ಸ್ವಾಭಾವಿಕ ಹಾದಿಯಲ್ಲಿ ಸಾಗಲು ಸ್ವಾತಂತ್ರ್ಯ ಪಡೆದಿದೆ. ಪ್ರಚಲಿತ ರಾಷ್ಟ್ರೀಯಜೀವನ ಕೆಲವೊಮ್ಮೆ ಮಂದಗತಿಯಲ್ಲಿ, ಅರೆಯರಿವಿನಲ್ಲಿ, ಇನ್ನೊಮ್ಮೆ ತೀವ್ರಗತಿಯಲ್ಲಿ, ಜಾಗೃತಸ್ಥಿತಿಯಲ್ಲಿ ನಡೆದಿದೆ. ಜ್ಯೋತಿರ್ಮಯ ಶತಮಾನಗಳ ಅವಿಚ್ಛಿನ್ನವಾದ ದಶಕ–ದಶಕಗಳ ಮೆರವಣಿಗೆಯ ಮುಂದೆ, ಈ ಸರಣಿಯಲ್ಲಿ ಇಲ್ಲಿ ಅಲ್ಲಿ ಕೊಂಡಿಗಳು ಮಬ್ಬಾಗಿರುವುವಾದರೂ ಮುನ್ನಡೆಯುತ್ತಿದ್ದಂತೆ ಇನ್ನೂ ಅಧಿಕಪ್ರಕಾಶದಲ್ಲಿ ಉಜ್ವಲಗೊಳ್ಳುತ್ತಿರುವಾಗ, ಅಲ್ಲಿ, ನಮ್ಮ ತಾಯಿ, ನಮ್ಮ ಮಾತೃಭೂಮಿ, ತನ್ನದೇ ಆದ ಧೀರಗಂಭೀರವಾದ ಹೆಜ್ಜೆಗಳಲ್ಲಿ,

ತನ್ನ ಮಹೋಜ್ವಲಲಕ್ಷ್ಯವನ್ನು ಪೂರ್ಣಗೊಳಿಸಲೆಂದು ಸಾಗುತ್ತಿದ್ದಾಳೆ ; ದಾನವನನ್ನು ಮಾನವನನ್ನಾಗಿ, ಮಾನವನನ್ನು ದೇವನನ್ನಾಗಿ ಪುನಃಸೃಷ್ಟಿಗೊಳಿಸುವ ಆಕೆಯ ಆ ಲಕ್ಷ್ಯವನ್ನು ಭೂಮ್ಯಾಕಾಶಗಳ ಮೇಲಿನ ಯಾವ ಶಕ್ತಿಯೂ ತಡೆಯಲಾರದು.

ನನ್ನ ಸೋದರರೇ, ಈ ಮಹೋಜ್ಜ್ವಲಲಕ್ಷ್ಯವನ್ನು, ಉಪನಿಷತ್ತುಗಳ ಕಾಲದಷ್ಟು ಹಿಂದಿನ ಕಾಲದಿಂದಲೇ, ನಾವು ಲೋಕಕ್ಕೆ ಒಂದು ಪಂಥಾಹ್ವಾನವಾಗಿ ಸಾರಿದ್ದೇವೆ.

"ನ ಪ್ರಜಯಾ ನ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ"

ಎಂದರೆ, "ಸಂತತಿಯಿಂದ ಅಲ್ಲ, ಸಂಪತ್ತಿನಿಂದ ಅಲ್ಲ, ತ್ಯಾಗದಿಂದ ಮಾತ್ರವೇ ಅಮೃತತ್ವ ಲಭಿಸುತ್ತದೆ." ಜನಾಂಗದ ಮೇಲೆ ಜನಾಂಗ ಈ ಪಂಥಾಹ್ವಾನವನ್ನು ಸ್ವೀಕರಿಸಿದೆ. ಅಪೇಕ್ಷೆಗಳ ನೆಲೆಯಲ್ಲಿ ಈ ಲೋಕವ್ಯಾಪ್ತವಾದ ಒಗಟಿನ ರಹಸ್ಯವನ್ನು ಬಿಡಿಸುವುದರಲ್ಲಿ ತಮ್ಮೆಲ್ಲ ಪ್ರಯತ್ನಗಳನ್ನೂ ಮಾಡಿವೆ. ಆದರೆ ಎಲ್ಲವೂ ಈ ಹಿಂದೆ ವಿಫಲವಾಗಿವೆ. ಅಧಿಕಾರದ ವ್ಯಾಮೋಹ, ಹೊನ್ನಿನ ಸೆಳೆತ ಇವುಗಳಿಗೆ ಸಿಕ್ಕು ಕೆಡಕುಗಳ, ದುಃಖಗಳ ಭಾರದಲ್ಲಿ ಹಳೆಯ ಜನಾಂಗಗಳೆಲ್ಲ ಅಳಿದುಹೋಗಿವೆ; ಹೊಸವು ತತ್ತರಿಸಿ ಕುಸಿದುಬೀಳುವುದರಲ್ಲಿವೆ. ಶಾಂತಿಯೋ ಯುದ್ಧವೋ, ಸಹನೆಯೋ ಅಸಹಿಷ್ಣುತೆಯೋ, ಒಳ್ಳೆಯತನವೋ ಬುದ್ಧಿಶಕ್ತಿಯೋ, ತಾರ್ಕಿಕತೆಯೋ ಆಧ್ಯಾತ್ಮಿಕತೆಯೋ ಯಾವುದು ಉಳಿಯಬೇಕು ಎನ್ನುವ ಪ್ರಶ್ನೆಗೆ ಇನ್ನೂ ಪರಿಹಾರ ಸಿಕ್ಕಬೇಕಾಗಿದೆ. ನಮ್ಮ ಸಮಸ್ಯೆಯನ್ನು ಎಂದೋ ಹಿಂದೆಯೇ ಪರಿಹರಿಸಿಕೊಂಡಿದ್ದೇವೆ; ಅದೃಷ್ಟವೋ ದುರದೃಷ್ಟವೋ ಏನಾದರೂ ಸರಿಯೇ. ಅದಕ್ಕೆ ನಾವು ಅಂಟಿಕೊಂಡಿದ್ದೇವೆ, ಅಲ್ಲದೆ ಕಾಲಾಂತ್ಯದವರೆಗೆ ಹಾಗೆ ಅಂಟಿಕೊಂಡಿರುವವರೇ, ನಾವು. ನಮ್ಮ ಪರಿಹಾರ ಎಂದರೆ ಅಪ್ರಾಪಂಚಿಕತೆ, ತ್ಯಾಗ.

ಭಾರತೀಯ ಜೀವವ್ಯಾಪಾರದ ವಸ್ತುಮೂಲವೆಂದರೆ, ಭಾರತಮಾತೆಯ ನಿತ್ಯಗೀತಗಳ ಪಲ್ಲವಿ, ಅವಳ ಇರುವಿಕೆಯ ಬೆನ್ನೆಲುಬು, ಅವಳ ಜೀವಂತಿಕೆಯ ನೆಲೆಯೆಂದರೆ, ಅವಳ ಅಸ್ತಿತ್ವಸಾರದ ಮೂಲೋದ್ದೇಶವೆಂದರೆ, ಮಾನವಜಾತಿಯನ್ನು ಆಧ್ಯಾತ್ಮಿಕಗೊಳಿಸುವುದು. ತನ್ನ ಜೀವನಗತಿಯಲ್ಲಿ ಆಕೆ ಎಂದೂ ಅಡ್ಡದಾರಿ ಹಿಡಿಯಲಿಲ್ಲ– ಟಾರ್ಟರರು ಆಳಲಿ, ತುರ್ಕಿಗಳು ಆಳಲಿ, ಮೊಘಲರೋ ಇಂಗ್ಲಿಷರೋ ಆಳಲಿ.

ನಾನು ಸವಾಲು ಹಾಕುತ್ತೇನೆ : ಭಾರತ ತನ್ನ ರಾಷ್ಟ್ರೀಯ ಜೀವನದಲ್ಲಿ ಪ್ರಪಂಚವನ್ನೇ ಅಲ್ಲಾಡಿಸಬಲ್ಲ ಶಕ್ತಿಯಿದ್ದ ಆಧ್ಯಾತ್ಮಿಕ ಮಹಾಪುರುಷರಿಗೆ ಕೊರತೆ ಬಿದ್ದ ಒಂದೇ ಒಂದಾದರೂ ಅವಧಿಯಿತ್ತು ಎಂದು ಯಾರಾದರೂ ತೋರಿಸಲಿ, ನೋಡೋಣ. ಆದರೆ ಅವಳ ಪ್ರವರ್ತನೆ ಆಧ್ಯಾತ್ಮಿಕವಾದ್ದು. ಅದು ರಣಕಹಳೆಗಳು ಮೊಳಗುವುದರಿಂದಾಗಲಿ, ಸೈನಿಕದಳಗಳ ಪಥಸಂಚಲನದಿಂದಾಗಲಿ ಸಾಧ್ಯವಾಗುವಂತಹುದಲ್ಲ. ಭಾರತದ ಪ್ರಭಾವ ಪ್ರಪಂಚದ ಮೇಲೆ ಆಗಿರುವ



ಬಗೆಯೆಂದರೆ, ಅದು ಯಾರಿಗೂ ಸಪ್ಪುಳ ಕೇಳಿಸದೆ, ಯಾವ ಗುರುತನ್ನೂ ಮೂಡಿಸದೆ ಭೂಮಿಯ ಮೇಲೆ ತುಂಬು ಚೆಲುವಿನ ಹೂವುಗಳನ್ನು ಅರಳುವಂತೆ ಮೃದುವಾದ ಇಬ್ಬನಿ ಮಾಡುವ ಹಾಗೆ. ಈ ಪ್ರಭಾವ ಸ್ವಾಭಾವಿಕವಾಗಿ ಸೌಮ್ಯವೆಂಬ ಕಾರಣದಿಂದ, ಸ್ವದೇಶದ ಗಡಿಗಳೊಳಗೆ ಕ್ರಿಯಾಶೀಲವಾಗಿರುವುದರೊಂದಿಗೆ ಸ್ವದೇಶವನ್ನು ದಾಟಿ ಹೊರನಾಡುಗಳಿಗೆ ಕೂಡ ಚಾಚಿಕೊಳ್ಳಲು ಸನ್ನಿವೇಶಗಳು ಅನುಕೂಲಕರವಾಗಿ ಕೂಡಿಬರುವವರೆಗೆ ಕಾಯಬೇಕಾಯಿತು. ಹೀಗಿರುವಾಗ, ಸಾಮ್ರಾಜ್ಯಶಾಹಿ ಟಾರ್ಟರ, ಪಾರಸಿಕ, ಗ್ರೀಕ್, ಅರಬ್ ಇವು ಈ ನಾಡಿನೊಂದಿಗೆ ಹೊರದೇಶಗಳಿಗೆ ಸಂಪರ್ಕ ಕಲ್ಪಿಸಲು ಕಾರಣವಾದಾಗಲೆಲ್ಲ ಕೂಡಲೇ ಪ್ರಪಂಚವನ್ನೆಲ್ಲ ಇಲ್ಲಿಂದ ಹೊರವಾಗಿ ಹೋದ ಆಧ್ಯಾತ್ಮಿಕಪ್ರಭಾವ ತುಂಬಿ ಆವರಿಸಿತು. ಅವೇ ಸಂದರ್ಭಗಳು ಮತ್ತೊಮ್ಮೆ ನಮ್ಮ ಮುಂದೆ ಕಾಣಿಸಿಕೊಂಡಿವೆ. ನೆಲದ ಮೇಲೆ, ಸಾಗರದ ಮೇಲೆ ಆಂಗ್ಲ ರಾಜಮಾರ್ಗಗಳು, ಆ ಚಿಕ್ಕದ್ವೀಪದ ನಿವಾಸಿಗಳು, ಪ್ರಕಟಿಸಿರುವ ಅದ್ಭುತವಾದ ಅಧಿಕಾರಶಕ್ತಿ ಇವು ಮತ್ತೊಮ್ಮೆ ಭಾರತವನ್ನು ಪ್ರಪಂಚದ ಇತರ ಭಾಗಗಳೊಂದಿಗೆ ಸಂಪರ್ಕ ಪಡೆಯುವಂತೆ ಮಾಡಿವೆ. ಪ್ರವರ್ತನೆ ಈಗಾಗಲೇ ಆರಂಭಗೊಂಡಿದೆ. ನನ್ನ ಮಾತುಗಳನ್ನು ಗಮನಿಸಿ, ಇದು ಏನಿದ್ದರೂ ಒಂದು ಸಣ್ಣ ಆರಂಭ. ದೊಡ್ಡ ಸಂಗತಿಗಳು, ಇವನ್ನು ಅನುಸರಿಸಿ ಇನ್ನೂ ಬರಲಿವೆ. ಈಗಿನ ಪ್ರವರ್ತನೆಯ ಪರಿಣಾಮವನ್ನು, ಭಾರತದ ಹೊರಗೆ ಏನಿರಬಹುದು ಎಂಬುದನ್ನು, ಈಗಲೇ ನಾನು ಖಚಿತವಾಗಿ ಹೇಳಲಾರೆ. ಆದರೆ ಇಷ್ಟು ಮಾತ್ರ ನನಗೆ ನಿಶ್ಚಯವಾಗಿ ಗೊತ್ತು. ಲಕ್ಷಾವಧಿ ಜನ, ಉದ್ದೇಶಪೂರ್ವಕವಾಗಿಯೇ ಹೇಳುತ್ತಿದ್ದೇನೆ, ಪ್ರತಿಯೊಂದೂ ನಾಗರಿಕರಾಷ್ಟ್ರದ ಲಕ್ಷಾವಧಿ ಜನ, ಭೌತಿಕವಾದದ, ಭಯಂಕರ ಆಧುನಿಕ ಧನಪೂಜೆಯ ಪ್ರವೃತ್ತಿಯ ಮೂಲಕ, ಭಯಂಕರ ವಿಪ್ಲವ ಕೂಪಕ್ಕೆ ಮುಂದಾಲೋಚನೆಯಿಲ್ಲದೆ ಧಾವಿಸುತ್ತಿರುವುದರಿಂದಾಗಿ ತಮ್ಮನ್ನು ರಕ್ಷಿಸುವ ಸಂದೇಶಕ್ಕಾಗಿ ಹಾರೈಸುತ್ತಿದ್ದಾರೆ. ಅಲ್ಲದೆ ಹೊಸ ಸಾಮಾಜಿಕ ಆಂದೋಲನಗಳ ಬಹಳಮಂದಿ ನಾಯಕರು ಅವರ ಸಾಮಾಜಿಕ ಅಭೀಪ್ಸೆಗಳನ್ನು ಆಧ್ಯಾತ್ಮಿಕಗೊಳಿಸಲು ಅತ್ಯುನ್ನತರೂಪದ ವೇದಾಂತವೊಂದೇ ಸಮರ್ಥವೆಂಬುದನ್ನು ಈಗಾಗಲೇ ಕಂಡುಕೊಂಡಿದ್ದಾರೆ.

* * * *

## ೪. ಭಾರತ ಸಾಯುವುದೇ?

ಭಾರತ ಸಾಯುವುದೇ? ಉದಾತ್ತವಾದ, ನೀತಿಯುತವಾದ ಅಥವಾ ಆಧ್ಯಾತ್ಮಿಕವಾದ ಎಲ್ಲದರ ವೃದ್ಧ ಮಾತೃಭೂಮಿ, ಋಷಿಮುನಿಗಳು ನಡೆದಾಡಿದ ನಾಡು, ಈಗಲೂ ದೇವರಂಥ ಮನುಷ್ಯರು ಬದುಕುತ್ತಿರುವ, ಉಸಿರಾಡುತ್ತಿರುವ ನಮ್ಮ ಮಾತೃಭೂಮಿ ಸಾಯುವುದೇ? ಅಥೀನಿಯನ್ ಯುಗದ ಕಂದೀಲು ಎರವಲು ಪಡೆದು ನಿಮ್ಮನ್ನು ನಾನು ಹಿಂಬಾಲಿಸುತ್ತೇನೆ. ನನ್ನ ಸೋದರ, ಈ ವಿಶಾಲ ಪ್ರಪಂಚದ ಹಳ್ಳಿಗಳಲ್ಲಿ, ನಗರಗಳಲ್ಲಿ, ಬಯಲುಸೀಮೆಗಳಲ್ಲಿ, ಕಾಡುಮೇಡುಗಳಲ್ಲಿ ನಿಮ್ಮಿಂದ ಸಾಧ್ಯವಿದ್ದರೆ ಅಂಥ ಮನುಷ್ಯರನ್ನು ತೋರಿಸಿ. ಹಣ್ಣಿನ ಗುಣದಿಂದ ಮರವನ್ನು ಗುರುತಿಸಬಹುದು ಎನ್ನುವ ಹಿರಿಯರ ಮಾತೊಂದಿದೆ ; ಅದು ನಿಜ. ಭಾರತದಲ್ಲಿ ಯಾವುದೇ ಮಾವಿನ ಮರದ ಬುಡಕ್ಕೆ ಹೋಗಿ. ನೆಲದ ಮೇಲಿಂದ ಹುಳುತಿಂದ, ಹಣ್ಣಾಗದ, ಉದುರಿಬಿದ್ದ ಮಾವುಗಳನ್ನು ಕೊಳಗಗಟ್ಟಲೆ ಸಂಗ್ರಹಿಸಿ. ಆಮೇಲೆ ಪ್ರತಿಯೊಂದರ ಮೇಲೆ ಅತ್ಯಂತ ವಿದ್ವತ್ಪೂರ್ಣವಾದ ಗ್ರಂಥಗಳನ್ನು ನೂರಾರು ಸಂಖ್ಯೆಯಲ್ಲಿ ಬರೆಯಿರಿ. ಇಷ್ಟಾದರೂ ಒಂದು ಮಾವಿನಹಣ್ಣಿನ ಗುಣವನ್ನು ವರ್ಣಿಸಿದಂತಾಗದು. ಅದರ ಬದಲು ಘಮ್ಮೆನ್ನುವ, ಚೆನ್ನಾಗಿ ಹಣ್ಣಾದ, ರಸಭರಿತವಾದ ಮಾವಿನ ಹಣ್ಣು ಒಂದನ್ನು ಗಿಡದಿಂದ ಕಿತ್ತುಕೊಳ್ಳಿ, ಮಾವು ಎಂದರೆ ಏನು ಎಂದು ಆಗ ತಿಳಿಯುತ್ತದೆ.

ಹೀಗೆಯೇ ಈ ದೇವತಾಮಾನವರು ಹಿಂದುಧರ್ಮ ಎಂದರೆ ಏನು ಎಂಬುದನ್ನು ಮನಗಾಣಿಸುತ್ತಾರೆ. ಶತಮಾನಗಳಿಂದ ಕೃಷಿಗೊಂಡು ಬೆಳೆದ ಈ ಜನಾಂಗವೃಕ್ಷದ ಗುಣವಿಶೇಷಗಳು, ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು, ಹಾಗೆಯೇ ಸಾವಿರ ವರ್ಷಗಳ ಹಿಂಸಾತ್ಮಕ ಗಲಭೆಗಳ ಬಲವಾದ ಹೊಡೆತ ತಾಳಿಕೊಂಡಿರುವುದನ್ನು, ಹೀಗಿದ್ದೂ ಚಿರಯೌವನ ಮುಕ್ಕಾಗದ ವರ್ಚಸ್ಸಿನಿಂದ ಇನ್ನೂ ತಲೆಯೆತ್ತಿ ನಿಂತಿರುವುದನ್ನು ಮನಗಾಣಿಸುತ್ತಾರೆ.

ಭಾರತ ಸಾಯುವುದಾದರೆ? ಹಾಗಾದರೆ, ಪ್ರಪಂಚದಿಂದ ಎಲ್ಲಾ ಆಧ್ಯಾತ್ಮಿಕತೆಯೂ ಅಳಿದುಹೋಗುತ್ತದೆ; ಎಲ್ಲಾ ನೈತಿಕ ಪರಿಪೂರ್ಣತೆಯೂ ಇಲ್ಲವಾಗುತ್ತದೆ, ಧರ್ಮದ ಸಲುವಾದ ಎಲ್ಲಾ ಮಧುರವಾದ ಸಹಾನುಭೂತಿಯೂ ಹೊರಟುಹೋಗುತ್ತದೆ, ಎಲ್ಲಾ ಧ್ಯೇಯಾದರ್ಶಗಳೂ ಮಸುಳುತ್ತವೆ. ಅದರ ಸ್ಥಾನದಲ್ಲಿ



ವಿಷಯಕಾಂಕ್ಷೆ ಮತ್ತು ಭೋಗಗಳ ಜೋಡಿ ಪುಂ ಸ್ತ್ರೀ ದೇವತೆಗಳಾಗಿ ವಿಜೃಂಭಿಸುತ್ತದೆ. ಅದಕ್ಕೆ ದುಡ್ಡು ಪೂಜಾರಿಯಾಗುತ್ತದೆ. ಮೋಸ ವಂಚನೆಗಳು, ಬಲಪ್ರಯೋಗ, ಸ್ಪರ್ಧೆಗಳು ಅದರ ಆಚರಣೆಗಳಾಗುತ್ತವೆ. ಮಾನವನ ಆತ್ಮ ಅದರ ಬಲಿಪಶು ಆಗುತ್ತದೆ. ಅಂತಹ ಸ್ಥಿತಿ ಎಂದೂ ಬರಲಾರದು. ಕ್ರಿಯಾಶಕ್ತಿಗಿಂತ ಅನುಭವಿಸುವ ನೋವು ಎಷ್ಟೋ ದೊಡ್ಡದು; ದ್ವೇಷದ ಶಕ್ತಿಗಿಂತ ಪ್ರೇಮದ ಶಕ್ತಿ ಎಷ್ಟೋ ಪಾಲು ಬಲಿಷ್ಠವಾದುದು. ಇಂದು ಕಾಣುತ್ತಿರುವ ಹಿಂದುಧರ್ಮದ ಪುನರುಜ್ಜೀವನ ಎನ್ನುವುದು ದೇಶಭಕ್ತಿಯ ಒಂದು ಸ್ಪಂದನವಷ್ಟೇ ಎಂದು ಯಾರಾದರೂ ತಿಳಿಯುವುದಾದರೆ, ಅದು ಅವರ ಭ್ರಮೆಯಷ್ಟೇ.

ಮೊದಲು ನಾವು ವಿಲಕ್ಷಣವಿದ್ಯಮಾನದ ಸ್ವರೂಪವನ್ನು ನೋಡೋಣ. ಆಧುನಿಕ ವೈಜ್ಞಾನಿಕಸಂಶೋಧನೆಗಳ ಉಗ್ರವಾದ ದಾಳಿಗಳಿಗೆ ಸಿಕ್ಕು ಪಾಶ್ಚಾತ್ಯರ ಸೈದ್ಧಾಂತಿಕ ಧರ್ಮಗಳ (dogmatic religions) ಹಳೆಯ ಕೋಟೆಗಳೆಲ್ಲ ಧೂಳೀಪಟವಾಗಿ ಕುಸಿಯುವುದು, ಶ್ರದ್ಧೆಗಳೂ ನಂಬಿಕೆಗಳೂ ಇಗರ್ಜಿಗಳ ಧರ್ಮಸದಸ್ಸುಗಳಲ್ಲಿ ಪಡೆಯುವ ಮತಗಳ ಬಹುಮತನಿರ್ಧಾರಗಳೂ ಆಧುನಿಕ ವಿಜ್ಞಾನದ ಸುತ್ತಿಗೆ ಪೆಟ್ಟಿಗೆ ಸಿಕ್ಕು ಪಿಂಗಾಣಿರಾಶಿ ನುಚ್ಚುನೂರಾಗುವಂತೆ ನುಚ್ಚುನೂರಾಗುವುದು, ಒತ್ತಿಕೊಂಡು ಮುನ್ನುಗ್ಗುತ್ತಿರುವ ಆಧುನಿಕಚಿಂತನದ ನಿರಂತರವಾದ ಉಬ್ಬರದಲೆಗಳು ಕಾರಣವಾಗಿ, ಅದಕ್ಕೆ ಸ್ಥಾನ ಮಾಡಿಕೊಡಲು ತನ್ನ ಜಾಣ್ಮೆಯನ್ನು ಪಾಶ್ಚಾತ್ಯ ಮತಧರ್ಮಶಾಸ್ತ್ರ ಬಿಟ್ಟುಕೊಡುತ್ತಿರುವುದು, ಆಧುನಿಕ ಚಿಂತನದ ನಿರಂತರವಾದ ಏರುಮೊಗದ ಒತ್ತಡದಲ್ಲಿ ಇತರ ಎಲ್ಲಾ ಪವಿತ್ರ ಗ್ರಂಥಗಳ ಪಠ್ಯಭಾಗಗಳು ಇನ್ನು ಸಾಧ್ಯವಿಲ್ಲ ಎನ್ನುವತನಕ ವಿಪರೀತವ್ಯಾಖ್ಯಾನಗೊಳ್ಳುತ್ತಿರುವುದು, ಅವುಗಳಲ್ಲಿಯೂ ಹೆಚ್ಚಿನವು ಮುರಿದುಬಿದ್ದು ಅವು ಹಳೆ ಸಾಮಾನುಕೋಣೆಯನ್ನು ಸೇರಿರುವುದು, ಚಿಂತನಶೀಲ ಪಾಶ್ಚಾತ್ಯಸಮುದಾಯ ಚರ್ಚಿನೊಂದಿಗೆ ತಮ್ಮೆಲ್ಲ ಸಂಬಂಧವನ್ನೂ ಕಡಿದುಕೊಂಡು ನೆಮ್ಮದಿಯಿಲ್ಲದ ಸ್ಥಿತಿಯ ಸಮುದ್ರದಲ್ಲಿ ಕೊಚ್ಚಿಹೋಗುತ್ತಿರುವುದು, ವೇದಗಳೆಂಬ ಬೆಳಗಿನ ಬುಗ್ಗೆಯಿಂದ ಜೀವಜಲವನ್ನು ಪಾನವಮಾಡಿರುವ ಹಿಂದುಧರ್ಮ ಬುದ್ಧಧರ್ಮಗಳೆಂಬವು ಮಾತ್ರ ಪುನರುಜ್ಜೀವನಗೊಳ್ಳುತ್ತಿರುವುದು–ಇವೆಲ್ಲ ಕುತೂಹಲಕರ ವಿದ್ಯಮಾನವಲ್ಲವೇನು?

ಅಶಾಂತ ಮನಸ್ಸಿನ ಪಾಶ್ಚಾತ್ಯ ನಿರೀಶ್ವರವಾದಿ ಅಥವಾ ಅಜ್ಞೇಯತಾವಾದಿ ತನ್ನ ಆತ್ಮಕ್ಕೆ ಆಶ್ರಯಸ್ಥಾನವಾಗಿ ಗೀತೆಯನ್ನೋ ಧಮ್ಮಪದವನ್ನೋ ಏಕೈಕ ಸ್ಥಾನವೆಂಬುದಾಗಿ ಕಂಡುಕೊಂಡಿದ್ದಾನೆ.

ಈಗ ಸನ್ನಿವೇಶಗಳು ತಿರುಗುಮುರುಗಾಗಿವೆ. ವಿದ್ರೋಹಿಕೈಗಳು ಹೊತ್ತಿಸಿದ ವಿಧ್ವಂಸಕಾರಿ ಬೆಂಕಿಯಿಂದ ಆವೃತಗೊಂಡ ತನ್ನ ಪುರಾತನ ಗೃಹಸಂಕೀರ್ಣವನ್ನು ಈ ಮೊದಲು ಕಣ್ಣೀರಿಟ್ಟು ನೋಡುತ್ತಿದ್ದ ಹಿಂದು ಈಗ ಶೋಧಕದೀಪದ ಆಧುನಿಕ

ವಿಚಾರಗಳು ಆ ಹೊಗೆಯನ್ನು ಸರಿಸಿದ ಮೇಲೆ, ಉಳಿದೆಲ್ಲವೂ ಅದೃಶ್ಯವಾಗಿರುವಾಗ ಅಥವಾ ಹಿಂದುನಕ್ಷೆಯ ಮೇಲೆ ತಮ್ಮ ಮನೆಗಳನ್ನು ಹೊಸದಾಗಿ ಕಟ್ಟಿಕೊಳ್ಳುತ್ತಿರುವಾಗ ತನ್ನ ಮನೆ ತನ್ನೆಲ್ಲ ಸಾಮರ್ಥ್ಯದೊಂದಿಗೆ ಎದ್ದುನಿಂತಿರುವುದನ್ನು ಕಾಣುತ್ತಿದ್ದಾನೆ. ತನ್ನ ಕಣ್ಣೀರು ಒರಸಿಕೊಂಡು, ಯಾವ ಕೊಡಲಿ "ಊರ್ಧ್ವಮೂಲಮಧಃಶಾಖಂ ಅಶ್ವತ್ಥಂ ಪ್ರಾಹುರವ್ಯಯಮ್" (ಗೀತಾ, xv-i) ಆದ ಮರದ ಬುಡಗಳನ್ನು ಕಡಿಯಲು ಪ್ರಯತ್ನಿಸಿತೋ ಅದು ಶಸ್ತ್ರಚಿಕಿತ್ಸಕನ ದಯಾರ್ದ್ರವಾದ ಶಸ್ತ್ರವಾಗಿ ಪರಿಣಮಿಸಿದ್ದನ್ನು ಕಾಣುತ್ತಿದ್ದಾನೆ.

ತನ್ನ ಧರ್ಮವನ್ನುಳಿಸಿಕೊಳ್ಳಲು, ಪವಿತ್ರಗ್ರಂಥದ ಮಂತ್ರಗಳನ್ನು ಹಿಂಸಿಸುವುದಾಗಲಿ ಅಥವಾ ಯಾವುದೇ ರೀತಿಯ ಬೌದ್ಧಿಕ ಅಪ್ರಾಮಾಣಿಕತೆಯನ್ನು ತೋರಿಸುವುದಾಗಲಿ ಆವಶ್ಯಕವಲ್ಲವೆಂಬುದನ್ನು ಕಂಡುಕೊಂಡಿದ್ದಾನೆ. ಹಾಗಲ್ಲ, ತನ್ನ ಧರ್ಮಗ್ರಂಥಗಳಲ್ಲಿ ದುರ್ಬಲವಾದುದೆಲ್ಲವನ್ನೂ ದುರ್ಬಲವೆಂದು ಕರೆಯಬಹುದು. ಏಕೆಂದರೆ, ಅವು ಹಾಗಿರತಕ್ಕುದು ಎಂದು ಋಷಿಮುನಿಗಳು ಉದ್ದೇಶಿಸಿದರು, ಅರುಂಧತೀದರ್ಶನನ್ಯಾಯದ ಅನುಸಾರವಾಗಿ. ಈ ಕಾರಣದಿಂದ ನಮ್ಮ ಋಷಿಮುನಿಗಳಿಗೆ, ಸರ್ವವ್ಯಾಪಿಯೂ ಸರ್ವದಾ ವಿಸ್ತರಣಶೀಲವೂ ಆದ ಧರ್ಮದ ಪದ್ಧತಿಯನ್ನು ಹೀಗೆ ಅವರು ಕಂಡುಹಿಡಿದುದಕ್ಕಾಗಿ ವಂದನೆಗಳು ಸಲ್ಲುತ್ತವೆ. ಈ ಧರ್ಮ ಪದಾರ್ಥದ ಪ್ರಪಂಚದಲ್ಲಿ ಕಂಡುಹಿಡಿದಿರುವುದನ್ನೆಲ್ಲ, ತಿಳಿಯಬೇಕಾದುದನ್ನೆಲ್ಲ ಒಳಕೊಳ್ಳುವಂಥದು. ಇದನ್ನು ಅವನು ಹೊಸದಾಗಿ ಗ್ರಹಿಸಲು, ಹೊಸದಾಗಿ ಕಂಡುಕೊಳ್ಳಲು ಮೊದಲುಮಾಡಿದ್ದಾನೆ ಎಂದರೆ, ಧರ್ಮವೆಂಬುದರ ಸೀಮಿತವೂ ಸಾಧಾರಣವೂ ಆದ ಎಲ್ಲ ವ್ಯವಸ್ಥೆಗೆ ಅಪಾಯಕಾರಿ ಎಂಬುದಾಗಿ ಸಿದ್ಧವಾದ ಆ ಶೋಧನೆಗಳೆಲ್ಲ ನಮ್ಮ ಪೂರ್ವಜರು ಬಹುಕಾಲ ಹಿಂದೆಯೇ ತಮ್ಮ ಅಂತರ್ದೃಷ್ಟಿ ಅತೀಂದ್ರಿಯಾನುಭವದ ಉನ್ನತ ನೆಲೆಯಲ್ಲಿ ಕಂಡುಕೊಂಡ ಸತ್ಯಗಳ ಬೌದ್ಧಿಕ ಹಾಗೂ ಐಂದ್ರಿಯಿಕ ನೆಲೆಯ ಪುನಃ ಶೋಧನೆಗಳಲ್ಲದೆ ಬೇರೆಯಲ್ಲ ಎಂದು ಗ್ರಹಿಸಲು, ತಿಳಿಯಲು ಮೊದಲುಮಾಡಿದ್ದಾನೆ.

ಆದ್ದರಿಂದ, ಅವನು ಯಾವುದನ್ನೂ ತ್ಯಾಗಮಾಡಬೇಕಾಗಿಲ್ಲ, ಏನನ್ನಾದರೂ ಹುಡುಕಿಕೊಂಡು ಎಲ್ಲಿಗಾದರೂ ಹೊರಡಬೇಕಾಗಿಲ್ಲ, ತನಗೆ ಪರಂಪರೆಯಿಂದ ಪ್ರಾಪ್ತವಾದ ಅಕ್ಷಯನಿಧಿಯಿಂದ ಅದರ ಸ್ವಲ್ಪವನ್ನು ಬಳಸುವುದು ಸಾಧ್ಯವಾದರೆ, ತನ್ನ ಅಗತ್ಯಗಳಿಗೆ ಅವನ್ನು ಅನ್ವಯಿಸುವುದಾದರೆ, ಅದು ಸಾಕಾದಷ್ಟು. ಈಗ ಅದನ್ನು ಮಾಡಲು ಆರಂಭಿಸಿದ್ದಾನೆ ; ಇನ್ನಷ್ಟು, ಮತ್ತಷ್ಟು ಮಾಡುತ್ತಾನೆ. ಈ ಎಚ್ಚರದ ನಿಜವಾದ ಹೇತು ಇದೇ ಅಲ್ಲವೇ?

* * * *



## ೫. ಹಸಿದವರಿಗೆ ಆಹಾರ

ನಮ್ಮದು ಮಾತ್ರವೇ ನಿಜವಾದ ಧರ್ಮ. ಏಕೆಂದರೆ, ಅದರ ಪ್ರಕಾರ ಮೂರು ದಿನಗಳ ಅವಧಿಯ ಈ ಇಂದ್ರಿಯ ಪ್ರಪಂಚವೇ ಎಲ್ಲ ಕೊನೆ, ಎಲ್ಲ ಉದ್ದೇಶ ಎಂದು ತಿಳಿಯುವಂಥದಲ್ಲ, ಅದು ನಮ್ಮ ದೊಡ್ಡ ಗುರಿಯಲ್ಲ. ಕೆಲವು ಅಡಿಗಳ ಈ ಸಣ್ಣ ಭೂಮಿಯ ದಿಗ್ದೆಸೆಗಳು ನಮ್ಮ ಧರ್ಮದ ಸ್ವರೂಪವನ್ನು ಬಂಧಿಸುವಂಥವಲ್ಲ. ನಮ್ಮದು ಅದರಾಚೆಯದು, ಅದಕ್ಕೂ ಆಚೆಯದು. ಇಂದ್ರಿಯಗಳ ವೃತ್ತಿಗೆ ಆಚೆಯದು, ದೇಶಕ್ಕೆ ಆಚೆಯದು, ಕಾಲಕ್ಕೆ ಆಚೆಯದು. ಅದಕ್ಕೂ, ಅಲ್ಲಿಗೂ ಆಚೆಯದು. ಎಲ್ಲಿಯವರೆಗೆ ಎಂದರೆ, ಈ ಪ್ರಪಂಚದಲ್ಲಿ ಇನ್ನೇನೂ ಉಳಿದಿರುವುದಿಲ್ಲ, ವಿಶ್ವವೇ ಆತ್ಮನ ವೈಭವದ ಅನುಭವಾತೀತಸಮುದ್ರದ ಒಂದು ಬಿಂದುವಾಗಿದೆ ಎನ್ನುವವರೆಗೆ. ನಮ್ಮದು ನಿಜವಾದ ಧರ್ಮ. ಏಕೆಂದರೆ, ದೇವರೊಬ್ಬನೇ ಸತ್ಯ ಎಂದು, ಈ ಪ್ರಪಂಚ ಮಿಥ್ಯೆ ಮತ್ತು ನಶ್ವರ ಎಂದು, ನಿಮ್ಮ ಕಸವರವೆಲ್ಲಾ ಕಸವೆಂದು, ನಿಮ್ಮ ಪ್ರಭಾವಕ್ಕೆ ಪರಿಮಿತಿ ಉಂಟು ಎಂದು, ಎಷ್ಟೋ ವೇಳೆ ಜೀವನವೇ ದುಷ್ಟವೆಂದು ಅದು ಬೋಧಿಸುತ್ತದೆ. ಆದ್ದರಿಂದ ನಮ್ಮದು ನಿಜವಾದ ಧರ್ಮ ಎನ್ನುವುದು ಮಾತು. ನಮ್ಮ ಧರ್ಮ ನಿಜವಾದ ಧರ್ಮ. ಏಕೆಂದರೆ, ಎಲ್ಲಕ್ಕಿಂತಲೂ ಹೆಚ್ಚಾಗಿ ಅದು ತ್ಯಾಗವನ್ನು ಬೋಧಿಸುತ್ತದೆ. ಹಳೆಯ ಯುಗದ ವಿವೇಕದೊಂದಿಗೆ ಕೂಡಿದ ನಮ್ಮನ್ನು, ಹಿಂದುಗಳನ್ನು ಹೋಲಿಸಿದಾಗ, "ಬರಿಯ ನಿನ್ನೆ ಮೊನ್ನೆಯ ಮಕ್ಕಳು ನೀವು" ಎಂದು ಇತರ ರಾಷ್ಟ್ರಗಳಿಗೆ ತಿಳಿಸಲು, ಸಾರಲು ಅದು ಎದ್ದುನಿಲ್ಲುತ್ತದೆ ; ಇಲ್ಲಿ ಭಾರತದಲ್ಲಿ, ನಮ್ಮ ಪೂರ್ವಜರು ಕಂಡುಹಿಡಿದಿರುವ ವಿವೇಕವೆಂಬ ಪುರಾತನ ಸಂಪತ್ತಿಗೆ ಒಡೆಯರು ನಾವು ಎಂದು ಎದ್ದುನಿಂತು ಸಾರುತ್ತದೆ. ಹೀಗೆ ಸರಳವಾದ ಮಾತುಗಳಲ್ಲಿ ಅದು ಹೇಳುತ್ತದೆ : ಮಕ್ಕಳೇ, ನೀವು ವಿಷಯೇಂದ್ರಿಯಗಳಿಗೆ ದಾಸರು. ವಿಷಯೇಂದ್ರಿಯಗಳಿಗೆ ಇತಿಮಿತಿಗಳುಂಟು, ವಿಷಯೇಂದ್ರಿಯಗಳಿಗೆ ಕ್ಷಯವುಂಟು. ಅಲ್ಪಾವಧಿಯ ಮೂರು ದಿನಗಳ ಭೋಗಜೀವನ ಕ್ಷಯವನ್ನಷ್ಟೇ ತರುವುದು. ಅದನ್ನೆಲ್ಲ ಬಿಟ್ಟುಬಿಡಿ. ಪ್ರಪಂಚದ, ವಿಷಯೇಂದ್ರಿಯಗಳ ಮೋಹದಿಂದ ದೂರವಾಗಿ. ಇದು ಧರ್ಮದ ಮಾರ್ಗ. ತ್ಯಾಗದ ಮಾರ್ಗವೇ ಗುರಿ ತಲುಪುವ ಮಾರ್ಗ, ಭೋಗದ ಮಾರ್ಗವಲ್ಲ. ಆದ್ದರಿಂದ ನಮ್ಮದು ಮಾತ್ರವೇ ನಿಜವಾದ ಧರ್ಮ."

ರಾಷ್ಟ್ರಗಳ ಮೇಲೆ ರಾಷ್ಟ್ರಗಳು ಈ ಪ್ರಪಂಚ ರಂಗಸ್ಥಲದ ಮೇಲೆ ಕಾಣಿಸಿಕೊಂಡು, ಕೆಲವು ಕ್ಷಣಗಳ ಕಾಲ ತಮ್ಮ ಪಾತ್ರಗಳನ್ನು ಉತ್ಸಾಹದಿಂದ ಅಭಿನಯಿಸಿ, ಕಡೆಗೆ ಒಂದು ಗುರುತನ್ನಾಗಲಿ ಒಂದು ಬುದ್ಬುದವನ್ನಾಗಲಿ ಬಲುಮಟ್ಟಿಗೆ ಮೂಡಿಸದೆ ಅಳಿದುಹೋಗಿರುವಾಗ, ಇಲ್ಲಿ ನಾವು ಜೀವಂತವಿದ್ದೇವೆ, ದಿಟವಾಗಿ ಚಿರಂತನ ಎಂಬಂಥ ಬದುಕು ನಡಸುತ್ತಿದ್ದೇವೆ ಎನ್ನುವುದು ಒಂದು ಕುತೂಹಲಕರ ವಿದ್ಯಮಾನ. 'ಬಲಿಷ್ಠನೇ ಬದುಕುವವನು' ಎಂಬುದಕ್ಕೆ ಸಂಬಂಧಿಸಿ ಹೊಸ ಸಿದ್ಧಾಂತಗಳ ಮೇಲೆ ಜನ ತುಂಬ ಮಾತಾಡುತ್ತಿದ್ದಾರೆ. ಅಲ್ಲದೆ ತೋಳುಬಲವುಳ್ಳವನೇ ಬದುಕುವ ಬಲಿಷ್ಠನು ಎಂದು ಭಾವಿಸುತ್ತಿದ್ದಾರೆ. ಅದು ನಿಜವಾಗಿದ್ದ ಪಕ್ಷದಲ್ಲಿ, ಆಕ್ರಮಣಶೀಲವೆಂದು ಗೊತ್ತಿರುವ ಪ್ರಪಂಚದ ಹಳೆಯ ರಾಷ್ಟ್ರಗಳಲ್ಲಿ ಯಾವುದಾದರೊಂದು ಈ ಹೊತ್ತು ವೈಭವದಿಂದ ಬಾಳುತ್ತಿರಬೇಕಾಗಿತ್ತು. ನಾವು, ದುರ್ಬಲರಾದ ಹಿಂದುಗಳು, ಬೇರೆ ಒಂದಾದರೂ ಜನಸಮುದಾಯವನ್ನು, ರಾಷ್ಟ್ರವನ್ನು ಎಂದೂ ಜಯಿಸದೆ ಹೋದವರು, ಈ ವೇಳೆಗೆ ಅಳಿದುಹೋಗಿರಬೇಕಾಗಿತ್ತು. ಆದರೂ ೩೦೦ ದಶಲಕ್ಷಜನ ನಾವಿಲ್ಲಿ ಬದುಕಿದ್ದೇವೆ. ಒಮ್ಮೆ ಒಬ್ಬ ಆಂಗ್ಲ ಯುವತಿ ನನಗೆ ಹೇಳಿದ್ದರು : "ಹಿಂದುಗಳು ಏನು ಮಾಡಿದ್ದಾರೆ? ಒಂದಾದರೂ ಜನಾಂಗವನ್ನು ಅವರು ಎಂದೂ ಜಯಿಸಿದ್ದಿಲ್ಲ!") ಭಾರತದ ಎಲ್ಲ ಸಾಮರ್ಥ್ಯಗಳೂ ಬಳಸಿ ಮುಗಿದಿವೆ, ಅದರ ದೇಹ ಕ್ಷಯಗ್ರಸ್ತವಾಗಿದೆ ಎನ್ನುವುದು ಖಂಡಿತ ದಿಟವಲ್ಲ. ಇನ್ನೂ ಸಾಕಷ್ಟು ಸತ್ತ್ವವುಂಟು. ಸಮಯ ಪಕ್ವವಾದಾಗ, ಅಗತ್ಯ ಬಿದ್ದಾಗ ಅದು ಉಕ್ಕೇರಿ ಹರಿದು ವಿಶ್ವವನ್ನು ತೋಯಿಸಬಲ್ಲುದು.

ಬಹು ಪುರಾತನ ಕಾಲದಿಂದಲೇ ಪ್ರಪಂಚಕ್ಕೆಲ್ಲ ಒಂದು ತೆರನ ಸವಾಲು ಹಾಕಿದ್ದೇವೆ, ನಾವು. ಪಶ್ಚಿಮದಲ್ಲಿ, ಒಬ್ಬ ಮನುಷ್ಯನಿಗೆ ಎಷ್ಟೆಲ್ಲ ಇದ್ದರೆ ಸಾಕಾಗಬಹುದು ಎಂಬ ಸಮಸ್ಯೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ನಡೆದಿದ್ದರೆ, ಇಲ್ಲಿ ನಾವು ಎಷ್ಟು ಕಡಮೆಯಲ್ಲಿ ಅವನು ಬದುಕಬಹುದು ಎಂಬ ಸಮಸ್ಯೆಗೆ ಉತ್ತರ ಹುಡುಕುತ್ತಿದ್ದೇವೆ. ಈ ಹೋರಾಟ, ಈ ಭಿನ್ನತೆ ಇನ್ನೂ ಕೆಲವು ಶತಮಾನಗಳ ಕಾಲ ಮುಂದುವರಿಯುತ್ತವೆ. ಆದರೆ ಇತಿಹಾಸದ ಗರ್ಭದಲ್ಲಿ ಏನಾದರೂ ಸತ್ಯ ಎನ್ನುವುದಿದ್ದರೆ, ಭವಿಷ್ಯದ ಮುನ್ಸೂಚನೆ ಎನ್ನುವುದು ಎಂದಾದರೂ ನಿಜವಾಗುವುದಿದ್ದರೆ, ಯಾರು ಸ್ವಲ್ಪದರಲ್ಲಿ ಬದುಕುವರೋ (ಅಲ್ಪತೃಪ್ತರು) ಯಾರು ತಮ್ಮನ್ನು ನಿಗ್ರಹಿಸಿಕೊಳ್ಳಬಲ್ಲರೋ (ಸಂಯಮಿಗಳು) ಅವರು ಹೋರಾಟದ ಕೊನೆಯಲ್ಲಿ ಗೆಲ್ಲುತ್ತಾರೆ ; ಯಾರು ಸುಖಾನುಭವದ, ಭೋಗಗಳ ಬೆನ್ನು ಹತ್ತಿ ಹೋಗುವರೋ, ಆ ಹೊತ್ತಿಗೆ ಅವರು ಚಟುವಟಿಕೆಯ ಜನವಾಗಿ ತೋರಬಹುದು ಎಂದರೂ, ಕೊನೆಯಲ್ಲಿ ಅಂಥವರು ಸಾಯುವರು, ಹಾಳಾಗಿಹೋಗುವರು. ಮನುಷ್ಯಜೀವರ ಇತಿಹಾಸದಲ್ಲಿ, ಅಲ್ಲ, ರಾಷ್ಟ್ರಜೀವನದ ಇತಿಹಾಸದಲ್ಲಿ ಪ್ರಪಂಚವೇ



ಬೇಡ, ಸಾಕಾಗಿಹೋಗಿದೆ ಎನ್ನುವ ಬೇಸರ ಎದ್ದುತೋರುವ ಸಂಕಟದ ಸಂದರ್ಭಗಳು ಬಂದಿವೆ. ಇಂಥ ಜಗನ್ನಿರಾಸಕ್ತಿಯ ದೊಡ್ಡ ಅಲೆಗಳು ಪಾಶ್ಚಾತ್ಯ ಜಗತ್ತಿನಲ್ಲಿ ಎದ್ದಿರುವುದುಂಟು. ಅಲ್ಲಿ ಕೂಡ ಅವರ ದಾರ್ಶನಿಕರಿದ್ದಾರೆ, ಮಹಾಪುರುಷರಿದ್ದಾರೆ. ಈ ಸಂಪತ್ತು ಅಧಿಕಾರಗಳ ಸ್ಪರ್ಧೆ ನಿರರ್ಥಕದಲ್ಲಿ ನಿರರ್ಥಕ ಎಂದು ಅವರು ಈಗಾಗಲೇ ಗುರುತಿಸಿದ್ದಾರೆ. ಹಲವರು, ಹಲವರೇನು, ಅಲ್ಲಿಯ ಸ್ತ್ರೀಪುರುಷರಲ್ಲಿ ಬಲುಮಟ್ಟಿಗೆ ಎಲ್ಲರೂ ಈ ಸ್ಪರ್ಧೆಯ, ಹೋರಾಟದ ವಿಚಾರದಲ್ಲಿ, ತಮ್ಮ ವಾಣಿಜ್ಯಾತ್ಮಕ ನಾಗರಿಕತೆಯ ವಿಚಾರದಲ್ಲಿ ಬೇಸತ್ತಿದ್ದಾರೆ. ಯೂರೋಪಿನಲ್ಲಿ, ಅಲ್ಲಿಯ ಕೆಡಕುಗಳಿಗೆಲ್ಲ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗಳೇ ರಾಮಬಾಣವೆಂದು ಭಾವಿಸಿ, ಅದಕ್ಕೇ ಅಂಟಿಕೊಂಡಿರುವ ವರ್ಗವೊಂದಿದೆ. ಆದರೆ ಅಲ್ಲಿಯ ಮಹಾಚಿಂತಕರಲ್ಲಿ ಬೇರೆ ವಿಚಾರಗಳು ಬೆಳೆಯುತ್ತಿವೆ. ಯಾವುದೇ ಪ್ರಮಾಣದ ರಾಜಕೀಯ ಮತ್ತು ಸಾಮಾಜಿಕ ಕುಶಲನಿರ್ವಹಣೆ ಮಾನವೀಯ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಹೊರಟೂ ಅದು ಬದುಕಿನ ಕೆಡುಕುಗಳನ್ನು ಪರಿಹರಿಸಲು ಸಾಧ್ಯವಿಲ್ಲ ಎಂಬುದನ್ನು ಅವರು ಮನಗಂಡಿದ್ದಾರೆ. ಉತ್ತಮಸ್ಥಿತಿಗೆ ಆತ್ಮನಲ್ಲಿಯೇ ಬದಲಾವಣೆಯಾಗುವ ಮೂಲಕ ಬದುಕಿನ ಕೆಡುಕುಗಳನ್ನು ಪರಿಹರಿಸುವುದು ಸಾಧ್ಯ. ಯಾವುದೇ ಪ್ರಮಾಣದ ಬಲಪ್ರಯೋಗ ಅಥವಾ ಅಧಿಕಾರ ಅಥವಾ ಸರಕಾರ ಅಥವಾ ಶಾಸಕಾಂಗದ ಕ್ರೌರ್ಯ ಜನಾಂಗವೊಂದರ ಸ್ಥಿತಿಗತಿಗಳನ್ನು ಬದಲಾಯಿಸಲಾರದು. ಆದರೆ ಜನಾಂಗದ ತಪ್ಪು ಪ್ರವರ್ತನೆಗಳನ್ನು ಬದಲಾಯಿಸಿ ಉತ್ತಮಸ್ಥಿತಿಗೆ ಅದನ್ನು ತರುವುದು ಆಧ್ಯಾತ್ಮಿಕಸಂಸ್ಕಾರ, ನೈತಿಕಸಂಸ್ಕಾರ ಇವುಗಳಿಗೆ ಮಾತ್ರ ಸಾಧ್ಯ. ಈ ರೀತಿ ಪಾಶ್ಚಾತ್ಯ ಜನಾಂಗಗಳು ಕೆಲವು ಹೊಸ ವಿಚಾರಗಳಿಗಾಗಿ ಹೊಸ ತತ್ತ್ವಜ್ಞಾನಕ್ಕಾಗಿ ಉತ್ಸುಕವಾಗಿವೆ. ಅವರು ಪಡೆದಿರುವ ಧರ್ಮ, ಕ್ರೈಸ್ತಧರ್ಮ, ಅನೇಕ ದೃಷ್ಟಿಗಳಿಂದ ಉತ್ತಮವೂ ಉದಾತ್ತವೂ ಆಗಿದ್ದರೂ, ಅದು ಸಮರ್ಪಕವಾಗಿ ಅರ್ಥವಾಗಿಲ್ಲ, ಈವರೆಗೆ ಅರ್ಥವಾಗಿರುವ ಮಟ್ಟಿಗೆ ಅದು ಸಾಕಾಗುವ ಮಟ್ಟಿಗೆ ಆಗಿಲ್ಲ. ಪಾಶ್ಚಾತ್ಯದೇಶದ ಚಿಂತನಶೀಲ ಜನ ನಮ್ಮ ತತ್ತ್ವಜ್ಞಾನದಲ್ಲಿ, ವಿಶೇಷವಾಗಿ ವೇದಾಂತದಲ್ಲಿ, ತಾವು ಹುಡುಕುತ್ತಿರುವ ವಿಚಾರಗಳ ಹೊಸ ಅಂತಃಪ್ರೇರಣೆಯನ್ನು, ತಾವು ಹಸಿದು ನೀರಡಸುತ್ತಿರುವ ಆಧ್ಯಾತ್ಮಿಕ ಆಹಾರಪಾನೀಯಗಳನ್ನು, ಗುರುತಿಸಿದ್ದಾರೆ. ಅದು ಹಾಗಿದ್ದರೆ, ಅದರಲ್ಲಿ ಆಶ್ಚರ್ಯವೇನೂ ಇಲ್ಲ.

* * * *

# ೬. ಮೊದಲ ಕೊಡುಗೈತನ

ಪ್ರತಿ ವ್ಯಕ್ತಿಗೆ ಇರುವ ಹಾಗೆ, ಪ್ರತಿ ರಾಷ್ಟ್ರಕ್ಕೂ ಈ ಬದುಕಿನಲ್ಲಿ ಒಂದು ಆಶಯವಿದೆ. ಅದು ಅದರ ಕೇಂದ್ರ. ಎಲ್ಲ ಇತರ ಸ್ವರಗಳೂ ಮಿಳಿತವಾಗಿ ತರುವ ಸ್ವರಮಾಧುರ್ಯದ ಪ್ರಧಾನಸ್ವರ, ಅದು. ಒಂದು ರಾಷ್ಟ್ರದಲ್ಲಿ ರಾಜಕೀಯಶಕ್ತಿಯೇ ಅದರ ಪುಷ್ಟಿವರ್ಧಕ ಧಾತು, ಇಂಗ್ಲೆಂಡಿನಲ್ಲಿ ಇರುವ ಹಾಗೆ. ಇನ್ನೊಂದರಲ್ಲಿ ಕಲೆಗಾರಿಕೆಯೇ ಜೀವನ, ಇತ್ಯಾದಿ. ಭಾರತದಲ್ಲಿ ಧಾರ್ಮಿಕಜೀವನ ಎನ್ನುವುದು ಇಲ್ಲಿಯ ರಾಷ್ಟ್ರೀಯಜೀವನದ ಸಮಗ್ರಸಂಗೀತದ ಮಧ್ಯಬಿಂದುವಾಗಿದೆ, ಜೀವಸ್ವರವಾಗಿದೆ. ಹೀಗಿರಬೇಕಾದರೆ ಯಾವುದೇ ರಾಷ್ಟ್ರ ತನ್ನ ರಾಷ್ಟ್ರೀಯತೆಯ ಪುಷ್ಟಿವರ್ಧಕಧಾತುವನ್ನು – ಶತಮಾನಗಳ ಕಾಲ ಸಾಗಿಬಂದು ತಮ್ಮದೇ ಆಗಿರುವ ಆ ಮಾರ್ಗದರ್ಶನವನ್ನು – ಕಳಚಿ ಎಸೆಯಲು ಯತ್ನಿಸಿದ್ದೇ ಆದರೆ, ಅದರಲ್ಲಿ ಯಶಸ್ವಿಯೂ ಆದರೆ, ಆ ರಾಷ್ಟ್ರ ಅಳಿದುಹೋಗುತ್ತದೆ. ಹೀಗಿರಬೇಕಾದರೆ, ನಿಮ್ಮ ಧರ್ಮವನ್ನು ನಿರಾಕರಿಸುವ ನಿಮ್ಮ ಪ್ರಯತ್ನದಲ್ಲಿ ನೀವು ಯಶಸ್ವಿಯಾದರೆ, ರಾಜಕೀಯವೋ ಸಮಾಜವೋ ಅಥವಾ ನಿಮ್ಮ ಕ್ಷೇತ್ರದಲ್ಲಿ ಮತ್ತೆ ಇನ್ನೇನಾದರೋ ರಂಗವನ್ನು ನಿಮ್ಮ ರಾಷ್ಟ್ರಜೀವನದ ಪುಷ್ಟಿವರ್ಧಕಶಕ್ತಿಯಾಗಿ ಸ್ವೀಕರಿಸಿದರೆ, ಅದರ ಪರಿಣಾಮವೆಂದರೆ, ನಿಮ್ಮ ನಿರ್ಮೂಲನವೇ. ಇದನ್ನು ತಡೆಯಲು, ನಿಮ್ಮ ಧರ್ಮದ ಪುಷ್ಟಿವರ್ಧಕಶಕ್ತಿಯನ್ನು ಬೆಳೆಸಲು, ನಿಮ್ಮ ಸರ್ವವನ್ನೂ ಸಕಲವನ್ನೂ ಅದಕ್ಕಾಗಿ ದುಡಿಯುತ್ತ ಹೋಗುವಂತೆ ಮಾಡಬೇಕು. ನಿಮ್ಮ ಆ ಧರ್ಮದ ಬೆನ್ನೆಲುಬಿನ ಮೂಲಕ ನಿಮ್ಮ ನರನಾಡಿಗಳೆಲ್ಲ ಸ್ಪಂದಿಸುತ್ತಿರಲಿ. ಸಾಮಾಜಿಕ ಬದುಕಿನಲ್ಲಿ ಅದರ ಪ್ರಾಯೋಗಿಕ ಪರಿಣಾಮವನ್ನು ಮನಗಾಣಿಸದೆ ಅಮೆರಿಕನ್ನರಿಗೆ ನಾನು ಸಮದೃಷ್ಟಿಯ ಧರ್ಮವನ್ನು ಬೋಧಿಸಲಾರೆ. ವೇದಾಂತವು ತರಬಹುದಾದ ಆಶ್ಚರ್ಯಕರವಾದ ರಾಜಕೀಯ ಬದಲಾವಣೆಗಳನ್ನು ಮನಗಾಣಿಸದೆ ಇಂಗ್ಲೆಂಡಿನಲ್ಲಿ ನಾನು ಧರ್ಮವನ್ನು ಬೋಧಿಸಲಾರೆ. ಹೀಗೆಯೇ ಭಾರತದಲ್ಲಿ, ಹೊಸ ವಿಚಾರಧಾರೆ ಆಧ್ಯಾತ್ಮಿಕಜೀವನವನ್ನು ಎಷ್ಟು ಹೆಚ್ಚಾಗಿ ತುಂಬಬಲ್ಲುದು ಎಂಬುದನ್ನು ತೋರಿಸಿಯೇ ಇಲ್ಲಿ ರಾಜಕೀಯವನ್ನು ಬೋಧಿಸಬೇಕು. ಪ್ರತಿಯೊಬ್ಬನೂ ತನ್ನದೇ ಆಯ್ಕೆ ಮಾಡಿಕೊಳ್ಳಬೇಕು. ಹಾಗೆಯೇ ಪ್ರತಿಯೊಂದು ರಾಷ್ಟ್ರ ಕೂಡ. ಎಷ್ಟೋ ಕಾಲದ ಹಿಂದೆಯೇ ನಮ್ಮ ಆಯ್ಕೆಯನ್ನು ನಾವು ಮಾಡಿಕೊಂಡಿದ್ದೇವೆ. ಅದಕ್ಕೆ ನೀವು ಬದ್ಧರಾಗಿ ನಡೆದುಕೊಳ್ಳಬೇಕು. ಅಲ್ಲದೆ,



ಅದೇನೂ ಅಂಥ ಕೆಟ್ಟ ಆಯ್ಕೆಯಲ್ಲ. ಈ ಪ್ರಪಂಚದಲ್ಲಿ ವಸ್ತುವನ್ನು ಕುರಿತು ಅಲ್ಲ, ಆತ್ಮವನ್ನು ಕುರಿತು, ಮನುಷ್ಯನನ್ನು ಕುರಿತು ಅಲ್ಲ, ದೇವರನ್ನು ಕುರಿತು ವಿಚಾರಮಾಡುವುದು ಅಂಥ ಕೆಟ್ಟ ಆಯ್ಕೆಯೇನು? ಆ ಇನ್ನೊಂದು ಪ್ರಪಂಚದಲ್ಲಿ ಆ ಉತ್ಕಟವಾದ ಭರವಸೆ, ಈ ಪ್ರಪಂಚದ ವಿಷಯದಲ್ಲಿ ಉತ್ಕಟವಾದ ತಿರಸ್ಕಾರ, ತ್ಯಾಗದ ಆ ಉತ್ಕಟವಾದ ಶಕ್ತಿ, ದೇವರಲ್ಲಿ ಆ ಉತ್ಕಟವಾದ ನಂಬಿಕೆ, ಅಮರವಾದ ಆತ್ಮದಲ್ಲಿ ಆ ಉತ್ಕಟವಾದ ನಿಸ್ಸಂದೇಹ ನಿಮ್ಮಲ್ಲಿದೆ. ಇದು ಬೇಡ ಎಂದು ಯಾರಾದರೂ ಹೇಳಲಿ, ನಾನು ಸವಾಲು ಹಾಕುತ್ತೇನೆ. ನೀವು ಬೇಡ ಎನ್ನಲಾಗದು. ಭೌತವಾದಿಗಳಾಗಿ ನೀವು ಕೆಲವು ತಿಂಗಳ ಕಾಲ ಭೌತವಾದವನ್ನೇ ಮಾತಾಡುತ್ತ ನನ್ನ ಮೇಲೆ ಆ ವಾದವನ್ನು ಹೇರಲು ಯತ್ನಿಸಬಹುದು. ಆದರೆ ನನಗೆ ನೀವು ಏನು ಎನ್ನುವುದು ಗೊತ್ತು : ನಾನು ನಿಮ್ಮನ್ನು ಕೈಹಿಡಿದು ನಡೆದರೆ, ನೀವು ಹುಟ್ಟಿನಿಂದಲೇ ಒಳ್ಳೆಯ ಆಸ್ತಿಕರಾಗಿದ್ದಿರಿ ಎನ್ನುವಂತೆ ಹಿಂದಕ್ಕೆ ಮರಳುತ್ತೀರಿ. ನಿಮ್ಮ ಪ್ರಕೃತಿಯನ್ನು ನೀವು ಹೇಗೆ ತಾನೆ ಬದಲಾಯಿಸಬಲ್ಲಿರಿ ?

ಆದಕಾರಣ, ಭಾರತದಲ್ಲಿ ಯಾವುದೇ ಸುಸ್ಥಿತಿಯ ಬೆಳೆವಣಿಗೆ ಎನ್ನುವುದು, ಎಲ್ಲಕ್ಕೂ ಮೊದಲು ಧರ್ಮದಲ್ಲಿ ಒಂದು ಜಾಗೃತಿಯನ್ನು ಅಪೇಕ್ಷಿಸುತ್ತದೆ. ಭಾರತವನ್ನು ಸಾಮಾಜಿಕ ರಾಜಕೀಯ ವಿಚಾರಗಳಿಂದ ತುಂಬುವ ಮೊದಲು ಈ ನಾಡು ಆಧ್ಯಾತ್ಮಿಕ ವಿಚಾರಗಳಿಂದ ತೋಯುವ ಹಾಗೆ ಮಾಡಿ. ನಮ್ಮ ಲಕ್ಷ್ಯವನ್ನು ಸೆಳೆಯಬೇಕೆನ್ನುವಾಗ ಮೊದಲ ಕೆಲಸವೆಂದರೆ, ನಮ್ಮ ಉಪನಿಷತ್ತುಗಳಲ್ಲಿ, ಸ್ಮೃತಿಗಳಲ್ಲಿ, ಪುರಾಣಗಳಲ್ಲಿ ಕಟ್ಟುಗೊಂಡಿರುವ ಅತ್ಯಾಶ್ಚರ್ಯಕರ ಸತ್ಯಗಳನ್ನು ಆ ಪವಿತ್ರಪತ್ಯಗಳಿಂದ ಹೊರಕ್ಕೆ ಬಿಡಿಸಿ ತರಬೇಕು, ಮಠಗಳಿಂದ ಹೊರಕ್ಕೆ ತರಬೇಕು, ವನಪ್ರಾಂತಗಳಿಂದ ಹೊರಕ್ಕೆ ತರಬೇಕು. ಆಯ್ದ ಜನದ ಸದಸ್ಸುಗಳಿಂದ ಹೊರಕ್ಕೆ ತರಬೇಕು. ನಾಡಿನ ತುಂಬೆಲ್ಲ ಅವು ಪ್ರಸಾರಗೊಂಡು ಹರಡುವಂತೆ ಮಾಡಬೇಕು. ಹೀಗೆ ಮಾಡಿದರೆ ಈ ಸತ್ಯಗಳು ದೇಶದ ಉತ್ತರ–ದಕ್ಷಿಣಗಳವರೆಗೆ, ಪೂರ್ವ–ಪಶ್ಚಿಮದವರೆಗೆ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ, ಸಿಂಧದಿಂದ ಬ್ರಹ್ಮಪುತ್ರದ ವರೆಗೆ ಅಗ್ನಿಜ್ವಾಲೆಯಂತೆ ವ್ಯಾಪಿಸುತ್ತದೆ.

ಪ್ರತಿಯೊಬ್ಬನೂ ಇವುಗಳ ಬಗ್ಗೆ ತಿಳಿದಿರಬೇಕು. ಏಕೆಂದರೆ "ಮೊದಲು ಇದನ್ನು ಕಿವಿಗೊಟ್ಟು ಕೇಳಬೇಕು (ಶ್ರವಣ), ಬಳಿಕ ಚಿಂತಿಸಬೇಕು (ಮನನ), ಆಮೇಲೆ ಅನುಸಂಧಾನಮಾಡಬೇಕು (ನಿದಿಧ್ಯಾಸನ)" ಎಂಬುದನ್ನು ಹೇಳಿದೆ. ಜನ ಮೊದಲು ಕಿವಿಗೊಟ್ಟು ಕೇಳಲಿ ; ಯಾರು ತಮ್ಮ ಧರ್ಮಗ್ರಂಥಗಳಲ್ಲಿ ಅಡಗಿರುವ ಮಹಾನ್ ಸತ್ಯಗಳನ್ನು ಜನ ಕೇಳಿ ತಿಳಿಯಲು ನೆರವಾಗುವನೋ ಅವನು ತನಗಾಗಿ ಒಂದು ಒಳ್ಳೆಯ ಕರ್ಮ ಮಾಡಿದಂತೆಯೇ. ನಮ್ಮ ವ್ಯಾಸರು ಹೇಳುತ್ತಾರೆ : ಕಲಿಯುಗದಲ್ಲಿ ಒಂದು ಕರ್ಮ ಉಳಿದುಕೊಂಡಿದೆ. ಈಗ ಯಜ್ಞಗಳಿಂದ

ಉಗ್ರವಾದ ತಪಸ್ಸುಗಳಿಂದ ಏನೂ ಪ್ರಯೋಜನವಿಲ್ಲ. ಉಳಿದಿರುವ ಒಂದು ಕರ್ಮ ಎಂದರೆ, ಕೊಡುವ ಕರ್ಮ. ಈ ಕೊಡುಗೆಗಳಲ್ಲಿ ಆಧ್ಯಾತ್ಮಿಕತೆ, ಆಧ್ಯಾತ್ಮಿಕತೆಯ ಜ್ಞಾನ ಅತ್ಯುನ್ನತವಾದ್ದು. ಮುಂದಿನ ಕೊಡುಗೆ ಲೌಕಿಕವಿದ್ಯೆಯ ಜ್ಞಾನ. ಅದಕ್ಕೆ ಮುಂದಿನದು ಜೀವನ. ನಾಲ್ಕನೆಯದು ಆಹಾರದಾನ. ಈ ವಿಸ್ಮಯಕರ ದಾನಿಸ್ವಭಾವದ ಜನಾಂಗದ ಕಡೆ ನೋಡಿ. ಈ ಬಡತನದ, ಬಡದೇಶದಲ್ಲಿ ಮಾಡಲಾಗುವ ಕೊಡುಗೆಗಳ ಪ್ರಮಾಣದ ಕಡೆ ನೋಡಿ. ಇಲ್ಲಿ ಒಬ್ಬ ಮನುಷ್ಯ ಉತ್ತರದಿಂದ ದಕ್ಷಿಣದವರೆಗೆ ಸಂಚಾರಮಾಡುತ್ತಲೇ ದೇಶದಲ್ಲಿ ಉತ್ಕೃಷ್ಟವಾದ್ದು ಎನ್ನುವುದನ್ನುಪಡೆಯುತ್ತ, ಪ್ರತಿಯೊಬ್ಬನಿಂದಲೂ ಅವನ ಗೆಳೆಯನೆಂಬ ಭಾವದಲ್ಲಿ ಉಪಚಾರ ಪಡೆಯುತ್ತ ಇರುವ ಆ ಆತಿಥೇಯಗುಣವನ್ನು ನೋಡಿ. ಎಲ್ಲಿಯವರೆಗೆ ಒಂದು ಚೂರು ರೊಟ್ಟಿ ಸಿಕ್ಕುತ್ತಿರುವುದೋ ಅಲ್ಲಿಯವರೆಗೆ ಯಾವ ಭಿಕ್ಷುಕನೂ ಇಲ್ಲಿ ಹಸಿದಿರುವುದಿಲ್ಲ.

ಈ ಉದಾರದಾತೃತ್ವದ ನಾಡಿನಲ್ಲಿ ಆಧ್ಯಾತ್ಮಿಕಜ್ಞಾನಪ್ರಸಾರವೆಂಬ ಮೊದಲ ಕೊಡುಗೆಯ ಶಕ್ತಿಯನ್ನೀಗ ತೆಗೆದುಕೊಳ್ಳೋಣ. ಆ ಪ್ರಸಾರವೆನ್ನುವುದು ಭಾರತದ ಸೀಮೆಗಳಿಗಷ್ಟೇ ಸೀಮಿತವಾದುದಲ್ಲ. ಅದು ಪ್ರಪಂಚಕ್ಕೆಲ್ಲ ಮುಟ್ಟಬೇಕಾದ್ದು. ಅದು ಎಂದಿನಿಂದಲೂ ಪದ್ಧತಿಯಾಗಿ ಬಂದದ್ದು. ಭಾರತೀಯ ಚಿಂತನೆ ಭಾರತದಿಂದ ಎಂದೂ ಹೊರಗೆ ಹೋದದ್ದಲ್ಲ ಎಂದೋ ಬೋಧನೆಗಾಗಿ ವಿದೇಶದ ನಾಡುಗಳಿಗೆ ಹೋದ ಸಂನ್ಯಾಸಿಗಳಲ್ಲಿ ನಾನೇ ಮೊದಲನೆಯವನೆಂದೋ ಯಾರಾದರೂ ನಿಮಗೆ ಹೇಳಿದರೆ, ತಮ್ಮದೇ ಜನಾಂಗದ ಇತಿಹಾಸ ಅವರಿಗೆ ತಿಳಿಯದು ಎನ್ನಬೇಕಾಗುತ್ತದೆ, ಮತ್ತೆ ಮತ್ತೆ ಈ ವಿದ್ಯಮಾನ ಜರುಗಿಹೋಗಿದೆ. ಪ್ರಪಂಚ ಇದನ್ನು ಬೇಡಿದಾಗಲೆಲ್ಲ, ಆಧ್ಯಾತ್ಮಿಕತೆಯ ಈ ಅಕ್ಷಯಪ್ರವಾಹ ಉಕ್ಕಿಹರಿದಿದೆ, ಪ್ರಪಂಚವನ್ನು ತೊಯ್ಯುವ ಹಾಗೆ ವಾಡಿದೆ. ರಾಜಕೀಯುವಾದ ಕೊಡುಗೆಗಳು ಕಹಳೆಗಳನ್ನು ಮೊಳಗಿಸುವುದರೊಂದಿಗೆ, ಸೈನಿಕರ ಪಥಸಂಚಲನದೊಂದಿಗೆ ಸಾಧ್ಯವಾಗಬಹುದು. ಲೌಕಿಕವಿದ್ಯೆ ಸಮಾಜವಿದ್ಯೆಗಳ ಕೊಡುಗೆಯಾದರೋ, ಸುಡುವುದು ಕೊಲ್ಲುವುದರ ಮೂಲಕ ಸಾಧ್ಯವಾಗಬಹುದು. ಆದರೆ ಆಧ್ಯಾತ್ಮಿಕವಿದ್ಯೆಯ ಕೊಡುಗೆ ಮಾತ್ರ, ಕಣ್ಣಿಗೆ ಬೀಳದೆ, ಕಿವಿಗೆ ಕೇಳದೆ ಇಳಿಯುವ ಇಬ್ಬನಿಯ ಹಾಗೆ, ಹಾಗೆ ಇಳಿಯುತ್ತಲೇ ರಾಶಿ ಗುಲಾಬಿಗಳನ್ನು ಅರಳಿಸುವ ಹಾಗೆ, ಮೌನದ ಮೂಲಕವಷ್ಟೇ ಆಗುವಂಥದು. ಇದು ಪ್ರಪಂಚಕ್ಕೆ ಭಾರತ ಮತ್ತೆ ಮತ್ತೆ ನೀಡುತ್ತ ಬಂದಿರುವ ಕೊಡುಗೆ. ಯಾವಾಗ ಒಂದು ವಿಜಿಗೀಷು ಜನಾಂಗ ಕಾಣಿಸಿಕೊಂಡು ಮಾರ್ಗಗಳನ್ನೂ ಸಾರಿಗೆಗಳನ್ನೂ ಶಕ್ಯಮಾಡಿ ಪ್ರಪಂಚದ ರಾಷ್ಟ್ರಗಳನ್ನು ಹತ್ತಿರ ತರುತ್ತಿದ್ದಿತೋ, ಆವಾಗಲೆಲ್ಲ ಭಾರತ ಕೂಡಲೇ ಮೇಲೆದ್ದು ವಿಶ್ವದ ಪ್ರಗತಿಯ ಒಟ್ಟಾರೆ ಲೆಕ್ಕಕ್ಕೆ ತನ್ನ ಆಧ್ಯಾತ್ಮಿಕಶಕ್ತಿಯ ಪಾಲನ್ನು ತಾನೂ ಕೊಡುತ್ತ ಬಂದಿದೆ. ಇದು ಬುದ್ಧ ಹುಟ್ಟುವುದಕ್ಕೂ ಮೊದಲೇ ಆಯಿತು. ಅದರ ಅವಶೇಷಗಳು ಚೈನಾ, ಏಷ್ಯಾಮೈನರ್ ಮತ್ತು ಮಲಯಾ



ದ್ವೀಪಸ್ತೋಮಗಳಲ್ಲಿ ಇನ್ನೂ ಉಳಿದಿವೆ– ಆ ಬಹು ದೊಡ್ಡ ಗ್ರೀಕ್ ವಿಜಿಗೀಷು ಆಗ್ಗೆ ತಿಳಿದಿದ್ದ ಪ್ರಪಂಚದ ನಾಲ್ಕು ದಿಕ್ಕುಗಳನ್ನೆಲ್ಲಾ ಒಗ್ಗೂಡಿಸಿದಾಗ ನಡೆದ ವಿದ್ಯಮಾನ. ಬಳಿಕ ಭಾರತೀಯ ಆಧ್ಯಾತ್ಮಿಕತೆ ಚಿಮ್ಮಿ ಹೊರನುಗ್ಗಿತು. ಪಾಶ್ಚಾತ್ಯರು ಹೆಮ್ಮೆಯಿಂದ ಹೇಳಿಕೊಳ್ಳುವ ನಾಗರಿಕತೆ ಆ ಪ್ರವಾಹದ ಒಂದು ಅವಶೇಷವಷ್ಟೇ, ಬೇರೆಯಲ್ಲ. ಈಗ ಅದೇ ಅವಕಾಶ ಮತ್ತೆ ಬಂದಿದೆ. ಈ ಮೊದಲು ಎಂದೂ ಆಗಿಲ್ಲದ ರೀತಿಯಲ್ಲಿ, ಇಂಗ್ಲೆಂಡಿನ ಅಧಿಕಾರಶಕ್ತಿ ಪ್ರಪಂಚದ ರಾಷ್ಟ್ರಗಳನ್ನು ಒಂದಾಗಿ ಬೆಸೆದಿದೆ. ಇಂಗ್ಲಿಷ್ ಮಾರ್ಗಗಳೂ ವಾರ್ತಾವಾಹಕಮಾಧ್ಯಮಗಳೂ ಪ್ರಪಂಚದ ಒಂದು ಕಡೆಯಿಂದ ಇನ್ನೊಂದು ಕೊನೆಯವರೆಗೆ ನುಗ್ಗುತ್ತಿವೆ. ಇಂಗ್ಲಿಷ್ ಪ್ರತಿಭೆಯ ಪರಿಣಾಮ ಇಂದು ಪ್ರಪಂಚ ಈ ಹಿಂದೆ ಎಂದೂ ಸಾಧ್ಯವಾಗಿರದ ರೀತಿಯಲ್ಲಿ ಸಂಬಂಧಗಳನ್ನು ಪರಸ್ಪರ ಬೆಸೆದಿದೆ. ಮಾನವ ಇತಿಹಾಸದಲ್ಲಿ ಈ ಹಿಂದೆ ಎಂದೂ ಸಾಧ್ಯವಾಗಿರದ ರೀತಿಯಲ್ಲಿ ವಾಣೀಜ್ಯಕೇಂದ್ರಗಳು ಇಂದು ವ್ಯವಸ್ಥೆಗೊಂಡಿವೆ. ಕೂಡಲೇ ಭಾರತ ಅರಿವಿದ್ದೋ ಇಲ್ಲದೆಯೋ ಎದ್ದು ನಿಂತು ಆಧ್ಯಾತ್ಮಿಕತೆಯ ಕೊಡುಗೆಗಳನ್ನು ಮೊಗೆದು ಸುರಿಯುತ್ತಿದೆ. ಅದು ಈ ಪ್ರಪಂಚದ ದಿಗಂತಗಳನ್ನೇ ಮುಟ್ಟುವವರೆಗೆ ಈ ಮಾರ್ಗಗಳಲ್ಲಿ ಧಾವಿಸಲಿದೆ. ನಾನು ಅಮೆರಿಕಕ್ಕೆ ಹೋದೆನೆನ್ನುವುದು ನನ್ನಿಂದ ಆದದ್ದಲ್ಲ ; ನಿಮ್ಮಿಂದ ಆದದ್ದಲ್ಲ. ಆದರೆ ಭಾರತವನ್ನು ಮುನ್ನಡಸುತ್ತಿರುವ ಅದರ ದೈವ ನನ್ನನ್ನು ಅಲ್ಲಿಗೆ ಕಳಿಸಿದೆ. ಹೀಗೆಯೇ ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ನೂರಾರು ಜನರನ್ನು ಅದು ಕಳಿಸಿಕೊಡುವುದು. ಭೂಮಿಯ ಮೇಲಿನ ಯಾವ ಶಕ್ತಿಯೂ ಅದನ್ನು ತಡೆಯಬಾರದು.

ಇದು ಕೂಡ ಆಗತಕ್ಕದ್ದೇ. ನಿಮ್ಮ ಧರ್ಮವನ್ನು ಬೋಧಿಸಲು ನೀವು ಹೊರಗೆ ಹೋಗಲೇಬೇಕು. ಸೂರ್ಯಮಂಡಲದ ಕೆಳಗಿನ ಎಲ್ಲ ರಾಷ್ಟ್ರಗಳಿಗೂ ಎಲ್ಲ ಜನಸಮುದಾಯಗಳಿಗೂ ಬೋಧಿಸಬೇಕು. ಇದು ಮಾಡಬೇಕಾದ ಮೊದಲ ಕೆಲಸ. ಹಾಗೆ ಆಧ್ಯಾತ್ಮವಿದ್ಯೆಯನ್ನು ಬೋಧಿಸಿದ ಮೇಲೆ, ಅದರ ಜೊತೆಗೇ ಲೌಕಿಕ ವಿದ್ಯೆಗಳೂ ನೀವು ಬಯಸುವ ಇತರ ಎಲ್ಲ ವಿದ್ಯೆಗಳೂ ಬರುತ್ತವೆ. ಆದರೆ ನೀವು ಧರ್ಮ ಬಿಟ್ಟು ಲೌಕಿಕವಿದ್ಯೆಗಳನ್ನು ಗಳಿಸಲು ಪ್ರಯತ್ನಿಸುವಿರಾದರೆ, ನಾನು ನಿಮಗೆ ನೇರವಾಗಿ ಹೇಳುತ್ತೇನೆ, ಭಾರತದಲ್ಲಿ ಈ ನಿಮ್ಮ ಪ್ರಯತ್ನ ನಿಷ್ಫಲ. ಎಂದೂ ಅದು ಜನರನ್ನು ಹಿಡಿದಿಟ್ಟುಕೊಳ್ಳಲಾರದು.

* * * *

## ೭. ಭರವಸೆಯ ಸಂದೇಶ

ವಿವಿಧ ಪಂಗಡಗಳು, ತತ್ತ್ವಜ್ಞಾನಗಳು ಮತ್ತು ಧರ್ಮಗ್ರಂಥಗಳು ಇವುಗಳಷ್ಟೇ ಅಲ್ಲದೆ ಇವುಗಳಿಗೆಲ್ಲ ಆಧಾರಭೂತವಾಗಿರುವ ಒಂದು ತತ್ತ್ವವಿದೆ. ಅದೆಂದರೆ ಮಾನವನಲ್ಲಿರುವ ಆತ್ಮನ ವಿಚಾರದ ನಂಬಿಕೆ. ಆ ಆತ್ಮ ಎಲ್ಲ ಪಂಗಡಗಳಿಗೂ ಸಮಾನವಾದ್ದು. ಅದು ಪ್ರಪಂಚದ ಸಮಸ್ತ ಮನಃಪ್ರವೃತ್ತಿಯನ್ನೂ ಬದಲಾಯಿಸಬಹುದಾದ್ದು. ಹಿಂದೂಗಳಲ್ಲಿ, ಜೈನ ಬೌದ್ಧರಲ್ಲಿ, ಅಷ್ಟೇಕೆ ಭಾರತದಲ್ಲಿ ಸರ್ವತ್ರ, ಆಧ್ಯಾತ್ಮಿಕವಾದ ಆತ್ಮವೊಂದರ ಭಾವನೆ ಕಾಣುತ್ತದೆ. ಅವನ್ನು ಸಕಲ ಶಕ್ತಿಗಳ ಸಂಪುಟವೆಂದು ತಿಳಿಯಲಾಗಿದೆ. ಹೊರಗಿನಿಂದ ಶಕ್ತಿಯನ್ನಾಗಲಿ ಪಾವಿತ್ರ್ಯವನ್ನಾಗಲಿ ಪರಿಪೂರ್ಣತೆಯನ್ನಾಗಲಿ ಪಡೆಯಲು ನಿಮಗೆ ಶಕ್ಯವಿದೆ ಎನ್ನುವುದನ್ನು ಬೋಧಿಸುವ ತತ್ತ್ವಜ್ಞಾನ ಭಾರತದಲ್ಲಿರುವುದು ಒಂದು ಮಾತ್ರವೇ ಅಲ್ಲ ಎನ್ನುವುದು ನೀವು ಚೆನ್ನಾಗಿ ಬಲ್ಲಿರಿ. ಆದರೆ ಆ ತತ್ತ್ವಜ್ಞಾನಗಳೆಲ್ಲ ಒಟ್ಟಿಗೆ ಹೇಳುವ ಮಾತೆಂದರೆ, ಅವು ನಿಮ್ಮ ಜನ್ಮಸಿದ್ಧ ಹಕ್ಕು, ನಿಮ್ಮ ಸಹಜಪ್ರಕೃತಿ. ಅಪರಿಶುದ್ಧತೆ ಎನ್ನುವುದು ಒಳಗೆ ಅಡಗಿಕೊಂಡಿರುವ ನಿಮ್ಮ ಸಹಜಪ್ರಕೃತಿಯ ಹೊರ ಆಚ್ಛಾದನೆ, ಅಷ್ಟೇ. ಆದರೆ ಈಗಾಗಲೇ ಪರಿಶುದ್ಧರು, ಈಗಾಗಲೇ ಶಕ್ತರು. ನಿಮ್ಮನ್ನು ನೀವು ನೋಡಿಕೊಳ್ಳಲು ನಿಮಗೆ ಯಾವ ಸಹಾಯವೂ ಬೇಕಾಗಿಲ್ಲ. ನೀವು ಈಗಾಗಲೇ ಸ್ವನಿಯಂತ್ರಿತರು. ಇಲ್ಲಿ ವ್ಯತ್ಯಾಸವೆಂದರೆ, ಅದರ ಅರಿವು ಇರುವುದು ಅಥವಾ ಅರಿವು ಇಲ್ಲದಿರುವುದು. ಆದ್ದರಿಂದ ಆ ಒಂದು ಅಡಚಣೆಯನ್ನು 'ಅವಿದ್ಯೆ' ಎಂಬ ಮಾತಿನಲ್ಲಿ ಸಂಕ್ಷೇಪಿಸಿದೆ. ದೇವರಿಗೂ ಮನುಷ್ಯನಿಗೂ ಸಂತನಿಗೂ ಪಾಪಿಗೂ ಇರುವ ವ್ಯತ್ಯಾಸದ ಗುರುತೇನು? ಅಜ್ಞಾನವೊಂದೇ. ಮಹೋನ್ನತವ್ಯಕ್ತಿಗೂ ನಿಮ್ಮ ಕಾಲಿನ ಬುಡದಲ್ಲಿ ಸರಿದಾಡುವ ತೀರ ಕ್ಷುದ್ರವಾದ ಕ್ರಿಮಿಗೂ ನಡುವೆ ಇರುವ ವ್ಯತ್ಯಾಸವೇನು? ಅಜ್ಞಾನ. ಅದಷ್ಟೇ ವ್ಯತ್ಯಾಸ. ಏಕೆಂದರೆ, ಸರಿದಾಡುವ ಸಣ್ಣ ಕ್ರಿಮಿಯೊಳಗೆ ಅನಂತಶಕ್ತಿ, ಜ್ಞಾನ, ಪಾರಿಶುದ್ಧ್ಯ, ಸಾಕ್ಷಾತ್ ದೇವರ ದೈವತ್ವದ ಅನಂತತೆ ಇವೆಲ್ಲ ನೆಲಸಿವೆ. ಅದು ಅಭಿವ್ಯಕ್ತಿಗೊಳ್ಳದೆ ಇದೆ ; ಅದು ಅಭಿವ್ಯಕ್ತಿಗೊಳ್ಳಬೇಕಾಗಿದೆ.

ಈ ಘನವಾದ ಸತ್ಯವನ್ನು ಭಾರತ ಪ್ರಪಂಚಕ್ಕೆ ಬೋಧಿಸಬೇಕಾಗಿದೆ. ಏಕೆಂದರೆ, ಇದು ಇನ್ನೆಲ್ಲಿಯೂ ಇಲ್ಲ. ಇದು ಆಧ್ಯಾತ್ಮಿಕತೆ, ಇದು ಆತ್ಮದ ವಿಜ್ಞಾನ. ಯಾವುದು



ಮನುಷ್ಯನನ್ನು ಮೇಲೇಳುವಂತೆ, ಕಾರ್ಯಪ್ರವೃತ್ತವಾಗುವಂತೆ ಮಾಡುತ್ತದೆ ? ಸಾಮರ್ಥ್ಯ. ಸಾಮರ್ಥ್ಯವೇ ಪುಣ್ಯ, ದೌರ್ಬಲ್ಯವೇ ಪಾಪ. ಉಪನಿಷತ್ತುಗಳಿಂದ ಕಂಡುಕೊಳ್ಳುವ ಶಬ್ದವೊಂದು ಏನಾದರೂ ಇದ್ದರೆ, ಅದು ಫಿರಂಗಿಯಂತೆ ಸ್ಫೋಟಗೊಳ್ಳುವ, ಫಿರಂಗಿಯ ಗುಂಡಿನಂತೆ ಅಜ್ಞಾನರಾಶಿಯ ಮೇಲೆ ಬಿದ್ದು ಸಿಡಿಯುವ ಶಬ್ದ, 'ನಿರ್ಭೀತಿ' ಎಂಬ ಶಬ್ದ. ಅಷ್ಟು ಮಾತ್ರವಲ್ಲ, ಬೋಧಿಸಲೇಬೇಕಾದ ಒಂದೇ ಧರ್ಮ ಎಂದರೆ, ಅದು 'ನಿರ್ಭೀತಿಯ ಧರ್ಮ'. ಈ ಪ್ರಪಂಚದಲ್ಲಾಗಲಿ ಧರ್ಮದ ಪ್ರಪಂಚದಲ್ಲಾಗಲಿ ಭಯ ಎಂಬುದು ಅವನತಿಗೆ, ಪಾಪಕ್ಕೆ ಖಂಡಿತವಾದ ಕಾರಣ ಎನ್ನುವುದು ನಿಜ. ದುಃಖ ದುಗುಡಗಳನ್ನು ತರುವುದು ಭಯವೇ. ಸಾವು ತರುವುದು ಭಯವೇ. ಕೆಡುಕುಗಳನ್ನು ಉತ್ಪಾದಿಸುವುದು ಭಯವೇ. ಈ ಭಯಕ್ಕೆ ಕಾರಣವೇನು? ನಮ್ಮ ಸಹಜ ಪ್ರಕೃತಿಯನ್ನು ತಿಳಿಯದ ಅಜ್ಞಾನ. ನಮ್ಮಲ್ಲಿ ಪ್ರತಿಯೊಬ್ಬರೂ ಚಕ್ರವರ್ತಿಗಳ ಚಕ್ರವರ್ತಿಗೆ ಉತ್ತರಾಧಿಕಾರಿಗಳು. ನಾವು ಸಾಕ್ಷಾತ್ ದೇವರ ಸಾರಭೂತ ಅಂಶವೇ ಆಗಿದ್ದೇವೆ. ಅಷ್ಟು ಮಾತ್ರವಲ್ಲ, ಅದ್ವೈತದ ಪ್ರಕಾರ, ನಾವು ಅಲ್ಪಮಾನವರೆಂದು ನಮ್ಮನ್ನು ತಿಳಿಯುವ ಮೂಲಕ ನಮ್ಮ ಸಹಜಪ್ರಕೃತಿಯನ್ನು ಮರೆತಿದ್ದರೂ ನಾವು ಸಾಕ್ಷಾತ್ ದೇವರೇ. ನಾವು ಆ ಸಹಜಪ್ರಕೃತಿಯಿಂದ ಕೆಳಗುರುಳಿಬಿದ್ದಿದ್ದೇವೆ. ಹೀಗಾಗಿ ನಮ್ಮ ನಡುವೆ ಮೇಲುಕೀಳುಗಳನ್ನು ಭಾವಿಸುತ್ತಿದ್ದೇವೆ – ನಾನು ನಿನಗಿಂತ ಸ್ವಲ್ಪ ಮೇಲು, ಅಥವಾ ನೀನು ನನಗಿಂತ ಸ್ವಲ್ಪ ಮೇಲು ಇತ್ಯಾದಿಯಾಗಿ. ಹಾಗಲ್ಲದೆ, ಈ ಏಕತೆಯ ಭಾವನೆಯೇ ಭಾರತ ಕಲಿಸಬೇಕಾದ ದೊಡ್ಡ ಪಾಠ. ಲಕ್ಷ್ಯವಿಟ್ಟು ಕೇಳಿ. ಇದು ಅರ್ಥವಾದಾಗ, ವಸ್ತುಗಳನ್ನು ನೋಡುವ ನೀತಿಯೇ ಬದಲಾಗುತ್ತದೆ. ಏಕೆಂದರೆ, ನೀವು ಲೋಕವನ್ನು ಈ ಮೊದಲು ನೋಡುತ್ತಿದ್ದ ರೀತಿಗಿಂತ ಬೇರೆಯಾಗಿ, ಬೇರೆ ಕಣ್ಣುಗಳಿಂದ ನೋಡುತ್ತೀರಿ. ಈ ಪ್ರಪಂಚದ ಪ್ರತಿಯೊಂದು ಜೀವವೂ ಇಲ್ಲಿಯ ಎಲ್ಲಾ ಇನ್ನೊಂದು ಜೀವದೊಂದಿಗೆ ಹೋರಾಡಲೆಂದು, ಆ ಹೋರಾಟದಲ್ಲಿ ಅತಿ ಬಲಿಷ್ಠವಾದ್ದು ಗೆದ್ದು, ಅತಿ ದುರ್ಬಲವಾದ್ದು ಸಾಯಲೆಂದು ಅಣಿಗೊಳಿಸಿದ ರಣರಂಗವಾಗಿ ಇನ್ನೆಂದೂ ಉಳಿಯುವುದಿಲ್ಲ. ಅದು ಪರಮಾತ್ಮ ಒಂದು ಎಳೆಯ ಮಗುವಾಗಿ ಆಡುತ್ತಿರುವ, ನಾನು ಅವನ ಜೊತೆ–ಆಟಗಾರರಾಗಿ, ಸಹ ದುಡಿಮೆಗಾರರಾಗಿ ಇರುವ ಒಂದು ಆಟದ ಬಯಲು, ಅಷ್ಟೇ. ನೋಡುವುದಕ್ಕೆ ಎಷ್ಟೇ ಭಯಾನಕ, ಅಸಹ್ಯಕರ, ಅಪಾಯಕಾರಿ ಎಂದು ತೋರಿದರೂ, ಅದು ಒಂದು ಆಟ, ಅಷ್ಟೇ. ಈ ತೋರಿಕೆಯನ್ನು ನಾವು ತಪ್ಪಾಗಿ ತಿಳಿದಿದ್ದೇವೆ. ನಾವು ಆತ್ಮನ ಸಹಜಪ್ರಕೃತಿಯನ್ನು ತಿಳಿದೆವು ಎಂದಾದಾಗ, ಅತಿ ದುರ್ಬಲರ, ಅತಿ ಪತಿತರ, ಅತಿ ಹೀನಾಯದ ಪಾಪಿಗಳ ಭಾಗಕ್ಕೆ ಕೂಡ ಭರವಸೆ ಹುಟ್ಟುತ್ತದೆ. ನಮ್ಮ ಶಾಸ್ತ್ರಗಳು ಸಾರುತ್ತವೆ : "ನೀವು ಮಾತ್ರ ನಿರಾಶರಾಗಬೇಡಿ." ಏಕೆಂದರೆ, ನೀವು ಏನೇ ಮಾಡಲಿ, ನೀವು ಅದೇ (ಜೀವರು). ನೀವು ನಿಮ್ಮ ಸಹಜಪ್ರಕೃತಿಯನ್ನು

ಪಲ್ಲಟಗೊಳಿಸಲಾರಿರಿ. ನಿಮ್ಮ ಸಹಜಪ್ರಕೃತಿ ಪರಿಶುದ್ಧವಾದುದು. ಅದು ಲಕ್ಷಲಕ್ಷ ಕಲ್ಪಾಂತರ ಕಾಲ ಅಡಗಿ ಕುಳಿತಿರಬಹುದು; ಆದರೆ ಕೊನೆಗೊಮ್ಮೆ ಅದು ಗೆಲ್ಲುತ್ತದೆ, ಹೊರಬರುತ್ತದೆ. ಆದ್ದರಿಂದ ಅದ್ವೈತ ಎನ್ನುವುದು ಎಲ್ಲರಲ್ಲಿಯೂ ಭರವಸೆಯನ್ನು ಹುಟ್ಟಿಸುತ್ತದೆ, ನಿರಾಶೆಯನ್ನಲ್ಲ. ಅದರ ಬೋಧನೆ ಭಯದ ಮೂಲಕ ಅಲ್ಲ, ನಿಮ್ಮ ಕಾಲಾಸರೆ ತಪ್ಪಿದರೆ ನಿಮ್ಮನ್ನು ಹಾರಿಸಿಕೊಂಡು ಹೋಗಲು ಸದಾ ಕಾಯುತ್ತಿರುವ ದೆವ್ವಗಳ ವಿಚಾರ ಬೋಧಿಸುವುದಲ್ಲ– ಅದಕ್ಕೆ ದೆವ್ವಗಳೊಂದಿಗೆ ಏನೂ ಕೆಲಸವಿಲ್ಲ. ನಿಮ್ಮ ವಿಧಿ ನಿಮ್ಮ ಕೈಯಲ್ಲಿಯೇ ಇದೆ ಎಂದು ಆ ಬೋಧನೆ ಹೇಳುತ್ತದೆ. ನಿಮ್ಮದೇ ಕರ್ಮ ನಿಮಗಾಗಿ ಈ ಶರೀರವನ್ನು ನಿರ್ಮಾಣಮಾಡಿದೆ, ನಿಮಗಾಗಿ ಬೇರೆ ಯಾರೂ ಮಾಡಿಲ್ಲ. ಸರ್ವವ್ಯಾಪಿ ಭಗವಂತನು ಅಜ್ಞಾನದ ದೆಸೆಯಿಂದಾಗಿ ಅಡಗಿಕೊಂಡುಬಿಟ್ಟಿದ್ದಾನೆ. ಜವಾಬ್ದಾರಿ ಈಗ ನಿಮ್ಮ ಮೇಲೆಯೇ ಇದೆ. ನಿಮ್ಮದೇನೂ ಆಯ್ಕೆಯಿಲ್ಲದೆಯೇ ನೀವು ಈ ಜಗತ್ತಿಗೆ ತರಲ್ಪಟ್ಟಿದ್ದೀರಿ, ಈ ಮಹಾಭಯಂಕರವಾದ ಸ್ಥಳದಲ್ಲಿ ಇರಲ್ಪಟ್ಟಿದ್ದೀರಿ ಎಂದು ನೀವು ತಿಳಿಯಬಾರದು. ಪ್ರತಿಯಾಗಿ ನಿಮ್ಮ ಶರೀರವನ್ನು ನೀವೇ ಕ್ರಮಕ್ರಮೇಣ ನಿರ್ಮಾಣಮಾಡಿಕೊಂಡಿದ್ದೀರಿ ಎಂಬುದಾಗಿ ತಿಳಿಯಬೇಕು. ಈ ಕ್ಷಣದಲ್ಲಿಯೂ ಅದನ್ನೇ ಮಾಡುತ್ತಿದ್ದೀರಿ. ತಿನ್ನುವವರು ನೀವೇ ; ಯಾರೂ ನಿಮಗಾಗಿ ತಿನ್ನುತ್ತಿಲ್ಲ. ತಿಂದುದನ್ನು ನೀವೇ ಜೀರ್ಣಿಸಿಕೊಳ್ಳುವಿರಿ, ಯಾರೂ ನಿಮಗಾಗಿ ಅದನ್ನು ಮಾಡುವುದಿಲ್ಲ. ನೀವು ಆಹಾರದಿಂದ ರಕ್ತ ಮಾಂಸಗಳನ್ನು, ದೇಹವನ್ನು ಮಾಡಿಕೊಳ್ಳುತ್ತಿದ್ದೀರಿ. ಯಾರೂ ಅದನ್ನು ನಿಮಗಾಗಿ ಮಾಡುತ್ತಿಲ್ಲ, ಹೀಗೆಯೇ ಈವರೆಗೆ ಉದ್ದಕ್ಕೆ ಮಾಡಿಕೊಂಡು ಬರುತ್ತಿದ್ದೀರಿ. ಸರಪಣಿಯ ಒಂದು ಕೊಂಡಿ ಅನಂತತೆಯ ಸರಪಣಿಯ ಸ್ವರೂಪವನ್ನು ವಿವರಿಸುತ್ತದೆ. ನಿಮ್ಮ ಶರೀರವನ್ನು ನೀವೇ ನಿರ್ಮಿಸಿಕೊಳ್ಳುತ್ತೀರಿ ಎನ್ನುವುದು ಒಂದು ಕ್ಷಣದ ಮಟ್ಟಿಗೆ ನಿಜ ಎನ್ನುವುದಾದರೆ, ಈವರೆಗಿನ ಹಾಗೂ ಮುಂದೆ ಬರುವ ಪ್ರತಿಕ್ಷಣಕ್ಕೂ ಅದು ನಿಜವೇ ಆಗಿರುತ್ತದೆ. ಪುಣ್ಯ ಪಾಪಗಳ ಎಲ್ಲ ಜವಾಬ್ದಾರಿಯೂ ನಿಮ್ಮ ಮೇಲೆಯೇ ಇರುತ್ತದೆ. ಇದು ಒಂದು ದೊಡ್ಡ ಭರವಸೆಯೇ, ನಾನು ಏನು ಮಾಡಿರುವೆನೋ, ಅದನ್ನು ನಾನು ಮಾಡಿಲ್ಲ ಎನ್ನಿಸಬಹುದು. ಅದೇ ಕಾಲಕ್ಕೆ ನಮ್ಮ ಧರ್ಮ ಮಾನವಕುಲವನ್ನು ದೈವಕೃಪೆಯಿಂದ ದೂರ ಮಾಡುವುದೂ ಇಲ್ಲ. ಅದು ಯಾವಾಗಲೂ ಇದ್ದೇ ಇರುತ್ತದೆ. ಪ್ರತಿಯಾಗಿ ಆತ ಈ ಪುಣ್ಯ ಪಾಪಗಳ ಪ್ರಚಂಡ ಪ್ರವಾಹದಲ್ಲಿ ನಿಮ್ಮ ಜೊತೆಗೇ ಧೈರ್ಯವಾಗಿ ಇರುತ್ತಾನೆ. ಅವನು ಬಂಧನರಹಿತನು, ಸದಾ ಕಾರುಣ್ಯಪೂರ್ಣನು, ಆಚೆಯ ದಂಡೆಗೆ ಸೇರಿಕೊಳ್ಳಲು ಸದಾ ಸಹಾಯ ಮಾಡುವವನು. ಏಕೆಂದರೆ, ಅವನ ಕರುಣೆ ದೊಡ್ಡದು. ಪರಿಶುದ್ಧಹೃದಯರಿಗೆ ಅದು ಸದಾ ಒದಗುವಂಥದು.

ನಿಮ್ಮ ಆಧ್ಯಾತ್ಮಿಕತೆ, ನಿರ್ದಿಷ್ಟವಾದೊಂದು ಅರ್ಥದಲ್ಲಿ, ಸಮಾಜದ ಹೊಸ



ವ್ಯವಸ್ಥೆಗೆ ಆಧಾರವನ್ನು ರೂಪಿಸುವುದಾಗಬೇಕು. ಪಾಶ್ಚಾತ್ಯಪ್ರಪಂಚ ಅದ್ವೈತದ ಕೆಲವು ತಾರ್ಕಿಕ ಅನುಮಿತಿಗಳಿಂದ ಇನ್ನೂ ಸಾಕಷ್ಟು ಕಲಿಯುವುದಿದೆ. ಏಕೆಂದರೆ, ಪ್ರಾಪಂಚಿಕ ವಿಷಯಗಳ ವಿಜ್ಞಾನದ ಈ ದಿವಸಗಳಲ್ಲಿ ಸಾಕಾರದೈವದ ಕಲ್ಪನೆ ಅಷ್ಟಾಗಿ ಲೆಕ್ಕಕ್ಕೆ ಬರುವುದಿಲ್ಲ. ಆದರೂ ಧರ್ಮದ ಒಂದು ರೂಕ್ಷವಾದ ಸ್ವರೂಪವನ್ನು ಬಲ್ಲವನಾಗಿದ್ದರೂ, ದೇವಾಲಯಗಳನ್ನೂ ಆಕಾರಗಳನ್ನೂ ಅಪೇಕ್ಷಿಸುವವನಾದರೂ, ಅವನು ತನಗೆ ಇಷ್ಟ ಬಂದಷ್ಟನ್ನು ಮಾಡಿಕೊಳ್ಳಬಹುದು. ತನ್ನ ಪ್ರೇಮಕ್ಕೆ ಸಾಕಾರ ದೈವವೊಂದು ಬೇಕಾಗಿದ್ದರೆ, ಅಂಥ ಸಾಕಾರದೈವದ, ಈವರೆಗೆ ಪ್ರಪಂಚದಲ್ಲಿ ಎಲ್ಲಿಯೂ ಪ್ರಾಪ್ತವಾಗಿಲ್ಲದ, ಅತ್ಯುದಾತ್ತವಾದ ಕಲ್ಪನೆಗಳನ್ನು ಇಲ್ಲಿ ಕಂಡು ಕೊಳ್ಳಬಹುದು. ಒಂದು ಪಕ್ಷ ವಿಚಾರವಾದಿಯಾಗಿದ್ದು, ತನ್ನ ವೈಚಾರಿಕತೆಯನ್ನು ತೃಪ್ತಿಪಡಿಸಬೇಕಾಗಿದ್ದರೆ, ಅದು ಕೂಡ ಇಲ್ಲಿ ಉಂಟು ; ನಿರಾಕಾರದೈವದ ಅತ್ಯಂತ ವೈಚಾರಿಕವಾದ ಆಲೋಚನೆಗಳನ್ನೂ ಅವನು ಕಾಣಬಹುದಾಗಿದೆ.

* * * *

# ೮. ನಮ್ಮ ಮಹತ್ತರವಾದ ಋಣಭಾರ

ನಮ್ಮ ಪವಿತ್ರವಾದ ಮಾತೃಭೂಮಿ ಧರ್ಮ ತತ್ತ್ವಜ್ಞಾನಗಳ ನೆಲೆ. ಮಹಾನ್ ಆಧ್ಯಾತ್ಮಿಕ ವ್ಯಕ್ತಿಗಳ ಜನ್ಮಭೂಮಿ ; ತ್ಯಾಗ ವಿರಕ್ತಿಗಳ ಸೀಮೆ. ಇಲ್ಲಿ, ಇಲ್ಲಿ ಮಾತ್ರವೇ, ಅತಿ ಪ್ರಾಚೀನಕಾಲದಿಂದ ಅತ್ಯಾಧುನಿಕಕಾಲದವರೆಗೆ ಅತ್ಯುನ್ನತ ಜೀವಿತೋದ್ದೇಶವೆಂಬುದು ಮನುಷ್ಯನೆದುರು ತೆರೆದುಕೊಂಡಿರುವುದು.

ನಾನು ಪಶ್ಚಿಮದಲ್ಲಿ ನಾನಾ ದೇಶಗಳಲ್ಲಿದ್ದು ಬಂದಿದ್ದೇನೆ ; ಹಲವು ಜನಾಂಗಗಳ ಹಲವು ದೇಶಗಳಲ್ಲಿ ಸುತ್ತಾಡಿದ್ದೇನೆ. ಪ್ರತಿಯೊಂದು ಜನಾಂಗವೂ ಪ್ರತಿ ರಾಷ್ಟ್ರವೂ ಒಂದು ಗೊತ್ತಾದ ಆದರ್ಶವನ್ನು ಹೊಂದಿರುವುದು ನನಗೆ ಕಂಡಿದೆ. ಇದು ಇಡೀ ಜೀವನವನ್ನು ವ್ಯಾಪಿಸಿರುವಂಥದು. ಈ ಆದರ್ಶ ಆಯಾ ರಾಷ್ಟ್ರೀಯ ಜೀವನದ ಬೆನ್ನೆಲುಬು. ಭಾರತದ ಬೆನ್ನೆಲಬು ರಾಜಕೀಯವಲ್ಲ, ಸೇನಾಶಕ್ತಿಯಲ್ಲ, ವ್ಯಾಪಾರ ವಾಣಿಜ್ಯದ ಹೆಗ್ಗಳಿಕೆಯಲ್ಲ, ತಾಂತ್ರಿಕ ಪ್ರತಿಭೆ ಅಲ್ಲ ; ಅದು ಧರ್ಮ. ಧರ್ಮವೊಂದೇ ನಮಗಿರುವುದು, ನಮಗೆ ಬೇಕಾಗಿರುವುದು. ಭಾರತದಲ್ಲಿ ಆಧ್ಯಾತ್ಮಿಕ ಎಂದಿನಿಂದಲೂ ಇದೆ.

ತೋಳುಬಲದ ಶಕ್ತಿಪ್ರಕಟನೆ ನಿಜವಾಗಿ ಅಗಾಧವಾದ್ದು ; ಹಾಗೆಯೇ ಬುದ್ಧಿಬಲದ ಆಶ್ಚರ್ಯಕರವಾದ ಅಭಿವ್ಯಕ್ತಿ ಕೂಡ. ವಿಜ್ಞಾನದ ಸಾಧನ ಸಲಕರಣಗಳಿಂದ ಯಂತ್ರಗಳ ಮೂಲಕವಾಗಿ ಇವು ತಮ್ಮನ್ನು ತೋರಿಸಿಕೊಳ್ಳುತ್ತವೆ. ಆದರೆ ಇವಾವುವೂ ಲೋಕದ ಮೇಲೆ ಚೈತನ್ಯಶಕ್ತಿ ಬೀರುವ ಪ್ರಭಾವಕ್ಕಿಂತ ಸತ್ತ್ವಶಾಲಿಯಾದುದೇನಲ್ಲ.

ಭಾರತ ಎಂದೂ ಅತಿಶಯ ಚಟುವಟಿಕೆಯ ನಾಡು ಎನ್ನುವುದನ್ನು ನಮ್ಮ ಜನಾಂಗದ ಇತಿಹಾಸ ತೋರಿಸಿಕೊಟ್ಟಿದೆ. ಹಿಂದು ಒಬ್ಬ ಸೌಮ್ಯಸ್ವಭಾವದ, ಜಡಸ್ವಭಾವದ ವ್ಯಕ್ತಿ ಎಂದು ತಿಳಿದಿದ್ದು, ಅದಕ್ಕಿಂತ ಆತನನ್ನು ಸರಿಯಾಗಿ ತಿಳಿಯಬೇಕಾಗಿತ್ತು. ಆ ಜನದಿಂದ ನಾವು ಇಂದು ವಿದ್ಯೆ ಕಲಿಯುತ್ತಿದ್ದೇವೆ– ಈ ರೀತಿ ಹೇಳುವುದು ಬೇರೆ ದೇಶಗಳ ಜನರಲ್ಲಿ ಒಂದು ವಿಧವಾಗಿ ಗಾದೆಯೇ ಆಗಿಬಿಟ್ಟಿದೆ. ಭಾರತ ಯಾವಾಗಲೂ ನಿಷ್ಕ್ರಿಯ ಎಂಬ ಭಾವನೆಯನ್ನು ನಾನು ನಿರಾಕರಿಸುತ್ತೇನೆ. ನಮ್ಮ ಈ ಪುಣ್ಯಭೂಮಿಯಲ್ಲಿರುವುದಕ್ಕಿಂತ ಎದ್ದುತೋರುವ ಚಟುವಟಿಕೆ ಕಾಣಿಸುವುದು ಬೇರೆಲ್ಲೂ ಇಲ್ಲ. ಈ ಕ್ರಿಯಾಶೀಲತೆಯ ಘನವಾದ ಸಾಕ್ಷ್ಯವೆಂದರೆ, ನಮ್ಮ ಅತಿಪ್ರಾಚೀನ, ಅತಿಘನವಂತ ಆದ ಜನಾಂಗ ಇನ್ನೂ ಜೀವಂತವಿರುವುದೇ ಆಗಿದೆ. ಅದರ ಅಮೋಘವಾದ ಜೀವನಗತಿಯಲ್ಲಿ,



ಪ್ರತಿಯೊಂದು ದಶಕದಲ್ಲಿ ಅದು ನವಯೌವನಶಾಲಿಯಾಗುತ್ತದೆ ; ಅದಕ್ಕೆ ಸಾವಿಲ್ಲ, ಚ್ಯುತಿಯಿಲ್ಲ. ಈ ಕ್ರಿಯಾಶೀಲತೆ ಇಲ್ಲಿ ಪ್ರಕಟಗೊಳ್ಳುವುದು ಧರ್ಮದಲ್ಲಿ. ಆದರೆ ತನ್ನ ಮಾನದಂಡಗಳಿಗೆ ಅನುಸಾರವಾಗಿ ಕ್ರಿಯಾಶೀಲತೆಯನ್ನು ತೀರ್ಮಾನಿಸುವುದು ಮನುಷ್ಯಸ್ವಭಾವದ ಒಂದು ವಿಲಕ್ಷಣ ಸಂಗತಿಯಾಗಿದೆ. ಉದಾಹರಣೆಗೆ, ಒಬ್ಬ ಮೋಚಿಯ ವಿಚಾರ ತೆಗೆದುಕೊಳ್ಳಿ. ಅವನಿಗೆ ಅರ್ಥವಾಗುವುದು ಚಪ್ಪಲಿ ಹೊಲಿಯುವುದಷ್ಟೇ ; ಚಪ್ಪಲಿ ಹೊಲಿಯುವುದು ಹೊರತು ಈ ಬದುಕಿನಲ್ಲಿ ಮತ್ತೇನೂ ಇಲ್ಲ ಎಂದು ಭಾವಿಸುತ್ತಾನೆ. ಹಾಗೆಯೇ ಉಪ್ಪಾರನು ಇಟ್ಟಿಗೆ ತಯಾರಿಸುವುದು ಹೊರತು ಬೇರೇನೂ ಅರ್ಥಮಾಡಿಕೊಳ್ಳಲಾರ. ದಿನದಿನಕ್ಕೆ ಇದೊಂದೇ ತನ್ನ ಜೀವನದಲ್ಲಿರುವುದು ಎಂದು ಸಿದ್ಧಮಾಡುತ್ತಾನೆ. ಇದನ್ನು ವಿವರಿಸುವ ಇನ್ನೊಂದು ಕಾರಣವೂ ಇದೆ. ಬೆಳಕಿನ ಕಂಪನಗಳು ತುಂಬ ಸಾಂದ್ರವಾಗಿದ್ದಾಗ ಅವನ್ನು ನಾವು ನೋಡಲು ಹೋಗುವುದಿಲ್ಲ. ಏಕೆಂದರೆ, ನಮ್ಮ ದೃಷ್ಟಿಯ ಸಮತಲಕ್ಷೇತ್ರವನ್ನು ನಾವು ಮೀರಿ ಹೋಗದ ಹಾಗೆ ನಮ್ಮ ದೇಹಪ್ರಕೃತಿಯಿದೆ. ಆದರೆ ಯೋಗಿಯಾದವನು ತನ್ನ ಆಧ್ಯಾತ್ಮಿಕ ಅಂತರೀಕ್ಷಣೆಯ ಶಕ್ತಿಯಿಂದ ಅತಿ ಸಾಮಾನ್ಯಜನವರ್ಗದ ಪ್ರಾಪಂಚಿಕತೆಯ ಬಹಿರಾವರಣದಿಂದಾಚೆಗೆ ಕೂಡ ನೋಡಬಲ್ಲ.

ಸಮಸ್ತ ಪ್ರಪಂಚದ ಕಣ್ಣುಗಳೂ ಆಧ್ಯಾತ್ಮಿಕ ಆಹಾರಕ್ಕಾಗಿ ಈ ಭಾರತಭೂಮಿಯತ್ತ ಈಗ ತಿರುಗಿದೆ. ಎಲ್ಲ ಜನಾಂಗಗಳಿಗೂ ಅದನ್ನು ಭಾರತ ಒದಗಿಸಬೇಕಾಗಿದೆ. ಇಲ್ಲಿಯಷ್ಟೇ ಮಾನವಕುಲಕ್ಕೆ ಅತಿಶ್ರೇಷ್ಠವಾದ ಆದರ್ಶ ಇರುವುದು. ಹಾಗೆಂದೇ ಪಾಶ್ಚಾತ್ಯ ವಿದ್ವಾಂಸರು ಯುಗಯುಗಗಳಿಂದಲೂ ಭಾರತದ ವೈಶಿಷ್ಟ್ಯವಾಗಿರುವ, ನಮ್ಮ ಸಂಸ್ಕೃತಸಾಹಿತ್ಯ ತತ್ತ್ವಜ್ಞಾನಗಳಲ್ಲಿ ಪ್ರತಿಷ್ಠಿತವಾಗಿರುವ ಈ ಆದರ್ಶವನ್ನು ಅರ್ಥಮಾಡಿಕೊಳ್ಳಲು ಶ್ರಮಿಸುತ್ತಿದ್ದಾರೆ.

ಇತಿಹಾಸದ ಉದಯಕಾಲದಿಂದ ಯಾವನೇ ಒಬ್ಬ ಮತಪ್ರಚಾರಕನು ಹಿಂದು ತಾತ್ತ್ವಿಕ ವಿಷಯಗಳನ್ನು ಪ್ರಚಾರಮಾಡಲು ಭಾರತದಿಂದ ಹೊರಗೆ ಹೋಗಿಲ್ಲ. ಆದರೆ ಈಗ ಒಂದು ಅದ್ಭುತವಾದ ಪರಿವರ್ತನೆ ನಮ್ಮನ್ನು ಈವರೆಗೆ ಒಯ್ದು ತಂದಿದೆ. ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ : "ಧರ್ಮದ (ಸದ್ಗುಣದ) ಅವನತಿಯೂ ಅಧರ್ಮದ (ಅವಗುಣ) ಉನ್ನತಿಯೂ ಆದಾಗಲೆಲ್ಲ ನಾನು ಅವತಾರಮಾಡುತ್ತೇನೆ." ಧರ್ಮಸಂಬಂಧವಾದ ಸಂಶೋಧನೆಗಳೂ ಸ್ವಲ್ಪಮಟ್ಟಿಗಾದರೂ ನಮ್ಮಿಂದ ಒಂದು ಒಳ್ಳೆಯ ನೈತಿಕನಿಬಂಧನೆಯನ್ನು ಎರವಲು ಪಡೆಯದ ಒಂದೇ ಒಂದಾದರೂ ದೇಶವಿಲ್ಲ ಎಂದೂ ಆತ್ಮನ ಅಮರತೆಯ ಘನವಾದ ಚಿಂತನೆಗಳನ್ನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಮ್ಮಿಂದ ಪಡೆದುಕೊಳ್ಳದ ಒಂದೇ ಒಂದಾದರೂ ಧರ್ಮವಿಲ್ಲ ಎಂದೂ ನಮಗೆ ತೆರೆದು ತೋರಿಸಿವೆ.

ಪ್ರಪಂಚದ ಚರಿತ್ರೆಯಲ್ಲಿ ೧೯ನೆಯ ಶತಮಾನದ ಉತ್ತರಾರ್ಧದ ಈ ಕೊನೆಯ

ಭಾಗದಲ್ಲಿ ಇದ್ದ ಹಾಗೆ ಇಷ್ಟುಮಟ್ಟಿಗೆ ಸುಲಿಗೆ, ದರೋಡೆ, ಇಷ್ಟು ಸ್ವೇಚ್ಛಾಚಾರ, ದುರ್ಬಲರ ಮೇಲೆ ಬಲಿಷ್ಠರ ದಬ್ಬಾಳಿಕೆ ಇದ್ದ ಕಾಲ ಯಾವಾಗಲೂ ಇಲ್ಲ. ಆಸೆ ಆಕಾಂಕ್ಷೆಗಳನ್ನು ಗೆಲ್ಲುವುದು ಹೊರತು ಬಿಡುಗಡೆಯಿಲ್ಲ ಎಂಬುದನ್ನೂ ಭೌತವಸ್ತುವಿನ ಬಂಧನಕ್ಕೆ ಒಳಗಾಗಿರುವ ಯಾವನೂ ಸ್ವತಂತ್ರನಲ್ಲ ಎಂಬುದನ್ನೂ ಪ್ರತಿಯೊಬ್ಬನೂ ತಿಳಿದುಕೊಳ್ಳಬೇಕು. ಈ ಮಹಾನ್ ಸತ್ಯವನ್ನು ಎಲ್ಲ ರಾಷ್ಟ್ರಗಳೂ ನಿಧಾನವಾಗಿ ಅರ್ಥಮಾಡಿಕೊಳ್ಳಲೂ ಇಷ್ಟಪಡಲೂ ತೊಡಗಿವೆ. ಶಿಷ್ಯನಾದವನು ಈ ಸತ್ಯವನ್ನು ಗ್ರಹಿಸುವ ಸ್ಥಿತಿಗೆ ಎಷ್ಟು ಬೇಗ ಬರುವನೋ ಗುರುವಿನ ವಾಣಿ ಅಷ್ಟು ಬೇಗ ಅವನ ಸಹಾಯಕ್ಕೆ ಬರುತ್ತದೆ. ಭಗವಂತನು ತನ್ನವರೇ ಆದ ಮಕ್ಕಳ ಮೇಲಿನ ಅಪಾರಕಾರುಣ್ಯದಿಂದಾಗಿ ಸಹಾಯಹಸ್ತ ಚಾಚುತ್ತಾನೆ. ಅದು ಎಂದಿಗೂ ನಿಲ್ಲುವಂಥದಲ್ಲ. ಎಲ್ಲ ಪಂಥಗಳ ಮೇಲೆಯೂ ಹರಿದು ಬರುವುದೇ ಆಗಿದೆ. ನಮ್ಮ ಸ್ವಾಮಿ ಎಲ್ಲ ಧರ್ಮಗಳ ಸ್ವಾಮಿ. ಈ ಚಿಂತನೆ ಭಾರತಕ್ಕೆ ಮಾತ್ರವೇ ಸೇರಿದ್ದು. ಪ್ರಪಂಚದ ಯಾವುದೇ ಬೇರೆ ಧರ್ಮಗ್ರಂಥದಲ್ಲಿ ಇದನ್ನು ನೀವು ಕಾಣುವುದು ಸಾಧ್ಯವೇ, ನಾನು ನಿಮಗೆ ಸವಾಲು ಹಾಕುತ್ತೇನೆ.

ಭಗವಂತನ ವಿಶೇಷ ಅನುಗ್ರಹದಿಂದ ಹಿಂದುಗಳು ನಾವು ಈಗ ಒಂದು ನಿರ್ಣಾಯಕ, ಜವಾಬ್ದಾರಿಯುತ ಘಟ್ಟದಲ್ಲಿ ಇರುವಂತಾಗಿದೆ. ಪಾಶ್ಚಾತ್ಯರಾಷ್ಟ್ರಗಳು ಆಧ್ಯಾತ್ಮಿಕಸಹಾಯಕ್ಕಾಗಿ ನಮ್ಮಲ್ಲಿಗೆ ಬರುತ್ತಿದ್ದಾರೆ. ಭಾರತದ ಮಕ್ಕಳ ಮೇಲೆ ಬಹಳ ದೊಡ್ಡ ನೈತಿಕ ಜವಾಬ್ದಾರಿ ಬಿದ್ದಿದೆ. ಮಾನವನ ಅಸ್ತಿತ್ವದ ಸಮಸ್ಯೆಗಳ ಸಂಬಂಧದಲ್ಲಿ ಪ್ರಪಂಚಕ್ಕೆ ತಿಳಿವಳಿಕೆಯನ್ನು ಕೊಡುವ ಕೆಲಸಕ್ಕೆ ತಮ್ಮನ್ನು ಪೂರ್ತಿಯಾಗಿ ಸಜ್ಜುಗೊಳಿಸಿಕೊಳ್ಳಬೇಕಾಗಿದೆ. ಒಂದು ಸಂಗತಿಯನ್ನು ಮನದಟ್ಟು ಮಾಡಿಕೊಳ್ಳಬೇಕು. ಬೇರೆ ದೇಶಗಳಲ್ಲಿ ಒಳ್ಳೆಯವರು, ಮಹಾಪುರುಷರು ತಮ್ಮ ವಂಶಾನುಕ್ರಮವನ್ನು ಯಾವುದೋ ಒಂದು ಗಿರಿದುರ್ಗದಲ್ಲಿ ವಾಸವಿದ್ದು ಆಗಿಂದಾಗ್ಗೆ ಅಲ್ಲಿ ಸುಳಿದುಹೋಗುವ ದಾರಿಹೋಕರನ್ನು ಸುಲಿಗೆಮಾಡುವ ಯಾವುದೋ ನೀತಿನಿಷ್ಠೆಗಳಿಲ್ಲದ ಧನಾಢ್ಯನವರೆಗೆ ಶೋಧದ ಮೂಲಕ ಗುರುತು ಹಚ್ಚಿ ಹೆಮ್ಮೆ ಪಟ್ಟುಕೊಂಡರೆ, ನಾವು ಹಿಂದುಗಳು ಅದಕ್ಕೆ ಪ್ರತಿಯಾಗಿ ಗೆಡ್ಡೆಗೆಣಸುಗಳನ್ನು ತಿಂದುಕೊಂಡು ಬೆಟ್ಟಗಳಲ್ಲಿ, ಗುಹೆಗಳಲ್ಲಿ ವಾಸಿಸುತ್ತ ಪರಮದೈವವನ್ನು ಧ್ಯಾನಿಸುತ್ತ ವಾಸಿಸಿದ ಋಷಿಮುನಿಗಳ ಸಂತತಿಯವರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಈಗ ನಾವು ಕೀಳುಮಟ್ಟಕ್ಕೆ ಇಳಿದಿರಬಹುದು, ಅವನತಿಯ ಸ್ಥಿತಿಗೆ ಬಂದಿರಬಹುದು. ಆದರೆ ನಮ್ಮ ಧರ್ಮದ ಪರವಾಗಿ ತಕ್ಕ ಶ್ರದ್ಧೆಯೊಂದಿಗೆ ಶ್ರಮಿಸುವುದಕ್ಕೆ ಆರಂಭಿಸಿದರೆ, ನಾವು ದೊಡ್ಡವರಾಗಬಹುದು.

* * * *



# ೯. ಬರುತ್ತಿದೆ : ಹಿಂದೆ ಎಂದಾದರೂ ಇದ್ದುದಕ್ಕಿಂತ ಮಹತ್ತರವಾದ ಭಾರತ

ದೊಡ್ಡ ಕೆಲಸಗಳು ಆಗಬೇಕಾಗಿವೆ. ಅದ್ಭುತವಾದ ಶಕ್ತಿಗಳಿಗಾಗಿ ಶ್ರಮಿಸಬೇಕಾಗಿದೆ. ನಾವು ಇತರ ರಾಷ್ಟ್ರಗಳಿಗೆ ಅನೇಕ ವಿಷಯಗಳನ್ನು ಕಲಿಸಬೇಕಾಗಿದೆ. ಇದು ತತ್ತ್ವಜ್ಞಾನದ, ಆಧ್ಯಾತ್ಮಿಕತೆ ನೈತಿಕತೆಗಳ, ಮಾಧುರ್ಯದ, ಸೌಜನ್ಯದ, ಪ್ರೇಮದ ಮಾತೃಭೂಮಿ, ಇವು ಇನ್ನೂ ಚಾಲ್ತಿಯಲ್ಲಿವೆ. ನನ್ನ ಪ್ರಪಂಚವನ್ನು ಕಂಡ ಅನುಭವದಲ್ಲಿ ನನ್ನನ್ನು ದೃಢವಾದ ನೆಲೆಗಟ್ಟಿನ ಮೇಲೆ ನಿಲ್ಲಿಸಿದೆ. ಈ ವಿಷಯದಲ್ಲಿ ಎಲ್ಲ ರಾಷ್ಟ್ರಗಳಲ್ಲಿಯೂ ಭಾರತವೇ ಇನ್ನೂ ಪ್ರಥಮ ಹಾಗೂ ಅಗ್ರಗಣ್ಯ ಆಗಿದೆ ಎಂದು ಧೈರ್ಯವಾಗಿ ನಾನು ಹೇಳಬಲ್ಲೆ. ಈ ಸಣ್ಣ ವಿದ್ಯಮಾನದ ಕಡೆ ನೋಡಿ : ಈ ನಾಲ್ಕೈದು ವರ್ಷಗಳ ಅವಧಿಯಲ್ಲಿ ಅಗಾಧವಾದ ರಾಜಕೀಯ ಪರಿವರ್ತನೆಗಳು ಘಟಿಸಿವೆ. ಬೇರೆ ಬೇರೆ ದೇಶಗಳಲ್ಲಿ ಭಾರಿಭಾರಿಯಾದ ಸಂಸ್ಥೆಗಳು ಈಗ ಇರುವ ಎಲ್ಲಾ ಸಂಸ್ಥೆಗಳನ್ನೂ ಬುಡಮೇಲು ಮಾಡುವ ಪ್ರಯತ್ನಗಳನ್ನು ನಡಸಿವೆ. ಅಲ್ಲದೆ ಅದರಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸನ್ನೂ ಗಳಿಸಿವೆ. ಇದು ಪಾಶ್ಚಾತ್ಯ ಪ್ರಪಂಚದ ಎಲ್ಲೆಡೆ ಕಾಣುವ ವಿದ್ಯಮಾನ. ಈ ಬಗ್ಗೆ ತಾವೇನಾದರೂ ಕೇಳಿ ಬಲ್ಲರೇ ಎಂದು ನಮ್ಮ ಜನರನ್ನು ವಿಚಾರಿಸಿ. ಅವರು ಆ ಬಗ್ಗೆ ಒಂದಕ್ಷರವನ್ನೂ ಕೇಳಿ ಬಲ್ಲವರಲ್ಲ. ಆದರೆ ಷಿಕಾಗೋ ನಗರದಲ್ಲಿ ಒಂದು ವಿಶ್ವಧರ್ಮ ಸಮ್ಮೇಳನ (Parliament of Religions) ನಡೆಯಿತೆಂದೂ ಆ ಸಮ್ಮೇಳನಕ್ಕೆ ಭಾರತದಿಂದ ಒಬ್ಬ ಸಂನ್ಯಾಸಿಯನ್ನು ಕಳಿಸಿಕೊಡಲಾಯಿತೆಂದೂ ಆತನನ್ನು ಅಲ್ಲಿ ಚೆನ್ನಾಗಿ ನೋಡಿಕೊಳ್ಳಲಾಯಿತೆಂದೂ ಆ ದಿನಗಳಿಂದ ಪಶ್ಚಿಮದೇಶದಲ್ಲಿ ಆತ ಕಾರ್ಯತತ್ಪರನಾಗಿರುವನೆಂದೂ ಇಲ್ಲಿಯ ಒಬ್ಬ ಅತಿಬಡವನಾದ ಭಿಕ್ಷುಕ ಸಹ ಬಲ್ಲವನಾಗಿದ್ದಾನೆ. ನಮ್ಮ ಸಾಮಾನ್ಯಜನ ದಡ್ಡರು, ಅವರಿಗೆ ವಿದ್ಯೆ ಬೇಕಿಲ್ಲ, ಯಾವ ಸುದ್ದಿ ಸಂಗತಿಗಳನ್ನೂ ತಿಳಿಯಬೇಕೆಂದಿಲ್ಲ ಎಂಬುದಾಗಿ ಹೇಳುವುದನ್ನು ನಾನು ಕೇಳಿದ್ದೇನೆ. ಹಿಂದೆ ಒಂದೊಮ್ಮೆ ನಾನೂ ಅದೇ ಅಭಿಪ್ರಾಯದ ಕಡೆಗೆ ಮೂರ್ಖನಾಗಿ ವಾಲಿದ್ದೆ. ಆದರೆ ಎಷ್ಟೋ ಊಹೆ ಕಲ್ಪನೆಗಳಿಗಿಂತ, ವಿಶ್ವಪರ್ಯಟನೆ ಮಾಡುವವರು ಬರೆಯುವ ಎಷ್ಟೋ ಪ್ರಮಾಣದ

ಪುಸ್ತಕಗಳಿಗಿಂತ, ಆತುರಗಾರ ವೀಕ್ಷಕರಿಗಿಂತ ಅನುಭವವೇ ಬಹುದೊಡ್ಡ ಬೋಧಕನೆಂಬುದನ್ನು ನಾನು ಕಂಡುಕೊಂಡೆ. ಈ ಅನುಭವ ನನಗೆ ಕಲಿಸಿದ್ದು ಎಂದರೆ : ಅವರು ದಡ್ಡರಲ್ಲ, ಅವರು ನಿಧಾನಸ್ಥರೂ ಅಲ್ಲ, ಸೂರ್ಯಮಂಡಲದ ಕೆಳಗಿರುವ ಇತರ ಯಾವುದೇ ಜನಾಂಗದವರ ಹಾಗೆ ಅವರು ಕೂಡ ಕುತೂಹಲಿಗಳೇ, ಉತ್ಸುಕರೇ. ಆದರೆ ಪ್ರತಿಯೊಂದು ರಾಷ್ಟ್ರಕ್ಕೂ ನಿರ್ವಹಿಸಲು ಅದರದೇ ಆದ ಪಾತ್ರವುಂಟು. ಸ್ವಾಭಾವಿಕವಾಗಿ ಪ್ರತಿಯೊಂದು ರಾಷ್ಟ್ರಕ್ಕೂ ಅದರದೇ ಆದ ವೈಲಕ್ಷಣ್ಯ ವೈಯಕ್ತಿಕತೆಗಳು ಇರುತ್ತವೆ. ಅದು ಅದರ ಹುಟ್ಟುಸ್ವಭಾವ. ದಿಟವಾಗಿ ಈ ರಾಷ್ಟ್ರಗಳ ಸ್ವರಮೇಳದಲ್ಲಿ ಪ್ರತಿಯೊಂದೂ ಒಂದು ವಿಲಕ್ಷಣ ಸ್ವರವಿಶೇಷವನ್ನು ಪ್ರತಿನಿಧಿಸುತ್ತದೆ. ಅದೇ ಆ ರಾಷ್ಟ್ರದ ಜೀವನ, ಜೀವಸತ್ತ್ವ, ರಾಷ್ಟ್ರೀಯ ಜೀವನದ ಬೆನ್ನೆಲುಬು, ಅಸ್ತಿಭಾರ, ಆಧಾರಶಿಲೆ ಅದರಲ್ಲಿಯೇ ಇರುತ್ತದೆ. ಇಲ್ಲಿ, ಈ ಪುಣ್ಯಭೂಮಿಯಲ್ಲಿ, ಅಸ್ತಿಭಾರ, ಬೆನ್ನೆಲಬು, ಜೀವಕೇಂದ್ರ ಎಂದರೆ ಧರ್ಮ, ಧರ್ಮ ಮಾತ್ರವೇ. ಉಳಿದವರು ಬೇಕಾದರೆ ರಾಜಕೀಯದ ಬಗ್ಗೆ ಮಾತಾಡಲಿ ; ವಾಣಿಜ್ಯವ್ಯವಹಾರದಲ್ಲಿ ಬಂದು ಸುರಿಯುವ ಅಗಾಧ ಸಂಪತ್ತಿನ ಸಂಗ್ರಹದ ವೈಭವ ಕುರಿತು ಮಾತಾಡಲಿ. ಆದರೆ ಈ ವಿಷಯಗಳನ್ನು ಹಿಂದುಮನಸ್ಸು ಅರ್ಥಮಾಡಿಕೊಳ್ಳಲಾರದು, ಅರ್ಥಮಾಡಿಕೊಳ್ಳಲು ಅದಕ್ಕೆ ಇಷ್ಟವೂ ಇಲ್ಲ. ಅವನನ್ನು ಆಧ್ಯಾತ್ಮಿಕತೆ, ಧರ್ಮ, ದೇವರು, ಆತ್ಮ, ಅನಂತತೆ, ಆಧ್ಯಾತ್ಮಿಕಸ್ವಾತಂತ್ರ್ಯ ಇವುಗಳ ವಿಷಯದಲ್ಲಿ ಮಿಡಿದು ನೋಡಿ. ನಾನು ನಿಮಗೆ ಭರವಸೆ ಕೊಡುತ್ತೇನೆ. ಭಾರತದಲ್ಲಿಯ ಅತಿಸಾಮಾನ್ಯವಾದ ರೈತನೊಬ್ಬ ಕೂಡ ಬೇರೆ ದೇಶಗಳಲ್ಲಿ ತತ್ತ್ವಜ್ಞಾನಿಗಳೆಂದು ಹೇಳಿಕೊಳ್ಳುವ ಎಷ್ಟೋ ಜನರಿಗಿಂತ ಇನ್ನೂ ಚೆನ್ನಾಗಿಯೇ ತಿಳಿದವನಾಗಿರುತ್ತಾನೆ. ಮಹನೀಯರೇ, ಪ್ರಪಂಚಕ್ಕೆ ನಾವು ಕಲಿಸಬಹುದಾದ ಇನ್ನೂ ಏನೋ ಇದೆ ಎಂದು ಈಗಾಗಲೇ ಹೇಳಿದ್ದೇನೆ. ಇದೇ ಕಾರಣದಿಂದಾಗಿ, ಮೂಲೋದ್ದೇಶದಿಂದಾಗಿ, ನೂರಾರು ವರ್ಷಗಳ ಮತೀಯ ಹಿಂಸೆಯಿದ್ದೂ, ಸಾವಿರಾರು ವರ್ಷಗಳ ವಿದೇಶಿ ಆಡಳಿತ ಹಾಗೂ ವಿದೇಶೀಯರ ದಬ್ಬಾಳಿಕೆಯಿದ್ದೂ ಈ ದೇಶ ಜೀವನ ನಡಸುತ್ತ ಬಂದಿದೆ. ಈ ದೇಶ ಇನ್ನೂ ಬದುಕುವುದು. ಅದರ ಮೂಲೋದ್ದೇಶವೆಂದರೆ, ದೈವದಲ್ಲಿ ಅದರ ನಂಬಿಕೆ, ಧರ್ಮದ ಭಂಡಾರ, ಆಧ್ಯಾತ್ಮಿಕತೆ.

ಈ ನಾಡಿನಲ್ಲಿ ಇನ್ನೂ ಧರ್ಮ ಆಧ್ಯಾತ್ಮಿಕತೆಗಳೇ ಪ್ರಪಂಚದ ಮೇಲೆ ಉಕ್ಕಿ ಹರಿದು ತೋಯಿಸಬೇಕಾಗಿರುವ ಒರತೆಗಳು; ಪಾಶ್ಚಾತ್ಯ ರಾಷ್ಟ್ರಗಳಿಗೆ, ಇತರ ರಾಷ್ಟ್ರಗಳಿಗೆ ಹೊಸ ಬದುಕು, ಹೊಸ ಸತ್ತ್ವ. ಈಗಲೂ ಅವು ಕುಗ್ಗಿಹೋಗಿವೆ, ಅರೆಜೀವವಾಗಿವೆ, ಕೀಳುಮಟ್ಟಕ್ಕಿಳಿದಿವೆ. ಕಾರಣವೆಂದರೆ, ಅಲ್ಲಿಯ ರಾಜಕೀಯ ಮಹತ್ವಾಕಾಂಕ್ಷೆಗಳು, ಸಾಮಾಜಿಕ ಷಡ್ಯಂತ್ರಗಳು. ಅನೇಕಾನೇಕ ಧ್ವನಿಗಳ ನಡುವೆ ಸ್ವರಸಾಂಗತ್ಯವಿರುವ, ಭಾರತದ ವಾತಾವರಣವನ್ನು ತುಂಬಿಕೊಳ್ಳುತ್ತಿರುವ ಧ್ವನಿಗಳ



ಕಲಸುಮೆಲಸಿನಲ್ಲಿ ತನ್ನದೇ ಬೇರೆಯೆಂಬಂತಿರುವ ಒಂದು ಮಹೋಚ್ಚವಾದ, ಗಮನಾರ್ಹವಾದ, ಪೂರ್ಣವಾದ ಒಂದು ಜೀವಧ್ವನಿ ಮೇಲೇಳುವುದು. ಅದೇ ತ್ಯಾಗ. ಕೊಟ್ಟುಬಿಡಿ ! ಭಾರತೀಯ ಧರ್ಮಗಳಲ್ಲಿರುವ ಘೋಷವಾಕ್ಯವದು ; ಈ ಪ್ರಪಂಚ ಎರಡು ದಿವಸಗಳ ಒಂದು ಭ್ರಮಾಲೋಕ ; ಈ ವರ್ತಮಾನ ಜೀವನವೆನ್ನುವುದು ಐದು ನಿಮಿಷ. ಈ ಭ್ರಮಾಲೋಕದ ಆಚೆಗೆ, ಆಚೆಗೆ ಇರುವುದು ಅನಂತತೆ. ಅದನ್ನು ನಾವು ಹುಡುಕೋಣ. ಈ ಭೂಖಂಡ ಧೀರವೂ ಅಗಾಧವೂ ಆದ ಮನಸ್ಸುಗಳ, ಬುದ್ಧಿಗಳ ಮೂಲವಾಗಿ ಪ್ರಕಾಶಮಾನವಾಗಿದೆ. ಅವು ಕೂಡ ಈ ಅನಂತ ವಿಶ್ವವೆಂದು ಹೇಳುವುದನ್ನು ಒಂದು ಕೆಸರುಹೊಂಡವೆಂದೇ ತಿಳಿಯುತ್ತವೆ. ಅದರ ಆಚೆಗೆ, ಇನ್ನೂ ಆಚೆಗೆ ಅವರು ಹೋಗುತ್ತಾರೆ. ಕಾಲ, ಅನಂತಕಾಲ ಎನ್ನುವುದು ಕೂಡ, ಅವರ ಪಾಲಿಗೆ ಅನಸ್ತಿತ್ವ. ಆಚೆಗೆ, ಕಾಲದಿಂದಾಚೆಗೆ ಅವರು ಹೋಗುತ್ತಾರೆ. ದೇಶ ಎನ್ನುವುದು ಅವರಿಗೆ ಏನೂ ಅಲ್ಲ. ಅದರ ಆಚೆಗೆ ಅವರು ಹೋಗಬಯಸುತ್ತಾರೆ. ಈ ದೃಶ್ಯದಿಂದ ಅತೀತಕ್ಕೆ ಹೋಗುವುದು ಎನ್ನುವುದೇ ಧರ್ಮದ ಸಾಕ್ಷಾತ್ ಜೀವಾಳ. ನನ್ನ ರಾಷ್ಟ್ರದ ವಿಶೇಷ ಗುಣಲಕ್ಷಣ ಎಂದರೆ, ಈ ಅತೀಂದ್ರಿಯಾಭೂತಿ, ಅತೀತದತ್ತ ಹೋಗುವ ಈ ಹೋರಾಟ, ಪ್ರಕೃತಿಯ ಮೊಗದಿಂದ ಆವರಣವನ್ನು ಹರಿದೊಗೆಯುವ ಈ ಆತ್ಮವಿಶ್ವಾಸ ; ಎಂಥ ತೊಂದರೆಯೇ ಬರಲಿ, ಯಾವುದೇ ಬೆಲೆ ತೆರಬೇಕಾಗಿರಲಿ, ಆ ಅತೀತದ ಒಂದು ದರ್ಶನವನ್ನು ಗಳಿಸುವುದು, ಅದು ನಮ್ಮ ಆದರ್ಶ. ಆದರೆ ಒಂದು ದೇಶದಲ್ಲಿ ಸಕಲರೂ ಸಂಪೂರ್ಣವಾಗಿ ಎಲ್ಲವನ್ನೂ ಹಾಗೆ ತೊರೆಯುವುದು ಸಾಧ್ಯವಿಲ್ಲ. ಅವರನ್ನು ನೀವು ಉತ್ಸಾಹಗೊಳಿಸಲು ಬಯಸುತ್ತೀರೇನು? ಹಾಗಾದರೆ ಅದಕ್ಕೆ ಒಂದು ದಾರಿಯಿದೆ. ರಾಜಕೀಯದ, ಸಮಾಜಸುಧಾರಣೆಯ ನಿಮ್ಮ ಮಾತುಗಳು ಹಣಮಾಡುವ ವ್ಯಾಪಾರ ವಾಣಿಜ್ಯ ನಡಸುವ ನಿಮ್ಮ ಮಾತುಗಳು ಇವೆಲ್ಲಾ ಬಾತುಕೋಳಿಯೊಂದರ ಬೆನ್ನಮೇಲಿನ ನೀರಿನಂತೆ ಆಗ ಉರುಳಿಹೋಗುತ್ತವೆ. ಅದೇ ಆಧಾತ್ಮವನ್ನು, ನೀವು ಪ್ರಪಂಚಕ್ಕೆ ಕಲಿಸಬೇಕಾಗಿದೆ. ಇದಕ್ಕಿಂತ ನಾವು ಕಲಿಯತಕ್ಕದ್ದೇನು? ಪ್ರಪಂಚದಿಂದ ಇನ್ನೇನು ತಾನೆ ಕಲಿಯ ಬೇಕಾಗಿದೆ? ಬಹುಶಃ ನಾವು ಲೌಕಿಕವಿಷಯಜ್ಞಾನದಲ್ಲಿ, ಸಂಘಟನೆಯ ಶಕ್ತಿ ಅಧಿಕಾರಶಕ್ತಿಯನ್ನು ನಿರ್ವಹಿಸುವ ಕೌಶಲ, ಪ್ರಭಾವ ಸಾಮರ್ಥ್ಯಗಳ ಸಂಚಯನ, ತೀರ ಸಣ್ಣ ಉದ್ದೇಶಗಳಿಂದ ಅತ್ಯುತ್ತಮ ಫಲಿತಾಂಶಗಳ ಲಾಭ ಪಡೆಯುವುದು ಕಲಿಯಬೇಕಾದ ಸಂಗತಿಗಳು. ಇವನ್ನು ಕೆಲಮಟ್ಟಿಗೆ ನಾವು ಪಾಶ್ಚಾತ್ಯರಿಂದ ಕಲಿಯಬಹುದಾಗಿದೆ. ಆದರೆ ಭಾರತದಲ್ಲಿ ಯಾರಾದರೊಬ್ಬನು ತಿನ್ನುವುದು, ಕುಡಿಯುವುದು, ಮೋಜುಮಾಡುವುದು ಇವನ್ನು ಬೋಧಿಸಿದರೆ, ಯಾರಾದರೊಬ್ಬನು ಈ ಭೌತಿಕ ವಿಶ್ವವನ್ನು ದೇವರನ್ನಾಗಿ ದೈವೀಕರಿಸಲು ಬಯಸಿದರೆ, ಆ ಮನುಷ್ಯನೊಬ್ಬ ಸುಳ್ಳುಗಾರ. ಅವನಿಗೆ ಈ ಪವಿತ್ರಭೂಮಿಯಲ್ಲಿ ಸ್ಥಾನವಿಲ್ಲ. ಭಾರತೀಯ ಮನಸ್ಸು ಅವನನ್ನು ಕೇಳಿಸಿಕೊಳ್ಳಲು

ಬಯಸುವುದಿಲ್ಲ. ಅಯ್ಯೋ ! ಪಾಶ್ಚಾತ್ಯ ನಾಗರಿಕತೆಯ ತಳುಕುಪಳುಕುಗಳೇನೇ ಇರಲಿ, ಪ್ರಭಾವ ಆಕರ್ಷಣೆಗಳ ಬೆಡಗು ಬಿನ್ನಾಣಗಳೇನೇ ಇರಲಿ, ಅವೆಲ್ಲಾ ವ್ಯರ್ಥ ಎಂದು ನಾನು ಅವರ ಮುಖಕ್ಕೇ ಹೇಳುತ್ತೇನೆ. ಅದು ನಿರರ್ಥಕದಲ್ಲಿ ನಿರರ್ಥಕ. ದೇವರೊಬ್ಬನೇ ಇರುವವನು, ಆತ್ಮವೊಂದೇ ಇರುವುದು, ಅಧ್ಯಾತ್ಮವೊಂದೇ ಬದುಕು. ಅದನ್ನು ಹಿಡಿದು ನಡೆಯಿರಿ ! ಆದರೂ, ಬಹುಶಃ, ಯಾವುದೋ ಒಂದು ಬಗೆಯ ಪ್ರಾಪಂಚಿಕತೆ (ಭೌತವಾದ), ನಮ್ಮ ಆವಶ್ಯಕತೆಗಳಿಗಾಗಿ ಒಂದಷ್ಟು ಮೆದುಗೊಳಿಸಿದ ರೂಪದಲ್ಲಿ, ಇನ್ನೂ ಆ ಅತ್ಯುನ್ನತಸತ್ಯಗಳ ತಿಳಿವಿಗೆ ಪಕ್ವವಾಗದ ನಮ್ಮ ಎಷ್ಟೋ ಮಂದಿ ಸೋದರರಿಗೆ ವರವೇ ಆಗಿದೆ. ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಸಮಾಜದಲ್ಲಿಯೂ ಈ ತಪ್ಪು ನಡೆದಿದೆ. ಭಾರತದಲ್ಲಿ, ಇನ್ನೂ ಸಿದ್ಧವಾಗಿರದ ಜನರ ಮೇಲೆ ಅತ್ಯುನ್ನತಸತ್ಯಗಳನ್ನು, ಎಂದಿನಿಂದಲೂ ತಿಳಿದಿದ್ದು ಕೂಡ, ಒತ್ತಾಯವಾಗಿ ಹೇರುವ ಪ್ರಯತ್ನದ ಅದೇ ತಪ್ಪನ್ನು ಈಚೆಗೆ ಮಾಡಲಾಗುತ್ತಿದೆ. ಇದು ತುಂಬ ಶೋಚನೀಯವಾದ ಸಂಗತಿ. ನನ್ನ ಪದ್ಧತಿಯೇ ನಿಮ್ಮ ಪದ್ಧತಿ ಆಗಬೇಕಾಗಿಲ್ಲ. ನಿಮಗೆಲ್ಲರಿಗೂ ತಿಳಿದಂತೆ, ಸಂನ್ಯಾಸ ಹಿಂದುಜೀವನ ಪದ್ಧತಿಯ ಆದರ್ಶ. ನಮ್ಮ ಶಾಸ್ತ್ರಗಳ ಪ್ರಕಾರ ಪ್ರತಿಯೊಬ್ಬರೂ ತಪ್ಪದೆ ತ್ಯಾಗಮಾಡಬೇಕು. ಪ್ರತಿಯೊಬ್ಬ ಹಿಂದುವೂ ಈ ಪ್ರಪಂಚದ ಫಲಗಳನ್ನು ಸವಿದು ಆದಮೇಲೆ ತನ್ನ ಜೀವನದ ಉತ್ತರಾರ್ಧದಲ್ಲಿ ತ್ಯಾಗಮಾಡಬೇಕು. ಯಾವನು ಹಾಗೆ ಮಾಡುವುದಿಲ್ಲವೋ ಅವನು ಹಿಂದುವಲ್ಲ, ಹಿಂದುವೆಂದು ತನ್ನನ್ನು ಕರೆದುಕೊಳ್ಳಲು ಅವನಿಗೆ ಯಾವ ಹಕ್ಕೂ ಇಲ್ಲ. ಇದು ಆದರ್ಶ ಎಂದು ನಾವು ಬಲ್ಲೆವು – ಕಂಡದ್ದು ಆದ ಮೇಲೆ, ಅನುಭವಿಸಿ ಆದ ಮೇಲೆ ಪ್ರಾಪಂಚಿಕ ಸಂಗತಿಗಳು ನಿರರ್ಥಕ. ಪ್ರಾಪಂಚಿಕ ಜಗತ್ತಿನ ಹೃದಯ ಬರಿಯ ಟೊಳ್ಳು, ಅದರಲ್ಲಿರುವುದು ಬರಿಯ ಬೂದಿ ಎಂದು ಕಂಡುಕೊಂಡ ಮೇಲೆ ಅದನ್ನು ತೊರೆಯಿರಿ, ಹಿಂದಕ್ಕೆ ತೆರಳಿ. ಮನಸ್ಸು ಸಹಜವಾಗಿ ಇಂದ್ರಿಯಗಳ ಕಾರ್ಯದ ಕಡೆಗೆ ಮುಮ್ಮುಖವಾಗಿ ಸುತ್ತುತ್ತದೆ ; ಆ ಮನಸ್ಸು ಹಿಮ್ಮುಖವಾಗಿ ಸುತ್ತಬೇಕು. ಪ್ರವೃತ್ತಿ ನಿಲ್ಲಬೇಕು, ನಿವೃತ್ತಿ ಆರಂಭವಾಗಬೇಕು. ಇದು ಆದರ್ಶ. ಆದರೆ ಕೆಲಮಟ್ಟಿಗೆ ಅನುಭವವಾದ ಬಳಿಕ ಈ ಆದರ್ಶ ಅರ್ಥವಾಗುತ್ತದೆ. ಮಗುವಿಗೆ ತ್ಯಾಗದ ಮೌಲ್ಯವನ್ನು ಕಲಿಸಲಾಗದು. ಮಗು ಜನ್ಮತಃ ಆಶಾವಾದಿ. ಅದರ ಜೀವನವೆಲ್ಲಾ ಇಂದ್ರಿಯದ ಕಾರ್ಯಗಳಿಗೇ ಹೊಂದಿಕೊಂಡಿರುತ್ತದೆ. ಅದರ ಜೀವನಸಮಸ್ತವೂ ಇಂದ್ರಿಯಸುಖದ ಒಂದು ಮೊತ್ತ. ಪ್ರತಿ ಸಮಾಜದಲ್ಲಿಯೂ ಮಕ್ಕಳಂತಹ ಮನುಷ್ಯರಿರುತ್ತಾರೆ. ಅವರಿಗೆ ಎಲ್ಲಾ ನಿರರ್ಥಕ ಎಂದು ತಿಳಿಯುವ ಮೊದಲು, ಕೊಂಚ ಅನುಭವ ಆಗಬೇಕು, ಕೊಂಚ ಮೋಜು ಬೇಕು. ಬಳಿಕ ತ್ಯಾಗ (ವಿರಕ್ತಿ) ಅವರಿಗೆ ಬರುತ್ತದೆ. ನಮ್ಮ ಪೂಜ್ಯ ಗ್ರಂಥಗಳಲ್ಲಿ ಅವಕ್ಕೆ ಸಾಕಷ್ಟು ಸ್ಥಾನ ಕಲ್ಪಿಸಿದೆ. ಆದರೆ ದುರದೃಷ್ಟವಶಾತ್, ಅನಂತರದ ಕಾಲದಲ್ಲಿ ಸಂನ್ಯಾಸಿಗೆ ವಿಧಿಸಿದ ಕಟ್ಟುಕಟ್ಟಳೆಗಳಿಂದಲೇ ಎಲ್ಲರನ್ನೂ ಬಂಧಿಸುವ ಒಂದು ಪ್ರವೃತ್ತಿ ನಡೆದು



ಬಂದಿದೆ. ಇದೊಂದು ದೊಡ್ಡ ಪ್ರಮಾದ.

ಅದು ಹಾಗಲ್ಲವಾದರೆ, ಭಾರತದಲ್ಲಿ ನೀವು ಕಾಣುತ್ತಿರುವ ಈ ಮಟ್ಟಿನ ದಾರಿದ್ರ್ಯ ಮತ್ತು ದುಃಖಗಳು ಇರಬೇಕಾಗಿರಲಿಲ್ಲ. ಒಬ್ಬ ಬಡಮನುಷ್ಯನ ಬದುಕು ಆತನಿಗೇನೂ ಪ್ರಯೋಜನವಿಲ್ಲದ ಪ್ರಚಂಡವಾದ ಆಧ್ಯಾತ್ಮಿಕ, ನೈತಿಕ ಕಟ್ಟು ಪಾಡುಗಳಿಂದ ಸುತ್ತುವರಿದಿದೆ, ಕಟ್ಟುಗೊಂಡಿದೆ. ಅಡ್ಡ ಬರಬೇಡಿ! ಬಡಮನುಷ್ಯ ಸ್ವಲ್ಪಮಟ್ಟಿಗೆ ತಾನು ಸುಖಪಡಲಿ. ಆಮೇಲೆ ಆತ ತಾನೇ ತನ್ನನ್ನು ಮೇಲುನೆಲೆಗೆ ತಂದುಕೊಳ್ಳುತ್ತಾನೆ ; ಆಮೇಲೆ ತ್ಯಾಗ (ವಿರಕ್ತಿ) ತನಗೆ ತಾನೇ ಆತನಿಗೆ ಬರುತ್ತದೆ. ಬಹುಶಃ ಈ ದಿಕ್ಕಿನಲ್ಲಿ, ನಾವು ಪಾಶ್ಚಾತ್ಯರಿಂದ ಸ್ವಲ್ಪಮಟ್ಟಿಗೆ ಕಲಿಯುವುದಿದೆ. ಆದರೆ ಈ ವಿಷಯಗಳನ್ನು ನಾವು ಕಲಿಯುವಾಗ ತುಂಬ ಎಚ್ಚರಿಕೆಯಿಂದಿರಬೇಕು. ಈಚಿನ ದಿನಗಳಲ್ಲಿ ಪಾಶ್ಚಾತ್ಯ ವಿಚಾರಗಳನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿಗಳನ್ನು ಕಾಣುವಾಗ ಅವರಲ್ಲಿ ಹೆಚ್ಚಿನ ದೃಷ್ಟಾಂತಗಳು ಹೆಚ್ಚೋ ಕಡಮೆಯೋ ಸೋತು ಹೋದಂಥವು.

ಭಾರತದಲ್ಲಿ, ನಮ್ಮ ಮಾರ್ಗಕ್ರಮಣದಲ್ಲಿ ಎರಡು ದೊಡ್ಡ ಅಡಚಣೆಗಳಿವೆ. ಒಂದು, ಹಳೆಯ ಕರ್ಮಠತೆ ; ಇನ್ನೊಂದು ಆಧುನಿಕ ಐರೋಪ್ಯ ನಾಗರಿಕತೆ. ಇದು ಅತ್ತ ದರಿ, ಇತ್ತ ಹುಲಿ ಎಂಬಂತೆ ಜೋಡಿ ಅಪಾಯಗಳು. ಈ ಎರಡರಲ್ಲಿ ನಾನು ಹಳೆಯ ಕರ್ಮಠತೆಗೆ ನನ್ನ ಮತ ಹಾಕುತ್ತೇನೆ, ಐರೋಪ್ಯ ಜೀವನಕ್ರಮಕ್ಕೆ ಅಲ್ಲ. ಹಳೆಯ ಕರ್ಮಠತೆಯ ಮನುಷ್ಯ (ಸಂಪ್ರದಾಯವಾದಿ) ಅಜ್ಞನಿರಬಹುದು, ಒರಟನಿರಬಹುದು ; ಆದರೆ ಆತ ಒಬ್ಬ ಮನುಷ್ಯ. ಅವನಿಗೆ ಒಂದು ನಂಬಿಕೆಯಿದೆ, ಒಂದು ಸಾಮರ್ಥ್ಯವಿದೆ. ಅವನು ತನ್ನ ಕಾಲ ಮೇಲೆ ತಾನು ನಿಂತಿದ್ದಾನೆ. ಆದರೆ ಐರೋಪ್ಯ ನಾಗರಿಕತೆಯನ್ನು ಮೈಗೂಡಿಸಿಕೊಂಡ ಮನುಷ್ಯ ಬೆನ್ನೆಲುಬು ಇಲ್ಲದವನು. ಯಾವ ಯಾವುದೋ ಮೂಲಗಳಿಂದ ಅಲ್ಲಿಷ್ಟು ಇಲ್ಲಿಷ್ಟು ಆರಿಸಿಕೊಂಡ, ಒಂದಕ್ಕೊಂದು ಹೊಂದಿಕೆಯಿಲ್ಲದ ಮಿಶ್ರರೂಪದ ಭಾವನೆಗಳ ಒಂದು ಕಲಬೆರಕೆ ಮನುಷ್ಯ. ಈ ಭಾವನೆಗಳಾದರೋ ಜೀರ್ಣವಾಗದವು, ಅರ್ಥಮಾಡಿಕೊಳ್ಳದವು, ಸಂಗತವಲ್ಲದವು, ಅವನು ತನ್ನ ಕಾಲ ಮೇಲೆ ತಾನೇ ನಿಂತಿರದವನು. ಅವನ ತಲೆ ಸುತ್ತುತ್ತಲೇ ಇರುತ್ತದೆ. ಅವನ ಕಾರ್ಯಗಳ ಪ್ರೇರಕಶಕ್ತಿಯೆ ಎಲ್ಲಿ? ಇಂಗ್ಲಿಷ್ ಜನರಿಂದ ಒಂದಿಷ್ಟು ಪ್ರೋತ್ಸಾಹಕವಾದ ಪ್ರಶಂಸೆ. ಅವನ ಸುಧಾರಣೆಯ ಯೋಜನೆಗಳು ಇಲ್ಲಿಯ ಕೆಲವು ಸಾಮಾಜಿಕ ಆಚರಣೆಗಳ ಕೆಡುಕುಗಳ ಪ್ರತಿಯಾದ ಉಗ್ರವಾದ ದೂಷಣೆಗಳು. ಇವು ಕೆಲಮಟ್ಟಿನ ಐರೋಪ್ಯ ಪ್ರೋತ್ಸಾಹ ಪೋಷಣೆಗಳಿಗೆ ಮುಖ್ಯ ಪ್ರಚೋದನೆಗಳಾಗಿವೆ. ನಮ್ಮ ಕೆಲವು ಆಚರಣೆಗಳು ಏಕೆ ಕೆಡುಕುಗಳೆನ್ನಿಸಿವೆ? ಏಕೆಂದರೆ, ಐರೋಪ್ಯರು ಹಾಗೆನ್ನುತ್ತಾರೆ. ಆತ ಕೊಡುವುದು ಅದೊಂದೇ ಕಾರಣವನ್ನು. ನಾನು ಅದನ್ನು ಒಪ್ಪಲಾರೆ. ನಿಮ್ಮ ಶಕ್ತಿಯ ಮೇಲೆ ನೀವು ನಿಲ್ಲಿ, ಸಾಯಿರಿ.

ಪ್ರಪಂಚದಲ್ಲಿ ಏನಾದರೂ ಪಾಪವೆನ್ನುವುದಿದ್ದರೆ, ಅದು ದೌರ್ಬಲ್ಯ. ಎಲ್ಲಾ ರೀತಿಯ ದೌರ್ಬಲ್ಯವನ್ನೂ ನಿವಾರಿಸಿಕೊಳ್ಳಿ. ದೌರ್ಬಲ್ಯವೇ ಪಾಪ, ದೌರ್ಬಲ್ಯವೇ ಸಾವು. ನಿಮ್ಮ ಕಾಲುಗಳ ಮೇಲೆ ನೀವು ನಿಲ್ಲಿ. ನಿಮ್ಮಿಂದ ಎಷ್ಟು ಅರಗಿಸಿಕೊಳ್ಳಲು ಸಾಧ್ಯವೋ, ಅಷ್ಟನ್ನು ಅರಗಿಸಿಕೊಳ್ಳಿ. ಎಲ್ಲಾ ದೇಶಗಳಿಂದಲೂ ಕಲಿಯಿರಿ. ಯಾವುದರಿಂದ ಪ್ರಯೋಜನವುಂಟೋ ಅದನ್ನು ಪಡೆಯಿರಿ. ಆದರೆ ಹಿಂದುಗಳಾಗಿ ಉಳಿದೆಲ್ಲವೂ ನಮ್ಮ ರಾಷ್ಟ್ರೀಯ ಆದರ್ಶಗಳಿಗೆ ಅಧೀನವಾಗಿರಬೇಕು ಎಂಬುದನ್ನು ನೆನಪಿಟ್ಟುಕೊಳ್ಳಿ. ಪ್ರತಿಯೊಬ್ಬನಿಗೂ ಬದುಕಿನಲ್ಲಿ ಒಂದು ಸಾಧಿಸಬೇಕಾದ ಜೀವನಧ್ಯೇಯವುಂಟು. ಅದು ಆತನ ಅನಂತಕಾಲದ ಎಲ್ಲ ಕರ್ಮಗಳ ಪರಿಣಾಮವಾದ್ದು. ನಿಮ್ಮಲ್ಲಿ ಪ್ರತಿಯೊಬ್ಬರೂ ಒಂದು ಅಮೋಘವಾದ ಪರಂಪರೆಯೊಂದಿಗೆ ಹುಟ್ಟಿದ್ದೀರಿ. ಅದು ನಿಮ್ಮ ವೈಭವಪೂರ್ಣ ರಾಷ್ಟ್ರದ ಅನಂತಕಾಲದ ಜೀವನದ ಸಮಗ್ರತೆಯದು. ನಿಮ್ಮ ಪೂರ್ವಿಕರು, ಲಕ್ಷಲಕ್ಷ ಮಂದಿ, ನಿಮ್ಮ ಪ್ರತಿಯೊಂದು ವರ್ತನೆಯನ್ನೂ ಗಮನಿಸುತ್ತಿದ್ದಾರೆ. ಆದ್ದರಿಂದ ಹುಷಾರಾಗಿರಿ. ಅಲ್ಲದೆ, ಹುಟ್ಟಿದ ಪ್ರತಿಯೊಂದು ಹಿಂದು ಮಗುವಿಗೆ ಇರುವ ಜೀವನಧ್ಯೇಯವೇನು? ಬ್ರಾಹ್ಮಣನ ಬಗ್ಗೆ ಮನುವಿನ ಹೆಮ್ಮೆಯ ಘೋಷಣೆಯನ್ನು ನೀವು ಓದಿಲ್ಲವೇನು? ಮನು ಹೇಳುತ್ತಾನೆ : "ಬ್ರಾಹ್ಮಣನ ಹುಟ್ಟು ಧರ್ಮದ ಸಂಪತ್ತನ್ನು ರಕ್ಷಿಸುವುದಕ್ಕಾಗಿ ಇದೆ." ನಾನು ಹೇಳುತ್ತೇನೆ : "ಆ ಜೀವನಧ್ಯೇಯ ಬ್ರಾಹ್ಮಣನದು ಮಾತ್ರವೇ ಅಲ್ಲ, ಈ ಪವಿತ್ರವಾದ ಭೂಮಿಯಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿಗೂ–ಅದು ಗಂಡಿರಲಿ, ಹೆಣ್ಣಿರಲಿ–ಸೇರಿದ್ದು : ಧರ್ಮದ ಸಂಪತ್ತನ್ನು ರಕ್ಷಿಸುವುದು". ಆ ಪ್ರಧಾನವಾದ ಉದ್ದೇಶಕ್ಕೆ ಜೀವನದ ಇತರ ಎಲ್ಲ ಸಮಸ್ಯೆಗಳೂ ಒಳಪಟ್ಟಿರಬೇಕು. ಸಂಗೀತದಲ್ಲಿ ಕೂಡ ಸ್ವರಸಾಮಂಜಸ್ಯದ ನಿಯಮವೂ ಹೀಗೆಯೇ. ರಾಜಕೀಯದ ಪರಮಾಧಿಕಾರ ಜೀವನದ ಉದ್ದೇಶವಾಗಿರುವ ರಾಷ್ಟ್ರವೊಂದು ಇರಬಹುದು. ಆಗ ಧರ್ಮವೂ ಉಳಿದ ಎಲ್ಲವೂ ಅದರ ಜೀವನದ ಮಹೋದ್ದೇಶಕ್ಕೆ ಅಧೀನವಾಗಬೇಕಾಗುತ್ತದೆ. ಆದರೆ ಇಲ್ಲಿ ಇನ್ನೊಂದು ರಾಷ್ಟ್ರವಿದೆ. ಅದರ ಜೀವನದ ಮಹೋದ್ದೇಶವೆಂದರೆ, ಆಧ್ಯಾತ್ಮಿಕತೆ ತ್ಯಾಗ ವಿರಕ್ತಿಗಳು. ಅದರ ಕಾವಲುಮಾತು ಎಂದರೆ : ಈ ಜಗತ್ತು ಸರ್ವಥಾ ನಿರರ್ಥಕ, ಮೂರು ದಿನಗಳ ಭ್ರಮೆ. ಆ ಉದ್ದೇಶಕ್ಕೆ ಇತರ ಎಲ್ಲವೂ, ಅದು ಜ್ಞಾನ ವಿಜ್ಞಾನಗಳಿರಲಿ, ಅಧಿಕಾರಾದಿ ಶಕ್ತಿಗಳ ಭೋಗವಿರಲಿ, ಐಶ್ವರ್ಯ ಹೆಸರು ಕೀರ್ತಿಗಳಿರಲಿ, ಅಧೀನವಾಗಿರಬೇಕು. ನಿಜಹಿಂದುವಿನ ಸ್ವಭಾವಲಕ್ಷಣದ ರಹಸ್ಯವೆಂದರೆ, ತಾನು ಗಳಿಸಿದ ಐರೋಪ್ಯ ವಿಜ್ಞಾನ ಮತ್ತು ವಿದ್ಯೆಗಳ ತಿಳಿವಳಿಕೆ, ಸಂಪತ್ತು, ಸ್ಥಾನ, ಹೆಸರು ಇವೆಲ್ಲವೂ ಪ್ರತಿ ಹಿಂದು ಮಗುವಿಗೂ ಹುಟ್ಟಿನಿಂದಲೇ ಬಂದ ಆಧ್ಯಾತ್ಮಿಕತೆ ಮತ್ತು ಜನಾಂಗದ ಪಾವಿತ್ರ್ಯ ಎಂಬ ಆ ಪ್ರಧಾನೋದ್ದೇಶಕ್ಕೆ ಅಧೀನವಾಗಿರುವುದು ಎನ್ನುವುದೇ ಆಗಿದೆ. ಆದ್ದರಿಂದ ಈ ಇಬ್ಬರಲ್ಲಿ ಕಟ್ಟಾ



ಸಂಪ್ರದಾಯನಿಷ್ಠ ಮನುಷ್ಯನ ವಿಚಾರ ಎಂದರೆ, ಆಧ್ಯಾತ್ಮಿಕತೆ ಎಂಬ ಜನಾಂಗದ ಜೀವಸೆಲೆಯನ್ನು ಪೂರ್ತಿಯಾಗಿ ಉಳ್ಳವನು ; ಇನ್ನೊಬ್ಬನ ವಿಚಾರ ಎಂದರೆ, ಆಧ್ಯಾತ್ಮಿಕತೆಯೆಂಬ ಜೀವಸೆಲೆಯ ಮೇಲೆ ಯಾವ ಹಿಡಿತವೂ ಇಲ್ಲದೆ ಪಾಶ್ಚಾತ್ಯ ನಕಲಿ ಆಭರಣಗಳನ್ನು ಕೈತುಂಬ ತುಂಬಿಕೊಂಡವನು. ಇವರಲ್ಲಿ ಕಟ್ಟಾ ಸಂಪ್ರದಾಯನಿಷ್ಠನಾದ ಮೊದಲನೆಯವನನ್ನು ಆರಿಸಿಕೊಳ್ಳಬೇಕು ಎಂದು ಎಲ್ಲರೂ ಒಪ್ಪುವರು ಎಂಬುದರಲ್ಲಿ ನನಗೆ ಸಂದೇಹವಿಲ್ಲ. ಏಕೆಂದರೆ, ಅವನ ವಿಷಯದಲ್ಲಿ ಸ್ವಲ್ಪವಾದರೂ ಭರವಸೆಯುಂಟು. ಅವನಲ್ಲಿ ಬದುಕಿಗಾಗಿ ಹಿಡಿದಿಟ್ಟುಕೊಳ್ಳಲು ಏನೋ ಒಂದು, ರಾಷ್ಟ್ರೀಯ ವಿಷಯವಿದೆ. ಆದ್ದರಿಂದ ಅವನು ಬದುಕುತ್ತಾನೆ. ಇನ್ನೊಬ್ಬನಿದ್ದಾನಲ್ಲ, ಅವನು ಸಾಯುತ್ತಾನೆ. ವ್ಯಕ್ತಿಗಳ ಸಂಬಂಧದಲ್ಲಿ ಹೇಗೋ ಹಾಗೆ ಜೀವನಧ್ಯೇಯದ ವಿಷಯದಲ್ಲಿಯೂ ಅಡ್ಡಿ ಅಡಚಣೆಗಳಿಲ್ಲದಿದ್ದರೆ, ವೈಯಕ್ತಿಕ ಜೀವನದ ಮುಖ್ಯಕಾರ್ಯ ಕಣ್ಣೆದುರಿದ್ದರೆ, ಬೇರೆ ಕಾರ್ಯಗಳ ಸಂಬಂಧದಲ್ಲಿ ಬೀಳುವ ಯಾವುದೇ ಪೆಟ್ಟು ಗಂಭೀರವಾದ್ದೇನೂ ಅಲ್ಲ ; ಅದು ವ್ಯಕ್ತಿಯನ್ನೇನೂ ಕೊಲ್ಲುವುದಿಲ್ಲ. ಎಲ್ಲಿಯವರೆಗೆ ನಮ್ಮ ಬದುಕಿನ ಮುಖ್ಯಕಾರ್ಯಕ್ಕೆ ಅಡಚಣೆಯಿಲ್ಲವೋ ಅಲ್ಲಿಯವರೆಗೆ ನಮ್ಮ ರಾಷ್ಟ್ರವನ್ನು ಹಾಳುಮಾಡಲಾಗದು. ಆದರೆ, ಗಮನವಿಟ್ಟು ಕೇಳಿ : ಪಾಶ್ಚಾತ್ಯ ದೇಶಗಳ ಪ್ರಾಪಂಚಿಕ ಆಸಕ್ತಿಯ ನಾಗರಿಕತೆಯತ್ತ ಸಾಗಲು ನೀವೇನಾದರೂ ಆ ಆಧ್ಯಾತ್ಮಿಕತೆಯನ್ನು ಕೈಬಿಟ್ಟರೆ, ಅದರ ಪರಿಣಾಮ, ಇನ್ನು ಮೂರು ಸಂತತಿಗೆ ನಿಮ್ಮ ಜನಾಂಗ ಅಳಿದುಹೋಗುತ್ತದೆ. ಏಕೆಂದರೆ, ರಾಷ್ಟ್ರಸೌಧದ ನಿರ್ಮಾಣಕ್ಕೆ ಅಸ್ತಿಭಾರವಾದ ರಾಷ್ಟ್ರದ ಬೆನ್ನೆಲುಬು ಮುರಿದಿರುತ್ತದೆ. ಅದರ ಪರಿಣಾಮ ಸರ್ವತ್ರ ಸರ್ವನಾಶ.

ಆದ್ದರಿಂದ ನನ್ನ ಗೆಳೆಯರೇ, ಇದರಿಂದ ಪಾರಾಗುವುದು ಹೇಗೆ ಎಂದರೆ: ಮೊದಲು, ಎಲ್ಲಕ್ಕಿಂತ ಮೊದಲು ಆಧ್ಯಾತ್ಮಿಕತೆಯ ಮೇಲೆ ಒಂದು ಬಲವಾದ ಹಿಡಿತ ಇಟ್ಟುಕೊಳ್ಳುವುದು. ಅದು ನಮ್ಮ ಪುರಾತನ ಪೂರ್ವಿಕರಿಂದ ನಮಗೆ ದತ್ತವಾಗಿರುವ ಬೆಲೆಕಟ್ಟಲಾಗದ ಒಂದು ಬಳುವಳಿ. ಬಹು ದೊಡ್ಡ ದೊರೆಗಳು ತಮ್ಮ ಪೀಳಿಗೆಯನ್ನು ಹಿಂದಿನ ದೊರೆಗಳಿಂದ, ಹಳೆಯ ಕೋಟೆಮನೆಗಳಲ್ಲಿ ವಾಸಿಸುತ್ತ ಬಡಪ್ರಯಾಣಿಕರನ್ನು ದೋಚುತ್ತ ಇದ್ದ ಸುಲಿಗೆಕೋರರಿಂದ ಗುರುತಿಸುವ ಪ್ರಯತ್ನ ಮಾಡದೆ, ಕಾಡುಗಳಲ್ಲಿ ವಾಸಿಸುತ್ತಿದ್ದ ಅರ್ಧನಗ್ನ ಋಷಿಮುನಿಗಳಿಂದ ಗುರುತಿಸುವ ಒಂದು ದೇಶವಿರುವುದನ್ನು ನೀವು ಎಂದಾದರೂ ಕೇಳಿದ್ದೀರಾ? ಅಂಥ ಪ್ರದೇಶವಿರುವುದನ್ನು ನೀವು ಎಂದಾದರೂ ಕೇಳಿ ಬಲ್ಲಿರಾ? ಇದೇ ಆ ಭೂಮಿ. ಬೇರೆ ದೇಶಗಳಲ್ಲಿ ದೊಡ್ಡ ಧರ್ಮಗುರುಗಳು ತಮ್ಮ ಪೀಳಿಗೆಯನ್ನು ಯಾವುದೋ ಒಬ್ಬ ದೊರೆಯಿಂದ ಗುರುತಿಸಲು ಪ್ರಯತ್ನಿಸಿದರೆ, ಈ ನಾಡಿನಲ್ಲಿ ದೊಡ್ಡ ದೊರೆಗಳು ತಮ್ಮ ಪೀಳಿಗೆಯನ್ನು ಯಾವನೋ ಒಬ್ಬ ಪ್ರಾಚೀನ ಕಾಲದ

ಧರ್ಮಗುರುವಿನಿಂದ ಗುರುತಿಸುತ್ತಾರೆ. ಆದ್ದರಿಂದ ನೀವು ಆಧ್ಯಾತ್ಮಿಕತೆಯನ್ನು ನಂಬುವಿರೋ ಬಿಡುವಿರೋ, ರಾಷ್ಟ್ರಜೀವನದ ಸಲುವಾಗಿ ಆಧ್ಯಾತ್ಮಿಕತೆಯ ಮೇಲೆ ಹಿಡಿತವಿಟ್ಟುಕೊಂಡಿರಬೇಕು, ಅದನ್ನು ಉಳಿಸಿಕೊಳ್ಳಬೇಕು. ಆಮೇಲೆ ಬೇಕಾದರೆ ಇನ್ನೊಂದು ಕೈಚಾಚಿ, ಬೇರೆ ಜನಾಂಗಗಳಿಂದ ನಿಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಲಾಭ ಪಡೆಯಿರಿ. ಆದರೆ ಪ್ರತಿಯೊಂದೂ ಆ ಒಂದು ಜೀವನಧ್ಯೇಯಕ್ಕೆ ಅಧೀನವಾಗಿರಬೇಕು. ಹಾಗಿದ್ದರೆ, ಅದರಿಂದ ಒಂದು ಆಶ್ಚರ್ಯಕರ, ವೈಭವಪೂರ್ಣ ಭವಿಷ್ಯಭಾರತ ಆವಿರ್ಭವಿಸುತ್ತದೆ – ನಾನು ಖಂಡಿತವಾಗಿ ಹೇಳಬಲ್ಲೆ, ಅದು ಬರುತ್ತಿದೆ – ಹಿಂದೆ ಎಂದಾದರೂ ಇದ್ದುದಕ್ಕಿಂತ ಮಹತ್ತರವಾದ ಭಾರತ. ಪ್ರಾಚೀನ ಕಾಲದ ಋಷಿ ಮುನಿಗಳಿಗಿಂತ ದೊಡ್ಡವರಾದ ಋಷಿಮುನಿಗಳು ಹುಟ್ಟಿಕೊಳ್ಳುತ್ತಾರೆ. ನಿಮ್ಮ ಪೂರ್ವಿಕರು ತೃಪ್ತಿಗೊಳ್ಳುವುದು ಮಾತ್ರವಲ್ಲ, ನಾನು ಖಂಡಿತವಾಗಿ ಹೇಳಬಲ್ಲೆ, ಬೇರೆ ಲೋಕಗಳಲ್ಲಿ ತಮ್ಮ ನೆಲೆಗಳಲ್ಲಿದ್ದುಕೊಂಡೇ ಕೆಳಗೆ ನೋಡುತ್ತ ತಮ್ಮ ಸಂತತಿಯವರು ಇಷ್ಟು ಮಹಿಮಾನ್ವಿತರಾಗಿ, ಇಷ್ಟು ದೊಡ್ಡವರಾಗಿ ಇರುವುದನ್ನು ನೋಡಿ ಹೆಮ್ಮೆಪಡುವರು.

ನನ್ನ ಸೋದರರೇ, ನಾವೆಲ್ಲ ಚೆನ್ನಾಗಿ ದುಡಿಯೋಣ. ಇದು ನಿದ್ದೆಗೆ ಸಮಯವಲ್ಲ. ನಮ್ಮ ದುಡಿಮೆಯ ಮೇಲೆ ಭವಿಷ್ಯದ ಭಾರತದ ಅಭ್ಯುದಯ ಆಧಾರಪಟ್ಟಿದೆ. ಅದು ನಮಗಾಗಿ ಕಾಯುತ್ತ ಸಿದ್ಧವಾಗಿದೆ. ಈಗ ಅದು ನಿದ್ದೆಯಲ್ಲಿದೆ, ಮಾತ್ರ. ಏಳಿ, ಎಚ್ಚರಗೊಳ್ಳಿ. ನಮ್ಮ ಈ ಮಾತೃಭೂಮಿ, ಭರತಮಾತೆ ನವತಾರುಣ್ಯ ಪಡೆದು, ಎಂದಿಗಿಂತಲೂ ಹೆಚ್ಚಾಗಿ ಯಶೋವಂತವಾಗಿ ಇಲ್ಲಿ, ತನ್ನ ಶಾಶ್ವತ ಸಿಂಹಾಸನದಲ್ಲಿ ಆಸೀನಳಾಗುವುದನ್ನು ನೋಡಿ. ನಮ್ಮ ಈ ಮಾತೃಭೂಮಿಯಲ್ಲಿ ದೇವರ ಕಲ್ಪನೆ ಪೂರ್ಣವಾಗಿ ಬೆಳೆದ ಹಾಗೆ ಬೇರೆ ಎಲ್ಲಿಯೂ ಪೂರ್ಣವಾಗಿ ಬೆಳೆದದ್ದು ಇಲ್ಲ. ಏಕೆಂದರೆ, ಇದೇ ದೈವತ್ವದ ಕಲ್ಪನೆ ಬೇರೆಲ್ಲಿಯೂ ಯಾವಾಗಲೂ ಇರಲಿಲ್ಲ. ಬಹುಶಃ ನನ್ನ ಈ ದೃಢವಾದ ಉಕ್ತಿ ಕೇಳಿ ನಿಮಗೆ ಆಶ್ಚರ್ಯವಾಗಿರಬೇಕು. ಆದರೆ ನಮ್ಮಲ್ಲಿ ಕಾಣುವುದಕ್ಕೆ ಸದೃಶವಾದ ದೈವತ್ವದ ಕಲ್ಪನೆಯನ್ನು ಬೇರೆ ಯಾವುದೇ ಗ್ರಂಥದಲ್ಲಿ ಹೇಳಿದ್ದರೆ, ಅದನ್ನು ನನಗೆ ತೋರಿಸಿ. ಅಲ್ಲಿರುವುದು ಬುಡಕಟ್ಟಿನ ದೇವತೆಗಳು, ಯಹೂದ್ಯರ ದೇವತೆ, ಅರಬ್ಬರ ದೇವತೆ, ಇಂಥ ಇಂಥ ಜನಾಂಗಗಳ ದೇವತೆ. ಅವರ ದೇವರು ಬೇರೆ ಜನಾಂಗಗಳ ದೇವರೊಂದಿಗೆ ಹೋರಾಡುತ್ತಾರೆ. ಆದರೆ ಆ ಉಪಕಾರಿಯಾದ, ಅತಿಶಯ ಕಾರುಣ್ಯಪೂರ್ಣವಾದ ದೇವರು, ನಮ್ಮ ತಂದೆ, ನಮ್ಮ ತಾಯಿ, ನಮ್ಮ ಸ್ನೇಹಿತ, ನಮ್ಮ ಸ್ನೇಹಿತರ ಸ್ನೇಹಿತ, ನಮ್ಮ ಆತ್ಮಗಳ ಆತ್ಮ ಆದ ದೇವರು, ಇಲ್ಲಿ, ಇಲ್ಲಿ ಮಾತ್ರವೇ ಇರುವುದು. ಯಾವಾತನು ಶೈವರಿಗೆ ಶಿವನೋ, ವೈಷ್ಣವರಿಗೆ ವಿಷ್ಣುವೋ, ಕರ್ಮಿಗಳಿಗೆ (ಮೀಮಾಂಸಕರು) ಕರ್ಮವೋ, ಬೌದ್ಧರಿಗೆ ಬುದ್ಧನೋ, ಜೈನರಿಗೆ ಜಿನನೋ, ಕ್ರೈಸ್ತರಿಗೂ ಯಹೂದ್ಯರಿಗೂ



ಜೆಹೋವನೋ, ಮಹಮದೀಯರಿಗೆ ಅಲ್ಲಾನೋ, ಪ್ರತಿಯೊಂದೂ ಪಂಗಡಕ್ಕೆ ಅದರದರ ಸ್ವಾಮಿಯೋ ವೇದಾಂತಿಗಳಿಗೆ ಬ್ರಹ್ಮವೋ ಅವನು ನಮ್ಮನ್ನು ಅನುಗ್ರಹಿಸಲಿ, ಅವನು ನಮಗೆ ನೆರವಾಗಲಿ, ಅವನು ನಮಗೆ ಪ್ರಾಣವನ್ನು ನೀಡಲಿ, ನಮ್ಮಲ್ಲಿ ಶಕ್ತಿಯನ್ನು ತುಂಬಲಿ – ಈ ಭಾವನೆಯನ್ನು, ನಡೆವಳಿಕೆಯನ್ನು ತರುವ ಸಲುವಾಗಿ. ನಾವು ಕೇಳಿದ್ದು, ಓದಿದ್ದು ನಮಗೆ ಆಹಾರವಾಗಲಿ. ಅದು ನಮ್ಮಲ್ಲಿ ಪ್ರಾಣವನ್ನು ತುಂಬಲಿ, ಶಕ್ತಿಯನ್ನು ತುಂಬಲಿ – ಪರಸ್ಪರವಾಗಿ ಸಹಾಯವಾಗಲು. ನಾವು, ಗುರು ಶಿಷ್ಯರು, ಪರಸ್ಪರವಾಗಿ ಈರ್ಷ್ಯೆ ಇಲ್ಲದಿರುವಂತಾಗಲಿ. ಶಾಂತಿ, ಶಾಂತಿ, ಶಾಂತಿ– ಹರಿಯ ಹೆಸರಿನಲ್ಲಿ.

* * * *

## ೧೦. ಮರೆಯಬೇಡ

ಓ ಭಾರತವೇ! ಸ್ತ್ರೀತ್ವದ ನಿನ್ನ ಆದರ್ಶವೆಂದರೆ ಸೀತೆ ಸಾವಿತ್ರಿ ದಮಯಂತಿಯರು ಎಂಬುದನ್ನು ಮರೆಯಬೇಡ.

ನೀನು ಪೂಜಿಸುವ ದೇವರು ಎಂದರೆ ತಪಸ್ವಿಗಳ ತಪಸ್ವಿಯೂ ಸರ್ವಸಂಗ ಪರಿತ್ಯಾಗಿಯೂ ಆದ ಉಮಾಪತಿ ಶಂಕರ ಎಂಬುದನ್ನು ಮರೆಯಬೇಡ.

ನಿನ್ನ ಮದುವೆ, ನಿನ್ನ ಸಂಪತ್ತು, ನಿನ್ನ ಬದುಕು ಇಂದ್ರಿಯ ಸುಖಭೋಗಗಳಿಗಾಗಿ ಅಲ್ಲ, ನಿನ್ನ ವೈಯಕ್ತಿಕ ಸುಖಸಂತೋಷಗಳಿಗಾಗಿ ಅಲ್ಲ ಎಂಬುದನ್ನು ಮರೆಯಬೇಡ.

ನೀನು ಹುಟ್ಟಿರುವುದು ಆ ತಾಯಿಯ ಯಜ್ಞವೇದಿಯಲ್ಲಿ ಆಹುತಿಗಾಗಿ ಎಂಬುದನ್ನು ಮರೆಯಬೇಡ.

ನಿನ್ನ ಸಾಮಾಜಿಕ ವ್ಯವಸ್ಥೆ ಎನ್ನುವುದು ಆ ಅನಂತ ವಿಶ್ವಸಾಮಾನ್ಯ ಮಾತೃತ್ವದ ಪ್ರತಿಚ್ಛಾಯೆಯಲ್ಲದೆ ಅನ್ಯಥಾ ಅಲ್ಲ ಎಂಬುದನ್ನು ಮರೆಯಬೇಡ. ಹೀನಜಾತಿಯವರು, ಅಜ್ಞರು, ದರಿದ್ರರು, ನಿರಕ್ಷರರು, ಚಪ್ಪಲಿ ಹೊಲಿಯುವವನು, ಕಸ ಗುಡಿಸುವವನು ಈ ಎಲ್ಲರೂ ನಿನ್ನ ರಕ್ತ ಮಾಂಸಗಳೇ, ನಿನ್ನ ಸೋದರರೇ ಎನ್ನುವುದನ್ನು ಮರೆಯಬೇಡ.

ಎಲೈ ಧೀರನೇ, ನಿರ್ಭೀತನಾಗು, ಧೈರ್ಯವಂತನಾಗು. ನೀನು ಭಾರತೀಯನೆಂದು ಹೆಮ್ಮೆಪಡು. ಅಲ್ಲದೆ ಗರ್ವದಿಂದ ಘೋಷಿಸು : "ನಾನು ಒಬ್ಬ ಭಾರತೀಯ, ಪ್ರತಿಯೊಬ್ಬ ಭಾರತೀಯನೂ ನನ್ನ ಸಹೋದರ." ಹೇಳು : "ಅಜ್ಞನಾದ ಭಾರತೀಯ, ಬಡವನಾದ ನಿರ್ಗತಿಕನಾದ ಭಾರತೀಯ, ಬ್ರಾಹ್ಮಣನಾದ ಭಾರತೀಯ, ಅಂತ್ಯಜನಾದ ಭಾರತೀಯ ಎಲ್ಲರೂ ನನ್ನ ಸಹೋದರರು. ನೀನು ಕೂಡ ಕೌಪೀನಧಾರಿಯಾಗು, ನಿನ್ನ ಉಚ್ಚಕಂಠದಲ್ಲಿ ಗರ್ವದಿಂದ ಘೋಷಿಸು : ಭಾರತೀಯನು ನನ್ನ ಸಹೋದರ, ಭಾರತೀಯನು ನನ್ನ ಬದುಕು, ಭಾರತೀಯ ದೇವ ದೇವಿಯರು ನನ್ನ ದೇವರು, ಭಾರತೀಯ ಸಮಾಜ ನನ್ನ ಬಾಲ್ಯದ ತೊಟ್ಟಿಲು, ನನ್ನ ಯೌವನದ ಕ್ರೀಡಾವನ, ಪವಿತ್ರವಾದ ಸ್ವರ್ಗ, ವೃದ್ಧಾಪ್ಯದ ವಾರಣಾಸಿ." ಸಹೋದರ, ಹೇಳು : "ಭಾರತದ ಮಣ್ಣು ನನಗೆ ಅತ್ಯುನ್ನತ ದೇವಲೋಕ, ಭಾರತದ ಒಳಿತು ನನ್ನ ಒಳಿತು. ಇದನ್ನು ಮತ್ತೆ ಮತ್ತೆ ಹೇಳು. ಅಹರ್ನಿಶಿ ಪ್ರಾರ್ಥಿಸು : "ಎಲೈ ಗೌರೀಧವ, ಓ ವಿಶ್ವಮಾತೆ,



ನನಗೆ ಪುರುಷತ್ವವನ್ನು ಅನುಗ್ರಹಿಸು! ಓ ಶಕ್ತಿಯ ದೇವತೆಯೇ, ನನ್ನ ದೌರ್ಬಲ್ಯವನ್ನು ತೆಗೆದುಹಾಕು, ನನ್ನ ಹೇಡಿತನವನ್ನು ತೊಲಗಿಸು, ನನ್ನನ್ನು ಗಂಡುಸಾಗಿ ಮಾಡು!"

* * * *